RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 94 ಪುಟ: 06 ಶನಿವಾರ 08-03-2025

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

Mail:mussanje2010@gmail.com www.mussanjenews.com

ಬೆಂಗಳೂರು | ಬೆಂ.ಗ್ರಾಮಾಂತರ ತುಮಕೂರು ಚಿತ್ರದುರ್ಗ ಮೈಸೂರು ಮಂಡ್ಯ ರಾಮನಗರ ಚಾ.ನಗರ ಹಾಸನ ಚಿಕ್ಕಬಳ್ಳಾಪುರ ಕೋಲಾರ

Honourary Editor: Venkatesh



ಟೀಮ್ ಇಂಡಿಯಾ ವಿರುದ್ಧ ನ್ಯೂಝಿಲೆಂಡ್ ಗೆಲ್ಲಲಿ

ಬಾಲಿವುಡ್‌ನ ಕರಾಳ ಮುಖ ತೆರೆದಿಟ್ಟ: ಎರಿಕಾ

ವಿವಾಹ ಆಗದೆ ಗರ್ಭ ಧರಿಸಿದ್ದ ಕುಬ್ರಾ ↘ ಪುಟ 6

# ಸಿಬಿಐ ಸುಳಿಯಲ್ಲಿ ರನ್ಯಾ

## ಅಕ್ರಮ ಚಿನ್ನ ಸಾಗಾಣಿಕೆ: ನಟಿ ರನ್ಯಾ ರಾವ್ ವಿರುದ್ಧ ಪ್ರಕರಣ ದಾಖಲಿಸಿದ ಸಿಬಿಐ

**ಬೆಂಗಳೂರು:** ಅಕ್ರಮ ಚಿನ್ನ ಸಾಗಾಣಿಕೆ ಪ್ರಕರಣದಲ್ಲಿ ಬಂಧಿತಳಾಗಿರುವ ಮಾಣಿಕ್ಯ ಚಿತ್ರದ ನಾಯಕಿ ರನ್ಯಾ ರಾವ್ ವಿರುದ್ಧದ ಕಾನೂನು ಕುಣಿಕೆ ದಿನೆ ದಿನೇ ಬಿಗಿಗೊಳ್ಳುತ್ತಿದೆ.

ಕಳೆದ ನಾಲ್ಕೈದು ದಿನಗಳ ಹಿಂದೆ ದುಬೈನಿಂದ ಚಿನ್ನ ಸಾಗಿಸುತ್ತಿದ್ದ ವೇಳೆ ಬೆಂಗಳೂರಿನ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕಸ್ಟಮ್ಸ್ ಅಧಿಕಾರಿಗಳಿಗೆ ಸಿಕ್ಕಿಬಿದ್ದಿದ್ದ ರನ್ಯಾ ರಾವ್ ಅವರನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿತ್ತು.

ವಿಚಾರಣೆ ನಡೆಸಿದ ಡಿಆರ್‌ಐ ಅಧಿಕಾರಿಗಳ ತಂಡ ಆಕೆಯ ಬಳಿ ಇದ್ದ ಚಿನ್ನ ಹಾಗೂ ನಗದು ಸೇರಿದಂತೆ 20 ಕೋಟಿಗೂ ಹೆಚ್ಚು ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿದ್ದರು.

ನಂತರ ಆಕೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ ಮತ್ತೆ ಡಿಆರ್‌ಐ ಅಧಿಕಾರಿಗಳು ಹೆಚ್ಚಿನ ವಿಚಾರಣೆಗೆ ವಶಕ್ಕೆ ಪಡೆದುಕೊಂಡಿದ್ದರು. ಈ ವೇಳೆ ಆಕೆಯ ಬಳಿ ಇದ್ದ ಲ್ಯಾಪ್‌ಟಾಪ್ ಮತ್ತು ಮೊಬೈಲ್‌ಗಳನ್ನು ವಶಪಡಿಸಿಕೊಂಡು ಆಕೆಯೊಂದಿಗೆ ಸ್ಮಗ್ಲಿಂಗ್ ಜಾಲದಲ್ಲಿ ಕಾರ್ಯನಿರ್ವಹಿಸುತ್ತಿರುವವರ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿತ್ತು.

ಈಕೆ ವಿಚಾರಣೆ ವೇಳೆ ತಾನು ರಿಯಲ್ ಎಸ್ಟೇಟ್ ನಡೆಸುತ್ತಿದ್ದು, ಈ ನಡುವೆ ಚಿನ್ನದ ವ್ಯವಹಾರ ಮಾಡುತ್ತಿರುವುದಾಗಿ ಒಪ್ಪಿಕೊಂಡಿದ್ದಳು. ಆದರೆ ಇದರ ಹಿಂದೆ ದೊಡ್ಡ ಜಾಲವೇ ಇರುವ ಶಂಕೆ ವ್ಯಕ್ತವಾದ ಹಿನ್ನೆಲೆಯಲ್ಲಿ ಸಿಬಿಐ ಎಂಟ್ರಿಯಾಗಿದೆ,

ಡಿಆರ್‌ಐ ಅಧಿಕಾರಿಗಳ ಮಾಹಿತಿ ಆಧರಿಸಿ ಕೇಂದ್ರ ತನಿಖಾ ದಳ(ಸಿಬಿಐ) ಸ್ವಯಂ ಪ್ರಕರಣ ದಾಖಲಿಸಿಕೊಂಡು ತನಿಖೆ ಆರಂಭಿಸಿದೆ.

ಈಕೆ ವ್ಯವಹಾರ ನಡೆಸುತ್ತಿದ್ದ ಜಾಗಗಳಲ್ಲಿ ತೀವ್ರ ತಲಾಷ್ ಆರಂಭಿಸಿರುವ ಅಧಿಕಾರಿಗಳ ತಂಡ ಮುಂಬೈ ಹಾಗೂ ಬೆಂಗಳೂರಿನಲ್ಲಿ ತನಿಖೆಯನ್ನು ಚುರುಕುಗೊಳಿಸಿದೆ.



ರಾಜ್ಯದ ಡಿಜಿಪಿಯೊಬ್ಬರ ಮಲಮಗಳು ಎನ್ನಲಾದ ನಟಿ ರನ್ಯಾರಾವ್‌ಗೆ ಅಂತಾರಾಷ್ಟ್ರೀಯ ಕುಖ್ಯಾತ ಚಿನ್ನ ಕಳ್ಳಸಾಗಾಣಿಕೆದಾರನ ಸಂಪರ್ಕವಿರಬಹುದು ಎಂದು ಶಂಕಿಸಿರುವ ಡಿಆರ್‌ಐ ಅಧಿಕಾರಿಗಳು ಆತನಿಗಾಗಿ ಶೋಧ ನಡೆಸುತ್ತಿದ್ದಾರೆ.


ಆಕೆಯ ಮೊಬೈಲ್ ಸಂಪರ್ಕದ ಬಗ್ಗೆ ಜಾಲಾಡಿರುವ ಡಿಆರ್‌ಐ ಅಧಿಕಾರಿಗಳು ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದು, ರನ್ಯಾ ಅವರ ಸಂಪರ್ಕದಲ್ಲಿ ಯಾರ್ಯಾರಿದ್ದಾರೆ ಎಂಬುದರ ಪಟ್ಟಿಯನ್ನು ಸಿದ್ಧಪಡಿಸಿಕೊಂಡಿದ್ದಾರೆ. ಸದ್ಯದಲ್ಲೇ ಅವರೆಲ್ಲರನ್ನೂ ಸಹ ವಿಚಾರಣೆಗೊಳಪಡಿಸುವ ಸಾಧ್ಯತೆ ಇದೆ.

ಇದುವರೆಗಿನ ತನಿಖೆ ಪ್ರಕಾರ, ರನ್ಯಾರಾವ್ ಚಿನ್ನ ಕಳ್ಳಸಾಗಾಣಿಕೆಯಲ್ಲಿ ಮಧ್ಯವರ್ತಿ ಎಂಬುದು ಗೊತ್ತಾಗಿದೆ. ಈಕೆ ವಿದೇಶದಿಂದ ಬೆಂಗಳೂರಿಗೆ ಚಿನ್ನವನ್ನು ಕಳ್ಳಸಾಗಣೆ ಮೂಲಕ ತಂದುಕೊಟ್ಟರೆ ಒಂದು ಕೆಜಿಗೆ ಒಂದು ಲಕ್ಷ ರೂ. ಕಮಿಷನ್ ಪಡೆಯುತ್ತಿದ್ದರೆಂಬುದು ತನಿಖೆಯಿಂದ ಗೊತ್ತಾಗಿದೆ.

ಈಕೆ ಕಳೆದ ಒಂದು ವರ್ಷದಿಂದ ನಿರಂತರವಾಗಿ ದುಬೈ ಹಾಗೂ ಮಲೇಷಿಯಾಗೆ ಹೋಗಿದ್ದು, 30ಕ್ಕೂ ಹೆಚ್ಚು ಬಾರಿ ದುಬೈಗೆ ಹೋಗಿ ಬಂದಿರುವುದನ್ನು ಡಿಆರ್‌ಐ ಅಧಿಕಾರಿಗಳು ಪತ್ತೆಹಚ್ಚಿದ್ದಾರೆ.

ಆದರೆ, ದುಬೈನಲ್ಲಿ ಈಕೆಯ ಸಂಬಂಧಿ ಯಾರೂ ಇಲ್ಲ. ಅಲ್ಲದೆ, ಈಕೆಗೆ ಸೇರಿದ ಯಾವುದೇ ಕಂಪೆನಿ ಅಥವಾ ಉದ್ಯಮವೂ ಇಲ್ಲ. ಆದರೂ ಸಹ ಈಕೆ ಅಷ್ಟೊಂದು ಬಾರಿ ದುಬೈಗೆ ಏಕೆ ಹೋಗಿಬರುತ್ತಿದ್ದರೆಂಬ ಅನುಮಾನ ಡಿಆರ್‌ಐ ಅಧಿಕಾರಿಗಳಿಗೆ ಬಂದಿದೆ.

ಪ್ರಭಾವಿ ವ್ಯಕ್ತಿಗಳ ಜೊತೆ ಸಂಪರ್ಕ ಇರುವ ಸಾಧ್ಯತೆ ಇದೆ. ಹಾಗಾಗಿಯೇ ಅವರು ಚಿನ್ನ ಕಳ್ಳ ಸಾಗಾಣಿಕೆ ವೇಳೆ ಹಲವು ಬಾರಿ ಭದ್ರತಾ ತಪಾಸಣೆಯಿಂದ ಎಸ್ಕೇಪ್ ಆಗಿರುವ ಸಾಧ್ಯತೆ ಇದೆ. ಈ ಪ್ರಕರಣದಲ್ಲಿ ಇನ್ನೂ ಯಾರೆಲ್ಲ ಶಾಮೀಲು ಆಗಿದ್ದಾರೆ ಎಂಬುದನ್ನು ತಿಳಿಯಲು ಡಿಆರ್‌ಐ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರೆ.





**ಜೆಡಿಎಸ್ ಪಕ್ಷದ ಕಚೇರಿಯಲ್ಲಿ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಹಿರಿಯ ಲೇಖಕಿ ಶ್ರೀಮತಿ ಪ್ರತಿಭಾ ನಂದಕುಮಾರ್ ಅವರು ಉದ್ಘಾಟಿಸಿದರು. ಮಾಜಿ ಪ್ರಧಾನಿ ಹೆಚ್.ಡಿ ದೇವೇಗೌಡರು, ಶಾಸಕಿ ಅನಿತಾ ಕುಮಾರಸ್ವಾಮಿ, ಯುವ ಜನತಾದಳ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ರಾಜ್ಯ ಮಹಿಳಾ ಅಧ್ಯಕ್ಷೆ ರಶ್ಮಿ ರಾಮೇಗೌಡ ಅವರು ಸೇರಿದಂತೆ ಅನೇಕ ಮಹಿಳಾ ನಾಯಕರು, ಕಾರ್ಯಕರ್ತರು ಉಪಸ್ಥಿತರಿದ್ದರು.**

## ವೆಸ್ಟ್ ಬ್ಯಾಂಕ್‌ನಲ್ಲಿದ್ದ 10 ಭಾರತೀಯ ಕಾರ್ಮಿಕರು ಇಸ್ರೇಲ್‌ಗೆ



**ನವದೆಹಲಿ:** ವೆಸ್ಟ್ ಬ್ಯಾಂಕ್‌ನಲ್ಲಿ ಕಾಣೆಯಾಗಿದ್ದ 10 ಮಂದಿ ಭಾರತೀಯರನ್ನು ಇಸ್ರೇಲ್ಗೆ ಸುರಕ್ಷಿತವಾಗಿ ಕರೆತರಲಾಗಿದೆ ಎಂದು ವಿದೇಶಾಂಗ ಇಲಾಖೆ ಸಚಿವಾಲಯ ತಿಳಿಸಿದೆ. ಈ ಕುರಿತು ಮಾಹಿತಿ ನೀಡಿರುವ ವಿದೇಶಾಂಗ ಸಚಿವಾಲಯದ ಪುಟ 2

## ಮಹಿಳಾ ದಿನಕ್ಕೆ ಪ್ರಧಾನಿ ಶುಭಾಶಯ

**ನವದೆಹಲಿ:** ಅಂತಾರಾಷ್ಟ್ರೀಯ ಮಹಿಳಾ ದಿನದ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಅವರು ಮಹಿಳೆಯರಿಗೆ ಶುಭಾಶಯವನ್ನು ತಿಳಿಸಿದ್ದಾರೆ.

ಮಹಿಳಾ ದಿನದ ಅಂಗವಾಗಿ ಅವರು ತಮ್ಮ ಸಾಮಾಜಿಕ ಜಾಲತಾಣವನ್ನು ಶುಕ್ರವಾರ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರಿಗೆ ಹಸ್ತಾಂತರ ಮಾಡಿ, ಮಹಿಳಾ ಶಕ್ತಿಗೆ ಸಮರ್ಪಿಸಲಿದ್ದಾರೆ.

"ಮಹಿಳಾ ದಿನದಂದು ನಾವು ನಮ್ಮ ನಾರಿ ಶಕ್ತಿಗೆ ನಮಸ್ಕರಿಸುತ್ತೇವೆ. ನಮ್ಮ ಸರ್ಕಾರವು ಸದಾ ಮಹಿಳೆಯರ ಸಬಲೀಕರಣಕ್ಕಾಗಿ ಕೆಲಸ ಮಾಡಿದ್ದು, ನಮ್ಮ ಯೋಜನೆ ಮತ್ತು ಕಾರ್ಯಕ್ರಮಗಳಲ್ಲಿ ಇದು ಪ್ರತಿಫಲಿಸುತ್ತಿದೆ. ನೀಡಿದ ಭರವಸೆಯಂತೆ ಇಂದು ನನ್ನ ಸಾಮಾಜಿಕ ಜಾಲತಾಣದಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿ ಛಾಪು ಮೂಡಿಸಿರುವ ಮಹಿಳೆಯರಿಂದ ತುಂಬಿರುತ್ತದೆ" ಎಂದಿದ್ದಾರೆ.

ವಿಡಿಯೋ ಸಂದೇಶವನ್ನು ಹಂಚಿಕೊಂಡಿರುವ ಪ್ರಧಾನಿ, ಭಾರತದ ಸಂಪ್ರದಾಯಗಳಲ್ಲಿ ಮಹಿಳೆಯರ ಗೌರವ ಮತ್ತು ಘನತೆಗೆ ಯಾವಾಗಲೂ ಉನ್ನತ ಸ್ಥಾನ



ನೀಡಲಾಗಿದೆ ಎಂದು ತಿಳಿಸಿದರು.

"ಮಹಿಳೆಯರ ಬೆಳವಣಿಗೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುವ ದೇಶಗಳು ಮತ್ತು ಸಮುದಾಯಗಳು ವೇಗದಲ್ಲಿ ಪ್ರಗತಿ ಸಾಧಿಸುತ್ತವೆ. ಭಾರತದಲ್ಲೂ ಮಹಿಳಾ ನೇತೃತ್ವದ ಅಭಿವೃದ್ಧಿ ಅವಧಿ ಇದೆ. ನಮ್ಮ ಸರ್ಕಾರ ಮಹಿಳೆಯರಿಗೆ ಅನುಕೂಲವಾಗುವಂತಹ ಸರ್ಕಾರಿ ನೀತಿ ಮತ್ತು ಕಾನೂನನ್ನು ವಿನ್ಯಾಸ ಮಾಡಲು ಹೆಚ್ಚಿನ ಗಮನ ಹೊಂದಿದೆ. ವಿಕಸಿತ ಭಾರತಕ್ಕೆ ನಾರಿಶಕ್ತಿ ಪುಟ 2

## ಬಸ್‌ನಲ್ಲೇ ಮೆಕ್ಯಾನಿಕ್ ಆತ್ಮಹತ್ಯೆ

**ಬೆಳಗಾವಿ:** ಕೆಎಸ್‌ಆರ್‌ಟಿಸಿ ಮೆಕ್ಯಾನಿಕ್ ಒಬ್ಬರು ಬಸ್‌ನಲ್ಲೇ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿನ ಡಿಪೋವೊಂದರಲ್ಲಿ ನಡೆದಿದೆ.

ಬೆಳಗಾವಿಯ ಅಳ್ನಾವರ್ ಬಳಿ ಇರುವ ಡಿಪೋನಲ್ಲಿ ಕೇಶವ ಕಮದೋಡಿ (57) ಎಂಬುವವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಗರದ ಹಳೆ ಗಾಂಧಿನಗರದಲ್ಲಿ ವಾಸವಾಗಿದ್ದ ಅವರು ಈ ಡಿಪೋನಲ್ಲಿ ಬಸ್ ವಾಷಿಂಗ್ ಮತ್ತು ದುರಸ್ತಿ ಪುಟ 2

## ಹಳಿಗೆ ಬಿದ್ದ ಮರ: ತಪ್ಪಿದ ಅನಾಹುತ

**ಹಾಸನ:** ಬೃಹತ್ ಗಾತ್ರದ ಮರ ರೈಲ್ವೆ ಹಳಿಗೆ ಅಡ್ಡಲಾಗಿ ಉರುಳಿ ಬಿದಿದ್ದು, ಚಾಲಕನ ಸಮಯ ಪ್ರಜ್ಞೆಯಿಂದಾಗಿ ಸಂಭವಿಸಬಹುದಾದ ಭಾರೀ ಅನಾಹುತವೊಂದು ತಪ್ಪಿದಂತಾಗಿದೆ. ಹಾಸನ ಜಿಲ್ಲೆ ಹೊಳೆನರಸೀಪುರ ಪಟ್ಟಣದ ರೈಲು ನಿಲ್ದಾಣದ ಸಮೀಪ ಈ ಘಟನೆ ಸಂಭವಿಸಿದ್ದು, ರೈಲು ಬರುವ ಕೆಲವೇ ನಿಮಿಷಗಳ ಮುಂಚಿತವಾಗಿ ಮರ ಉರುಳಿ ಬಿದ್ದಿದೆ. ಶಿವಮೊಗ್ಗದಿಂದ–ಪುಟ 2

## ಪತ್ನಿ ಪರಾರಿ: ಪತಿ ಆತ್ಮಹತ್ಯೆ

ಹಾಸನ: ಪ್ರಿಯಕರನೊಂದಿಗೆ ಪತ್ನಿ ಪರಾರಿಯಾದ ಹಿನ್ನೆಲೆಯಲ್ಲಿಮನನೊಂದ ಪತಿ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹಾಸನ ಜಿಲ್ಲೆ ಹೊಳೆನರಸೀಪುರ ತಾಲ್ಲೂಕಿನ ಮಾಕವಳ್ಳಿ ಗ್ರಾಮದಲ್ಲಿ ನಡೆದಿದೆ. ಮೂಲತಃ ಅರಕಲಗೂಡು ತಾಲ್ಲೂಕಿನ ಪುಟ 2

## ಬಿಜೆಪಿಯವರು ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ?

**ಬೆಂಗಳೂರು:** "ಸಿಎಂ ಸಿದ್ದರಾಮಯ್ಯ ಅವರು ದೇಶಕ್ಕೆ ಮಾದರಿ ಬಜೆಟ್ ಮಂಡನೆ ಮಾಡಿದ್ದು, ಬಿಜೆಪಿಯವರು ಇದರ ಬಗ್ಗೆ ಸುಳ್ಳು ಹೇಳದೆ ಇನ್ನೇನು ಮಾಡಲು ಸಾಧ್ಯ?" ಎಂದು ತಿರುಗೇಟು ನೀಡಿದ್ದಾರೆ.



ಸದಾಶಿವನಗರ ನಿವಾಸದ ಬಳಿ ಮಾಧ್ಯಮಗಳ ಪ್ರಶ್ನೆಗಳಿಗೆ ಶಿವಕುಮಾರ್ ಅವರು ಶನಿವಾರ ಪ್ರತಿಕ್ರಿಯೆ ನೀಡಿದರು.

ಬಿಜೆಪಿಯವರು ಈ ಬಜೆಟ್ ಅನ್ನು ಹಲಾಲ್ ಬಜೆಟ್ ಎಂದು ಹೇಳುತ್ತಿದ್ದಾರೆ ಎಂದು ಕೇಳಿದಾಗ, "ಅವರು ಹೇಳಲಿ. ಪಾಪ ಅವರಾದರೂ ಏನು ಮಾಡುತ್ತಾರೆ. ಈ ರೀತಿ ಹೇಳುವುದು ಬಿಟ್ಟರೆ ಇನ್ನೇನು ಮಾಡಲು ಸಾಧ್ಯ? ನಮ್ಮ ಬಜೆಟ್ ಅನ್ನು ಅವರು ಕಣ್ಣಾರೆ ಓದಿದ್ದು, ಕಿವಿಯಾರೆ ಕೇಳಿದ್ದು, ಬಾಯಲ್ಲಿ ಇನ್ನೇನು ಹೇಳಲು ಸಾಧ್ಯ? ಕಣ್ಣು ಕಿವಿಯಲ್ಲಿ ಸುಳ್ಳು ಹೇಳಲು ಆಗುವುದಿಲ್ಲ. ಕೇವಲ ಬಾಯಲ್ಲಿ ಮಾತ್ರ ಸುಳ್ಳು ಹೇಳಲು ಸಾಧ್ಯ. ಹೀಗಾಗಿ ಹೇಳುತ್ತಿದ್ದಾರೆ" ಎಂದು ತಿರುಗೇಟು ಕೊಟ್ಟರು.

"ಸಿಎಂ ಸಿದ್ದರಾಮಯ್ಯ ಅವರು ಐತಿಹಾಸಿಕ ಹಾಗೂ ದೇಶಕ್ಕೆ ಮಾದರಿ ಬಜೆಟ್ ಕೊಟ್ಟಿದ್ದಾರೆ. ಮುಂದೆ ಬೇರೆ ಬೇರೆ ರಾಜ್ಯಗಳು ನಮ್ಮ ಬಜೆಟ್ ಪಾಲನೆ ಮಾಡಲಿವೆ. ಈ ಬಜೆಟ್ ಸಮಾಜದ ಎಲ್ಲಾ ವರ್ಗದವರಿಗಾಗಿ ಮಾಡಿರುವ ಬಜೆಟ್. ಈ ಬಜೆಟ್ ಮಂಡಿಸಿರುವ ಮುಖ್ಯಮಂತ್ರಿಗಳಿಗೆ ಹಾಗೂ ಇದಕ್ಕೆ ಸಹಕಾರ ಕೊಟ್ಟ ನನ್ನ ಸಹೋದ್ಯೋಗಿಗಳಿಗೆ ಧನ್ಯವಾದ ತಿಳಿಸುತ್ತೇನೆ" ಎಂದರು.

**ಬ್ರ್ಯಾಂಡ್ ಬೆಂಗಳೂರು ಜಾರಿ:** "ಬ್ರ್ಯಾಂಡ್ ಬೆಂಗಳೂರಿನ ಮಹತ್ವದ ಯೋಜನೆಗಳಿಗೆ ಅನುದಾನ ನೀಡಲಾಗಿದೆ. ರಾಜಧಾನಿಯಲ್ಲಿರುವ 1.40 ಕೋಟಿ ಜನರಿಗೆ ಅನುಕೂಲವಾಗಲಿದೆ. ಟನಲ್ ರಸ್ತೆ ಆಗಿಯೇ ಆಗುತ್ತೆ. ಮುಂಬರುವ ಎಲ್ಲಾ ಮೆಟ್ರೋ ಮಾರ್ಗಗಳಲ್ಲಿ ಡಬಲ್ ಡೆಕ್ಕರ್ ಮೇಲ್ಸೇತುವೆ ಮಾಡಲಾಗುವುದು ಪಾಲಿಕೆ ಹಾಗೂ ಬಿಎಂಆರ್ ಸಿಎಲ್ ಇದರ ವೆಚ್ಚವನ್ನು 50:50 ಅನುಪಾತದಲ್ಲಿ ಭರಿಸಲಿವೆ. ಇನ್ನು ರಾಜಕಾಲುವೆ ಅಕ್ಕಪಕ್ಕದಲ್ಲಿ 50 ಅಡಿ ಬಫರ್ ವಲಯದಲ್ಲಿ ಪುಟ 2

## ಬಜೆಟ್‌ನಲ್ಲಿ ಬರೀ ಕೇಂದ್ರ ಬಯ್ಯುವ ಕೆಲಸವಾಗಿದೆ

**ಹುಬ್ಬಳ್ಳಿ;** ಸಿದ್ದರಾಮಯ್ಯ ಮಂಡಿಸಿದ ಬಜೆಟ್ ನಲ್ಲಿ ಬರೀ ಕೇಂದ್ರ ಸರ್ಕಾರವನ್ನೇ ಬಯ್ಯುವ ಕೆಲಸವಾಗಿದೆ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಕಿಡಿಕಾರಿದ್ದಾರೆ.

ಮಾಧ್ಯಮಗಳ ಜೊತೆ ಮಾತನಾಡಿದ ಪ್ರಹ್ಲಾದ್ ಜೋಶಿ, ಕುಣಿಯಲು ಬಾರದಿದ್ರೆ ನೆಲ ಡೊಂಕು ಅನ್ನುವ ಹಾಗೆ ಎಲ್ಲಕ್ಕೂ ಕೇಂದ್ರದ ಮೇಳೆ ಬೊಟ್ಟು ಮಾಡುತ್ತಿದ್ದಾರೆ. ಇದು ಸಬ್ ಕಾ ಸಾಥ್ ಸಬ್ ಕಾ ವಿಕಾಸ್ ಅಲ್ಲ. ಪ್ರತಿಯೊಂದಕ್ಕೂ ಕೇಂದ್ರದ ಬಗ್ಗೆ ಮಾತನಾಡುತ್ತಾರೆ. ಕೋವಿಡ್ ನಂತರ ನಾವು ಬಡ್ಡಿ ರಹಿತ ಸಾಲ ಕೊಟ್ಟಿದ್ದೇವೆ. ಇವತ್ತು



ಕೇಂದ್ರದಲ್ಲಿ 50 ಲಕ್ಷ ಕೋಟಿ ಬಜೆಟ್ ತಲುಪಿದೆ. ಇವರ ಕಾಲದಲ್ಲಿ 15 ಲಕ್ಷ ಕೋಟಿ ಇತ್ತು. ನಾವು ಕರ್ನಾಟಕಕ್ಕೆ ಬಡ್ಡಿ ರಹಿತ ಸಾಲ ನೀಡಿದ್ದೇವೆ. ಸಿಎಂ ಇದನ್ನ ಅರ್ಥ ಮಾಡಿಕೊಳ್ಳಬೇಕು. ಸಿಎಂ ಸಿದ್ದರಾಮಯ್ಯ ಹೋಗುವ ಮುನ್ನ ಸತ್ಯ ಮಾತಾಡಿ ಎಂದು ವಾಗ್ದಾಳಿ ನಡೆಸಿದರು.

ಬಜೆಟ್ ಓದಿದ್ದು ಪಾಕ್ ನವರಿಗೂ ಅರ್ಥ ಆಗಿಲ್ಲ ಅನ್ನಿಸುತ್ತೆ. ಗುತ್ತಿಗೆಯಲ್ಲಿ ಮುಸ್ಲೀಮರಿಗೆ ಮೀಸಲಾತಿ ಏಕೆ..? ಉಳಿದ ಸಣ್ಣಪುಟ್ಟ ಗುತ್ತಿಗೆದಾರರು ಏನು ಮಾಡಬೇಕು ಎಂದು ಪ್ರಹ್ಲಾದ್ ಜೋಶಿ ಪ್ರಶ್ನಿಸಿದರು.

## ಇದೊಂದು ಕಮ್ಯುನಲ್ ಬಜೆಟ್: ರವಿ ಟೀಕೆ

**ಬೆಂಗಳೂರು;** ಶುಕ್ರವಾರ ಮಂಡಿಸಿದ ಬಜೆಟ್ ನಲ್ಲಿ ಮುಸ್ಲೀಮರಿಗೆ ಆದ್ಯತೆ ನೀಡಲಾಗಿದೆ. ಇದೊಂದು ಕಮ್ಯುನಲ್ ಬಜೆಟ್ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ ಟೀಕಿಸಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಸಿಟಿ ರವಿ, ಸಿದ್ದರಾಮಯ್ಯ 16ನೇ ಬಜೆಟ್ ಮಂಡಿಸಿದ್ದಾರೆ ಹೆಚ್ಚು ಸಾಲ ಮಾಡಿದ ಕೀರ್ತಿ ಸಿದ್ದರಾಮಯ್ಯಗೆ ಸಲ್ಲುತ್ತೆ . 4 ಲಕ್ಷ ಕೋಟಿ ಅಷ್ಟು ಬಜೆಟ್ ಮಂಡಿಸಿದ್ದಾರೆ. ಈ ಬಾರಿ ಸಾಲ 1 ಲಕ್ಷದ 27ಸಾವಿರ ಕೋಟಿ ಆಗಿದೆ. ಮುಸ್ಲೀಂ ಧರ್ಮಗುರುಗಳ ಗೌರವಧನ ಹೆಚ್ಚಳ ಮಾಡಲಾಗಿದೆ. ಇದು ಕಾಂಗ್ರೆಸ್ ಬಜೆಟಾ ಅಥವಾ ಮುಸ್ಲೀಮರ ಬಜೆಟಾ? ಎಂದು ಪ್ರಶ್ನಿಸಿದರು.

ವಿಧಾನ ಪರಿಷತ್ ನಲ್ಲಿ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಅವಾಚ್ಯ ಶಬ್ದ ಬಳಕೆ ವಿಚಾರಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿರುವ ವಿಧಾನ ಪರಿಷತ್ ಸದಸ್ಯ ಸಿ.ಟಿ ರವಿ , ಅದೊಂದು ಕಹಿ ಘಟನೆ, ನಾನು ಅದನ್ನ ಕೆದಕಲು ಬಯಸಲ್ಲ ಎಂದಿದ್ದಾರೆ. ಪುಟ 2

## ಶಿಗ್ಗಾವಿ ಜನರು ಸುಖ, ಶಾಂತಿ. ನೆಮ್ಮದಿಯಿಂದ ಬದುಕುವಂತಾಗಲಿ

**ಹಾವೇರಿ:** ಶಿಗ್ಗಾವಿ ಜನರು ಅತ್ಯಂತ ಸುಖ, ಶಾಂತಿ, ನೆಮ್ಮದಿಯಿಂದ ಬದುಕುವಂತಾಗಲಿ, ಇಲ್ಲಿನ ಜನರು ಎಷ್ಟು ನೆಮ್ಮದಿಯಿಂದ ಬದುಕಿದ್ದಾರೆ ಎಂದು ಇಡೀ ಜಗತ್ತಿನ ಜನರೂ ಬಂದು ನೋಡುವಂತಾಗಲಿ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಅವರು ಹಾವೇರಿ ಜಿಲ್ಲೆಯ ಶಿಗ್ಗಾವಿ ಪಟ್ಟಣದ ಶ್ರೀ ವಿರಕ್ತ ಮಠದಲ್ಲಿ ನಡೆದ 32ನೇ ಶರಣ ಸಂಸ್ಕೃತಿ ಉತ್ಸವ 2025 ಹಾಗೂ ಪರಮಪೂಜ್ಯ ಲಿಂಗೈಕ್ಯ ಶೀ ಸಂಗನಬಸವ ಮಹಾಸ್ವಾಮಿಗಳ ಹಾಗೂ ಲಿಂಗೈಕ್ಯ ಬಸವಲಿಂಗ ಸ್ವಾಮೀಜಿಗಳ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ಶಿಗ್ಗಾವಿ ವಿರಕ್ತ ಮಠ ತನ್ನದೇ ಆದ ಇತಿಹಾಸ, ಪರಂಪರೆ ಪವಾಡಗಳಿಂದ ಬಂದಿರುವ ಮಠ. ಪವಾಡ



ಅಂದರೆ ಯಾವುದು ಜನರಿಗೆ ಅಸಾಧ್ಯವಾಗಿರುತ್ತದೆಯೋ ಅದನ್ನು ಸರಳವಾಗಿ ಸಾಧ್ಯ ಮಾಡುವುದೇ ಪವಾಡ. ಸೃಷ್ಟಿಯಲ್ಲಿರುವುದನ್ನು ಗುರುತು ಮಾಡುವುದು. ಸೃಷ್ಟಿಯಲ್ಲಿ ಅದ್ಭುತವಾದ ಶಕ್ತಿ ಇದೆ. ಆದರೆ, ಅದನ್ನು ಎಲ್ಲರೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ, ಅದನ್ನು ಗುರುಗಳ ಮೂಲಕ ನೋಡಲು ಸಾಧ್ಯ. ಹುಟ್ಟಿನಿಂದ ಯಾರೂ ಜ್ಞಾನಿಗಳಲ್ಲ. ಎಲ್ಲವನ್ನೂ ಅನುಭವದಿಂದ ಕಲಿತುಕೊಳ್ಳಬೇಕು. ತಾಯಿಯೇ ಮೊದಲ ಗುರು, ಸಂಸ್ಕಾರ ಕೊಟ್ಟ ಸ್ವಾಮೀಜಿ ಎರಡನೇ ಗುರು. ಪಾಠ ಹೇಳಿದು ಗುರುಗಳು ಎಲ್ಲಕ್ಕಿಂತ ಅರಿವೇ ಗುರು. ಮನುಷ್ಯನಿಗೆ ಜ್ಞಾನದಿಂದ ಅಕ್ಷರ ಜ್ಞಾನ, ಅದರಿಂದ ಸಾಹಿತ್ಯ ಜ್ಞಾನ, ಅದರಿಂದ ವಿಜ್ಞಾನ, ತಂತ್ರಜ್ಞಾನ, ಈಗ ಕೃತಕ ಬುದ್ದಿಮತ್ತೆ ಅಂತ ಬಂದಿದೆ. ಯಾವುದು ಸಹಜವಾಗಿ ಇಲ್ಲವೋ ಅದು ಕೃತಕ. ಹೀಗೆ ಎಲ್ಲ ಅನುಭವದ ನಂತರ ಅರಿವೆ ಗುರು. ಈ ಸ್ಥಿತಿಗೆ ಬರಬೇಕೆಂದರೆ ಮನುಷ್ಯ ಬಹಳಷ್ಟು ಜಾಗೃತರಾಗಿರಬೇಕು. ಪುಟ 2

## ಅನುರಾಗ್ ಕಶ್ಯಪ್ ಕನ್ನಡಕ್ಕೆ ಪಾದಾರ್ಪಣೆ

**ಬೆಂಗಳೂರು:** ಎರಡು ದಶಕಗಳಿಂದ ಹಿಂದಿ ಚಿತ್ರರಂಗದಲ್ಲಿ ತಮ್ಮದೇ ಛಾಪು ಮೂಡಿಸಿರುವ ನಿರ್ದೇಶಕ ಅನುರಾಗ್ ಕಶ್ಯಪ್ ಈಗ ದಕ್ಷಿಣ ಭಾರತದ ಚಿತ್ರರಂಗದತ್ತ ಗಮನ ಹರಿಸಿದ್ದಾರೆ. ವಿಶಿಷ್ಟ ಚಲನಚಿತ್ರ ನಿರ್ಮಾಣ ಶೈಲಿಗೆ ಹೆಸರುವಾಸಿಯಾದ ಅನುರಾಗ್ ನಟನೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ ಮತ್ತು ಈಗ ಕನ್ನಡಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಪುಟ 2



# ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆ ಈಡೇರಿಕೆ ಸರ್ಕಾರದ ಆದ್ಯತೆ: ಲಕ್ಷ್ಮೀ ಹೆಬ್ಬಾಳಕರ್

**ಬೆಂಗಳೂರು:** ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳನ್ನು ಈಡೇರಿಸುವುದೇ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ವತಿಯಿಂದ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನಡೆಸುತ್ತಿರುವ ಪ್ರತಿಭಟನಾ ಸ್ಥಳಕ್ಕೆ ಸಚಿವರು ಭೇಟಿ ನೀಡಿ, ಮನವಿ ಸ್ವೀಕರಿಸಿದರು. ಈ ವೇಳೆ ಮಾತನಾಡಿದ ಸಚಿವರು, ಅಂಗನವಾಡಿ ಕಾರ್ಯಕರ್ತೆಯರ ಬೇಡಿಕೆಗಳ ಈಡೇರಿಸಲು ಸರ್ಕಾರಕ್ಕೆ ಸಹಾನುಭೂತಿ ಇದೆ. ವೈಯಕ್ತಿಕವಾಗಿ ಎಂದಿಗೂ ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಪರ ನಿಲ್ಲುತ್ತೇನೆ ಎಂದು ಅವರು ಭರವಸೆ ನೀಡಿದರು.

**ಬಜೆಟ್‌ನಲ್ಲಿ ಸಮಾಧಾನಕರ :** ಅಂಗನವಾಡಿ ಕಾರ್ಯಕರ್ತೆಯರ ಹಾಗೂ ಸಹಾಯಕಿಯರ ಗೌರವಧನವನ್ನು ಬಜೆಟ್ನಲ್ಲಿ ಹೆಚ್ಚಿಸಲಾಗಿದೆ. 2017ರಲ್ಲಿ ಸಿದ್ದರಾಮಯ್ಯನವರು ಮುಖ್ಯಮಂತ್ರಿ ಆಗಿದ್ದಾಗಲೇ ವೇತನ ಹೆಚ್ಚಿಸಲಾಗಿತ್ತು. ಈಗಲೂ ಸಿದ್ದರಾಮಯ್ಯನವರೇ ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ಹೆಚ್ಚಿಸಿದ್ದು, ಮುಂದಿನ ದಿನಗಳಲ್ಲಿ ಮತ್ತೆ ಗೌರವಧನ ಏರಿಕೆಯಾಗುವ ವಿಶ್ವಾಸವಿದೆ ಎಂದು ಸಚಿವರು ಹೇಳಿದರು.

**ಗ್ರ್ಯಾಚುಯಿಟಿ ವಿತರಣೆ .:** ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ದಿನವಾದ ನಾಳೆ (ಮಾರ್ಚ್ 8) ಸಾಮೂಹಿಕವಾಗಿ ಗ್ರ್ಯಾಚುಯಿಟಿ ವಿತರಿಸಲಾಗುವುದು ಎಂದು ಹೇಳಿದ ಸಚಿವರು, ನಿವೃತ್ತಿಯಾದವರಿಗೆ ಇಡಿಗಂಟು ಹಣ



ನೀಡುವುದರ ಬಗ್ಗೆಯೂ ಪರಿಶೀಲನೆ ನಡೆಸಲಾಗುವುದು ಎಂದರು. ರಾಜ್ಯದಲ್ಲಿ 17 ಸಾವಿರ ಅಂಗನವಾಡಿ ಕೇಂದ್ರಗಳಲ್ಲಿ ಪೂರ್ವಪ್ರಾಥಮಿಕ ತರಗತಿಗಳನ್ನು ಆರಂಭಿಸುವ ಯೋಚನೆಯಿದೆ. ಈ ಮೂಲಕ ಅಂಗನವಾಡಿ ಕೇಂದ್ರಗಳ ಉನ್ನತೀಕರಣಕ್ಕೆ ಸಹಾಯವಾಗಲಿದೆ. ಈ ಬಗ್ಗೆ ಅಂಗನವಾಡಿ ಕಾರ್ಯಕರ್ತೆಯರು ಮನೆ ಮನೆಗೆ ತೆರಳಿ ಪ್ರಚಾರ ಕೈಗೊಳ್ಳಬೇಕಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು.

ಈ ವೇಳೆ ಸಚಿವರ ವಿಶೇಷ ಕರ್ತವ್ಯಾಧಿಕಾರಿ ಬಿ.ಎಚ್.ನಿಶ್ಚಲ್, ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮೀ, ಕಾರ್ಯಾಧ್ಯಕ್ಷೆ ಶಾಂತಾ ಎಸ್. ಘಂಟಿ, ಪ್ರಧಾನ ಕಾರ್ಯದರ್ಶಿ ಎಚ್.ಎಸ್.ಸುನಂದಾ, ಖಜಾಂಚಿ ಕಮಲಾ ಇನ್ನಿತರ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್‌ಇಲ್ಲಿನ ವಿವೇಕಾನಂದ ಮಹಿಳಾ ಪದವಿ ಕಾಲೇಜು ಶಿಕ್ಷಕ ವೃಂದದವರು ಮಹಿಳಾ ದಿನಾಚರಣೆಯ ಅಂಗವಾಗಿ ಹಳದಿ ಬಣ್ಣದ ಉಡುಪಿನಲ್ಲಿ ಕಂಗೊಳಿಸಿದ್ದಾರೆ




**ಸುಮಾರು 2 ಸಾವಿರ ಕೋಟಿ ಸಜ್ಜೆಪಾಳ್ಯ ಗ್ರಾಮದ ಸರ್ವೇ ನಂ.17ರಲ್ಲಿನ ಸುಮಾರು 45 ಎಕರೆ ಜಾಗಕ್ಕೆ ಸಂಬಧಿಸಿದಂತೆ ಪ್ರಾದೇಶಿಕ ಆಯುಕ್ತರು ನೀಡಿರುವ ವರದಿಯಂತೆ ಕ್ರಮಕೈಗೊಳ್ಳಬೇಕು ಎಂದರಾಜ್ಯ ಸರ್ಕಾರವನ್ನು ಒತ್ತಾಯಿಸಿ ಶನಿವಾರ ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್ ಪರವಾಗಿ ರಾಜ್ಯ ಒಕ್ಕಲಿಗರ ಸಂಘದ ಪದಾಧಿಕಾರಿಗಳು ಪತ್ರಿಕಾಗೋಷ್ಠಿ ನಡೆಸಿದರು. ರಾಜ್ಯ ಒಕ್ಕಲಿಗರ ಸಂಘದ ಅಧ್ಯಕ್ಷ ಕೆಂಚಪ್ಪ ಗೌಡ, ಉಪಾಧ್ಯಕ್ಷ ರೇಣುಕಾಪ್ರಸಾದ್, ಪ್ರಧಾನ ಕಾರ್ಯದರ್ಶಿ ಕೋನಪ್ಪ ರೆಡ್ಡಿ, ಖಜಾಂಚಿ ಮಾರೇಗೌಡ, ಕಾಮಗಾರಿ ಸಮಿತಿಯ ಅಧ್ಯಕ್ಷ ಗಂಗಾಧರ್, ಕೃಷ್ಣಪ್ಪ ರಂಗಮ್ಮ ಶಿಕ್ಷಣ ಟ್ರಸ್ಟ್‌ನ ಟ್ರಸ್ಟಿ ಅಶೋಕ್ ಮತ್ತಿತರರು ಭಾಗವಹಿಸಿದ್ದರು.**

# ಮಹಿಳೆಯರ ಆರೋಗ್ಯದ ಬಗ್ಗೆ ಜಾಗೃತಿ: "ವುಮೆನ್ ಆಕಥಾನ್" ಆಯೋಜನೆ

**ಬೆಂಗಳೂರು:** ಮಹಿಳೆಯರು ತಮ್ಮ ಆರೋಗ್ಯ ಬಗ್ಗೆ ಕಾಳಜಿ ವಹಿಸುವ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಲ್ಟಿಯಸ್ ಆಸ್ಪತ್ರೆಯ ನೇತೃತ್ವದಲ್ಲಿ "ಮಹಿಳಾ ದಿನಾಚರಣೆ" ಪ್ರಯುಕ್ತವಾಗಿ 3ನೇ ಆವೃತ್ತಿಯ "ವುಮೆನ್ ಆಕಥಾನ್"ನನ್ನು ಆಯೋಜಿಸಲಾಗಿತ್ತು.

ಬೆಂಗಳೂರಿನ ಕಲ್ಯಾಣ ನಗರದ ಕೆಬಿಸಿ ಬ್ಯಾಸ್ಕೆಟ್ ಬಾಲ್ ಕೋರ್ಟ್‌ನಿಂದ ಬೆಳಗ್ಗೆ 6 ಗಂಟೆಗೆ ಪ್ರಾರಂಭಗೊಂಡ ವಾಕಥಾನ್‌ನನ್ನು ಆಲ್ಟಿಯಸ್ ಆಸ್ಪತ್ರೆಯ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಪ್ರಿಯಾ ಎಸ್. ಪಿ. ಪಾಟೀಲ್ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಕುಟುಂಬ ನಿರ್ವಹಣೆಯ ಜವಾಬ್ದಾರಿ ನಿಭಾಯಿಸುವ ಭರದಲ್ಲಿ ತಮ್ಮ ಆರೋಗ್ಯದ ಬಗ್ಗೆಯೇ ಮಹಿಳೆಯರು ನಿರ್ಲಕ್ಷಿಸುತ್ತಿದ್ದಾರೆ. ಶೇ.70 ರಷ್ಟು ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎಂದು ಅನೇಕ ಅಧ್ಯಯನಗಳು ತಿಳಿಸಿವೆ. ಇದರಿಂದ ಮಹಿಳೆಯರು ಅನೇಕ ಆರೋಗ್ಯ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಮಹಿಳೆಯರೂ ಸಹ ಕುಟುಂಬ ನಿರ್ಹಣೆಯ ಜೊತೆ ಜೊತೆಗೆ ತಮ್ಮ ಆರೋಗ್ಯ ನಿಭಾಯಿಸಲು ಸಮಯ ಮೀಸಲಿಡಬೇಕು. ನಿತ್ಯ ದೈಹಿಕ ವ್ಯಾಯಾಮ ಮಾಡುವುದು, ಪೌಷ್ಠಿಕಾಂಶಯುಕ್ತ ಆಹಾರ ಸೇವಿಸುವುದರ ಬಗ್ಗೆ ಗಮನವಹಿಸಬೇಕು ಎಂದರು. ತಮ್ಮ ಆರೋಗ್ಯ ನಿರ್ಲಕ್ಷಿಸುವ ಮಹಿಳೆಯರು ಎಂಡೋಮೆಟ್ರಿಯಾಸಿಸ್,




ಸರ್ವೈಕಲ್ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ಒಳಗಾಗುತ್ತಿದ್ದಾರೆ, ಈ ಅಪಾಯಕಾರ ಕ್ಯಾನ್ಸರ್ ಬಗ್ಗೆ ಮಹಿಳೆ ಜಾಗೃತಿ ಹೊಂದಬೇಕು. ಸರ್ವೈಕಲ್ ಕ್ಯಾನ್ಸರ್ ತಡೆಗಟ್ಟಲು ಇದೀಗ ಲಸಿಕೆ ಲಭ್ಯವಿದ್ದು, ಪ್ರತಿಯೊಬ್ಬರು ಇದರ ಪ್ರಯೋಜನ ಪಡೆದುಕೊಳ್ಳಲಿದೆ ಎಂದು ಹೇಳಿದರು.

ಡೆಂಟಲ್ ಡೆನ್ ನಿರ್ದೇಶಕಿ ಹಾಗೂ ವಾಕಥಾನ್‌ನ ರೂವಾರಿ ಡಾ. ಲಕ್ಷ್ಮಿ ರೂಪೇಶ್ ಮಾತನಾಡಿ, ಮಹಿಳೆಯರ ಆರೋಗಸ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ ಮಹಿಳಾ ದಿನಾಚರಣೆ ಪ್ರಯುಕ್ತ ಪ್ರತಿವರ್ಷ ವಾಕಥಾನ್ ಆಯೋಜಿಸುತ್ತಾ ಬರಲಾಗಿದೆ. ಈ 3ನೇ ಆವೃತ್ತಿಯ ವುಮೆನ್ ವಾಕಥಾನ್‌ಗೆ ಉತ್ತರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, 1500ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು ಎಂದು ಹೇಳಿದರು.

# ರಾಜ್ಯ ಮಟ್ಟದ ಬಾಯ್ಲರ್ ಸುರಕ್ಷತಾ ಪ್ರಶಸ್ತಿ ಪ್ರಧಾನ

**ಬೆಂಗಳೂರು:** ಕಾರ್ಖಾನೆಗಳಲ್ಲಿ ಬಾಯ್ಲರ್ ಗಳ ಸುರಕ್ಷತೆ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ, ಅದನ್ನು ಮನದಟ್ಟುಮಾಡಿಕೊಳ್ಳುವ ಅಗತ್ಯವಿದೆ ಎಂದು ಕಾರ್ಖಾನೆ ಮತ್ತು ಬಾಯ್ಲರ್ ಗಳ ಇಲಾಖೆ ನಿರ್ದೇಶಕ ಕೆ.ಶ್ರೀನಿವಾಸ್ ಹೇಳಿದರು.

54ನೇ ರಾಷ್ಟ್ರೀಯ ಸುರಕ್ಷತಾ ದಿನಾಚರಣೆ ಅಂಗವಾಗಿ ರಾಜ್ಯ ಮಟ್ಟದ ಬಾಯ್ಲರ್ ಸುರಕ್ಷತಾ ಪ್ರಶಸ್ತಿ ಪ್ರಧಾನ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಬಾಯ್ಲರ್ ಕಾರ್ಖಾನೆಗಳ ಉತ್ಪಾದಕರು ಸುರಕ್ಷತೆ ಕುರಿತು ಸರ್ಕಾರದ ಇಲಾಖೆಗಳ ಜತೆ ಒಪ್ಪಂದ ಮಾಡಿಕೊಂಡು ಸುರಕ್ಷತೆಯನ್ನು ಕಾಪಾಡಿಕೊಂಡು ಹೋಗುವುದು ಅಗತ್ಯವಾಗಿದೆ ಎಂದರು.

ವೆಸ್ಟ್ ಕೋಸ್ಟ್ ಪೇಪರ್ ಉದ್ಯಮಿ, ರಾಜೇಂದ್ರ ಜೈನ್ ಮಾತನಾಡಿ,ಕರ್ನಾಟಕದಲ್ಲಿ ಬೇರೆ ಬೇರೆ ವಿಧದ ನಾಲ್ಕು ಸಾವಿರತ ಬಾಯ್ಲರ್ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿವೆ,ಪ್ರತಿಯೊಂದು ಬಾಯ್ಲರ್ ಕಂಪನಿಗಳು ಸುರಕ್ಷತೆ,ಕೈಗಾರಿಕಾ ಸುರಕ್ಷತೆಯ




ಬಗ್ಗೆ ಹೆಚ್ಚಿನ ಅರಿವು ಹೊಂದುವ ಮೂಲಕ ಉತ್ತಮ ಪ್ರಶಂಸಾ ಪ್ರಶಸ್ತಿ ಪಡೆಯುವಂತಾಗಲಿ, ಈ ಕಾರ್ಯಾಗಾರದಲ್ಲಿ ಬಾಯ್ಲರ್ ಸುರಕ್ಷತೆ ಬಗ್ಗೆ ಉತ್ತಮ ಉಪನ್ಯಾಸ ನಡೆದಿದ್ದು ಶ್ಲಾಘನೀಯ ಎಂದರು.

ಬಾಯ್ಲರ್ ಸುರಕ್ಷತಾ ಇಲಾಖೆ ಜಂಟಿ ನಿರ್ದೇಶಕ ಪ್ರಥಮ್ ಮಾತನಾಡಿ, ಬಾಯ್ಲರ್ ಉದ್ಯಮದಲ್ಲಿ ಸುರಕ್ಷತೆ ಹಿತದೃಷ್ಟಿಯಿಂದ 1923ರ ಕಾನೂನು ಪರಿಪಾಲನೆ ಮಾಡುವುದು ಅಗತ್ಯವಾಗಿದೆ ಎಂದರು

ಇದೇ ಸಂದರ್ಭದಲ್ಲಿ ಬಾಯ್ಲರ್ ಕಂಪನಿಗಳಿಗೆ ಉತ್ತಮ ಸುರಕ್ಷತಾ ಪ್ರಶಸ್ತಿ ನೀಡಿ ಗೌರವಿಸಲಾಯಿತು.




**ಇಂಡಿಯನ್ ಮೆಡಿಕಲ್ ಅಸೋಸಿಯೇಶನ್ ವತಿಯಿಂದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಐಎಂಎ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಡಾ.ಜಯಂತಿ, ಐಎಂಎ ಅಧ್ಯಕ್ಷ ಡಾ.ವೀರಭದ್ರಪ್ಪ ಚಿನ್ನಿವಾಲರ್,ಕಾರ್ಯದರ್ಶಿ ಡಾ.ಸೂರಿರಾಜು ವಿ, ಹಿರಿಯ ಉಪಾಧ್ಯಕ್ಷ ಟಿ.ಎನ್ .ಮರಿಗೌಡ,ಡಾ.ವಿಜಯ ಸಾರಥ ಮತ್ತಿತರರು ಭಾಗವಹಿಸಿದ್ದರು.ಇದಕ್ಕೂ ಮಹಿಳಾ ದಿನಾಚರಣೆಯ ವಿಶೇಷವಾಗಿ ಹಮ್ಮಿಕೊಂಡಿದ್ದ ಮಹಿಳಾ ಜಾಥಾದಲ್ಲಿ ಬೆಂಗಳೂರು ವೈದ್ಯಕೀಯ ಕಾಲೇಜಿನ ವಿದ್ಯಾರ್ಥಿಗಳು, ನರ್ಸಿಂಗ್, ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.**

ಮೊದಲ ಪುಟದಿಂದ

## ಮಹಿಳಾ ದಿನಕ್ಕೆ ಶುಭಾಶಯ

ದೃಷ್ಟಿಕೋನ ಪ್ರಬಲ ಆಧಾರ ಸ್ತಂಭವಾಗಿದೆ" ಎಂದರು.

ಮಹಿಳಾ ದಿನದಂದು ತಮ್ಮ ಸಾಮಾಜಿಕ ಮಾಧ್ಯಮ ಜಾಲತಾಣ ಖಾತೆಯನ್ನು ದೇಶದ ಸ್ಫೂರ್ತಿದಾಯ ಮಹಿಳೆಯರಿಗೆ ನೀಡುವ ಕ್ರಮ ಕುರಿತು ಅವರು ಕಳೆದ ತಿಂಗಳ ಮನ್ ಕೀ ಬಾತ್ ಕಾರ್ಯಕ್ರಮದಲ್ಲಿ ತಿಳಿಸಿದ್ದರು.

ಲಕ್ಪತಿ ದೀದಿ ಕಾರ್ಯಕ್ರಮಕ್ಕೆ ಚಾಲನೆ: ಅಂತಾರಾಷ್ಟ್ರೀಯ ಮಹಿಳಾ ದಿನದ ಹಿನ್ನೆಲೆ ಪ್ರಧಾನಿ ನರೇಂದ್ರ ಮೋದಿ ಗುಜರಾತ್ನ ನವ್ಸರಿಯಲ್ಲಿಂದು ಮಹಿಳೆಯರಲ್ಲಿ ಆರ್ಥಿಕ ಸ್ವಾತಂತ್ರ್ಯವನ್ನು ಉತ್ತೇಜಿಸುವ ಗುರಿ ಹೊಂದಿರುವ ಲಕ್ಪತಿ ದೀದಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ.

ಈ ಕಾರ್ಯಕ್ರಮದಲ್ಲಿ ಪ್ರಧಾನಿ ಭಾಗಿ, ಸಹೋದರಿಯರೊಂದಿಗೆ ಮಾತುಕತೆ ನಡೆಯಲಿದ್ದಾರೆ. ಈ ವೇಳೆ ಐದು ಜನರಿಗೆ ಪ್ರಮಾಣ ಪತ್ರ ನೀಡಿ ಗೌರವಿಸಲಿದ್ದಾರೆ. ಗುಜರಾತ್ನಲ್ಲಿ ಲಕ್ಪತಿ ದೀದಿ ಯೋಜನೆಯ ಯಶಸ್ಸನ್ನು ಎತ್ತಿ ತೋರಿಸುವ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಗುವುದು.

2023ರ ಆಗಸ್ಟ್ 15ರಂದು ಪ್ರಧಾನಿ ಮೋದಿ ಈ ಲಕ್ಪತಿ ದೀದಿ ಯೋಜನೆಗೆ ಚಾಲನೆ ನೀಡಿದರು. ಕೃಷಿ, ಪಶುಸಂಗೋಪನೆ ಮತ್ತು ಸಣ್ಣ ಕೈಗಾರಿಕೆಗಳಂತಹ ಚಟುವಟಿಕೆಗಳ ಮೂಲಕ ತಿಂಗಳಿಗೆ 10,000 ರೂ ಅಥವಾ ಅದಕ್ಕಿಂತ ಹೆಚ್ಚು ಗಳಿಸುವ ಮತ್ತು ಕನಿಷ್ಠ 1 ಲಕ್ಷ ರೂ. ವಾರ್ಷಿಕ ಆದಾಯ ಹೊಂದಿರುವ ಮಹಿಳಾ ಉದ್ಯಮಿಗಳನ್ನು ಗುರುತಿಸುವ ಮೂಲಕ ಸಬಲೀಕರಣಗೊಳಿಸುವುದು ಈ ಯೋಜನೆಯ ಪ್ರಮುಖ ಗುರಿಯಾಗಿದೆ.

## ಕಾರ್ಮಿಕರು ಇಸ್ರೇಲ್‌ಗೆ

ವಕ್ತಾರ ರಣಧೀರ್ ಜೈಸ್ವಾಲ್, ಭಾರತೀಯರನ್ನು ಪತ್ತೆ ಹಚ್ಚಲು ಇಸ್ರೇಲ್ ಅಧಿಕಾರಿಗಳು ಪ್ರಯತ್ನಿಸಿದರು ಎಂದು ತಿಳಿಸಿದ್ದಾರೆ. ಇವರೆಲ್ಲಾ ವೆಸ್ಟ್ ಬ್ಯಾಂಕ್ನಲ್ಲಿ ಇದ್ದರು. ಅವರನ್ನು ಇಸ್ರೇಲ್ಗೆ ಕರೆತರಲಾಗಿದೆ.

ಅವರು ವೆಸ್ಟ್ಬ್ಯಾಂಕ್ಗೆ ಹೇಗೆ ಹೋದರು ಎಂಬ ಕುರಿತು ತನಿಖೆ ನಡೆಸಲಾಗುವುದು. ಇಸ್ರೇಲ್ನಲ್ಲಿರುವ ಭಾರತೀಯ ರಾಯಭಾರ ಕಚೇರಿಯು ಇಸ್ರೇಲ್ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ ಎಂದು ವಿದೇಶಾಂಗ ಸಚಿವಾಲಯದ ವಕ್ತಾರ ಜೈಸ್ವಾಲ್ ಮಾಹಿತಿ ನೀಡಿದ್ದಾರೆ.

ಭಾರತೀಯರ ಸುರಕ್ಷತೆ ಮತ್ತು ಯೋಗಕ್ಷೇಮಕ್ಕಾಗಿ ನಮ್ಮ ರಾಯಭಾರ ಕಚೇರಿ ಇಸ್ರೇಲಿ ಅಧಿಕಾರಿಗಳೊಂದಿಗೆ ಸಂಪರ್ಕದಲ್ಲಿದೆ. ವೆಸ್ಟ್ ಬ್ಯಾಂಕ್ಗೆ ಹೋಗಿದ್ದ ಎಲ್ಲಾ 10 ಭಾರತೀಯರನ್ನು ಇಸ್ರೇಲ್ಗೆ ಕರೆತರಲಾಗಿದ್ದು, ನೋಡಿಕೊಳ್ಳಲಾಗುತ್ತಿದೆ ಎಂದರು.

## ಇನ್ನೇನು ಮಾಡಲು ಸಾಧ್ಯ?

300 ಕಿ.ಮೀ ಉದ್ದದಷ್ಟು ರಸ್ತೆ ನಿರ್ಮಾಣ ಮಾಡಲಾಗುವುದು. ಈ ಯೋಜನೆಗೆ 3 ಸಾವಿರ ಕೋಟಿ ಮೀಸಲಿಡಲಾಗಿದೆ. ಬಫರ್ ರಸ್ತೆ, ಮೇಲ್ಸೇತುವೆ, ಟನಲ್ ರಸ್ತೆ ಗಳ ಮೂಲಕ ಬೆಂಗಳೂರುನಲ್ಲಿ 700–800 ಕಿ.ಮೀ ಉದ್ದದಷ್ಟು ಹೊಸ ರಸ್ತೆ ನಿರ್ಮಾಣ ಮಾಡುತ್ತಿದ್ದೇವೆ. ಬೆಂಗಳೂರಿನ ಅಭಿವೃದ್ಧಿಗೆ ಇನ್ನೇನು ಅಲೋಚನೆ ಮಾಡಲು ಸಾಧ್ಯ? ಜನರ ಸಮಸ್ಯೆಗೆ ಪರಿಹಾರ ನೀಡಲು ಸರ್ಕಾರ ಸಾಲ ಮಾಡಿಯಾದರೂ ಈ ಯೋಜನೆ ಮಾಡುತ್ತೇವೆ. ಇಡೀ ವಿಶ್ವ ಬೆಂಗಳೂರಿನತ್ತ ತಿರುಗಿ ನೋಡುತ್ತಿದ್ದು, ಈ ನಗರಕ್ಕೆ ನಮ್ಮ ಸರ್ಕಾರ ಆದ್ಯತೆ ನೀಡಿದೆ" ಎಂದು ತಿಳಿಸಿದರು.

**ಸಿಂಗ್ ಅವರಿಗೆ ಇನ್ನಷ್ಟು ಮಾನ್ಯತೆ ನೀಡಬೇಕು**

ಬೆಂಗಳೂರು ವಿವಿಗೆ ಮನಮೋಹನ್ ಸಿಂಗ್ ಹೆಸರು ಇಟ್ಟಿರುವ ಬಗ್ಗೆ ವಿವಾದ ಕೇಳಿಬರುತ್ತಿದೆ ಕೇಳಿದಾಗ, "ಅವರು ದೀನದಯಾಳ್ ಹೆಸರು ಇಡುವಾಗ ನಾವು ಮನಮೋಹನ್ ಸಿಂಗ್ ಹೆಸರು ಇಡಬಾರದೆ?

ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಹೋಗುವ ಮೇಲ್ಸೇತುವೆ, ಎಲೆಕ್ಟ್ರಾನಿಕ್ ಸಿಟಿ ಮೇಲ್ಸೇತುವೆ, ನೆಲಮಂಗಲ ಮೇಲ್ಸೇತುವೆ, ಜೆ.ಎನ್ ನರ್ಮ್ ಯೋಜನೆ, ನರೇಗಾ, ಆಹಾರ ಭದ್ರತಾ ಕಾಯ್ದೆ, ಶಿಕ್ಷಣ ಹಕ್ಕು, ಮಾಹಿತಿ ಹಕ್ಕು, ಆಶಾ ಕಾರ್ಯಕರ್ತ ಯೋಜನೆ ಜಾರಿಗೆ ತಂದವರು ಇವರು. ಬಿಜೆಪಿಯವರು ಇಂತಹ ಯಾವುದಾದರೂ ಒಂದು ಯೋಜನೆ ಮಾಡಿದ್ದಾರಾ? ದೇಶ ಹಾಗೂ ಕರ್ನಾಟಕ ರಾಜ್ಯದ ಕೊಡುಗೆಗೆ ಮನಮೋಹನ್ ಸಿಂಗ್ ಅವರು ಕೊಟ್ಟಿರುವ ಕೊಡುಗೆಗೆ ಅವರಿಗೆ ಇನ್ನಷ್ಟು ಮಾನ್ಯತೆ ನೀಡಬೇಕು" ಎಂದು ತಿಳಿಸಿದರು.

**ಕಲ್ಯಾಣ ಕರ್ನಾಟಕಕ್ಕೆ ಲಾಟರಿ:** ಕಲ್ಯಾಣ ಕರ್ನಾಟಕ ಪ್ರವಾಸದ ಬಗ್ಗೆ ಕೇಳಿದಾಗ, "ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಲಾಟರಿ ಹೊಡೆದಿದೆ. ಖರ್ಗೆ ಅವರು ಆರ್ಟಿಕಲ್ 371ಜೆ ಜಾರಿಗೆ ತಂದರು. ಇನ್ನು ನಮ್ಮ ಸರ್ಕಾರ ಕೊಟ್ಟ ಮಾತಿನಂತೆ ಪ್ರತಿ ವರ್ಷ 5 ಸಾವಿರ ಕೋಟಿ ನೀಡುತ್ತಿದ್ದೇವೆ. ಇಂದು ಕೂಡ ಸಚಿವ ಪ್ರಿಯಾಂಕ್ ಖರ್ಗೆ, ಸಂಸದರಾದ ರಾಧಾಕೃಷ್ಣ ಅವರ ಜತೆ ಜೇವರ್ಗಿಗೆ ತೆರಳಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಲಾಗುವುದು" ಎಂದರು.

ನೀರಾವರಿ ಇಲಾಖೆಗೆ ಅನುದಾನ ಕಡಿಮೆಯಾಗಿದೆ ಎಂದು ಕೇಳಿದಾಗ, "ನೀರಾವರಿ ಇಲಾಖೆಗೆ ಕಳೆದ ಬಾರಿಗಿಂತ ರೂ. 2 ಸಾವಿರ ಕೋಟಿ ಹೆಚ್ಚಿಗೆ ನೀಡಲಾಗಿದೆ. ನೀರಾವರಿಗೆ ನಾವು ಬೇರೆ ಯೋಜನೆ ರೂಪಿಸಿದ್ದೇವೆ. ಮಧ್ಯದಲ್ಲಿ ಬೇರೆ ಘೋಷಣೆ ಆಗಲಿದೆ, ಮಂಡಳಿಗಳಲ್ಲಿ ಕೆಲವು ತೀರ್ಮಾನ ಮಾಡಿದ್ದೇವೆ" ಎಂದು ಹೇಳಿದರು.

## ಇದೊಂದು ಕಮ್ಯುನಲ್ ಬಜೆಟ್

ಎಲ್ಲರಿಗೂ ಒಳ್ಳೆಯದಾಗಲಿ. ನಾನು ಯಾರಿಗೂ ಕೆಟ್ಟದ್ದು ಬಯಸಿ ರಾಜಕಾರಣಕ್ಕೆ ಬಂದಿಲ್ಲ. ಯಾರ ಬಗ್ಗೆ ದ್ವೇಷ ಇಟ್ಟುಕೊಂಡಿಲ್ಲ. ಹಿಂದುತ್ವ ಉಳಿದರೇ ದೇಶ ಉಳಿಯುತ್ತೆ ಎಂದು ನಂಬಿರುವೆ ಎಂದರು.

## ನೆಮ್ಮದಿಯಿಂದ ಬದುಕುವಂತಾಗಲಿ

ಜೀವನದಲ್ಲಿ ನಡೆಯುವ ಪ್ರತಿಯೊಂದು ಸಣ್ಣ ಘಟನೆಯೂ ಕೂಡ ನಮಗೆ ಪಾಠವನ್ನು ಕಲಿಸುತ್ತದೆ. ಅದು ಅನುಭವ. ಅನುಭವದಿಂದ ಅನುಭಾವ ಎನ್ನುತ್ತಾರೆ. ಅಂತಹ ಒಂದು ವಿಚಾರ ಇಲ್ಲಿ ಚರ್ಚೆ ಯಾಗುತ್ತಿದೆ ಎಂದರು.

ಹುಟ್ಟು ಸಾವು ನಮ್ಮ ಕೈಯಲ್ಲಿ ಇಲ್ಲ. ಸಮಾಧಿ ಕಟ್ಟಿಸಿಕೊಳ್ಳಬಹುದು. ಆದರೆ, ಅದರ ಒಳಗೆ ಹೋಗುವಂಥದ್ದು ನಮ್ಮ ಕೈಯಲ್ಲಿ ಇಲ್ಲ. ಬದುಕು ನಮ್ಮ ಕೈಯಲ್ಲಿ ಇದೆ. ನಮ್ಮ ಬಳಿ ಯಾವುದಿಲ್ಲವೋ ಅದರ ಬಗ್ಗೆ ನಾವು ಹೆಚ್ಚು ಚಿಂತನೆ ಮಾಡುತ್ತೇವೆ. ನಮ್ಮ ಬಳಿ ಏನಿದೆ ಅದನ್ನು ಹೇಗೆ ಸಬ್ಬಳಕೆ ಮಾಡಬೇಕು ಎನ್ನುವುದು ಮುಖ್ಯ ಇಂತಹ ಚಿಂತನೆಗಳೇ ಈ ಮಠದ ಶ್ರೀಮಂತಿಕೆ. ಮಠದ ಶ್ರೀಮಂತಿಕೆ ಮಠದ ಆಸ್ತಿಯ ಮೇಲಲ್ಲ. ಮಠಕ್ಕೆ ಬಂದಾಗ ಶಾಂತಿ ಸಿಕ್ಕಾಗ ಶ್ರೀಮಠ ಶ್ರೀಮಂತವಾಗಿದೆ ಎಂದು ಅರ್ಥ. ಹಿರಿಯ ಗುರುಗಳ ತಪಸ್ಸಿನ ಫಲ ಇಲ್ಲಿ ಶಾಂತವಾತಾವರಣ ಇದೆ. ಹಿಂದಿನ ವಾತಾವರಣವನ್ನು ಸಂಗನಬಸವ ಮಹಾಸ್ವಾಮಿಗಳು ಉಳಿಸಿಕೊಂಡು ಬಂದಿದ್ದಾರೆ. ಸಂಗನಬಸವನ ಸ್ವಾಮೀಜಿಗಳು ನೀರಿನಂತೆ ಎಲ್ಲರೊಳಗೂ ಬೆರೆಯುತ್ತಾರೆ ಎಂದರು.

ಈ ಮಠದಲ್ಲಿ ಭಕ್ತ ಮತ್ತು ಗುರುವಿನ ನಡುವೆ ಅಂತರವಿಲ್ಲ. ಹೀಗಾಗಿ ಗುರುಗಳಿಗೆ ಎಲ್ಲರ ಸುಖ ದುಖವೂ ಗೊತ್ತಿದೆ. ಸಂಕಷ್ಟ ಕಾಲದಲ್ಲಿ ಯಾರಿಗೆ ಯಾವ ರೀತಿ ಆಶೀರ್ವಾದ ಮಾಡುವುದು ಅವರಿಗೆ ಗೊತ್ತಿದೆ. ಅವರಿಗೆ ಕೊಡುವ ವಿದ್ಯೆ ಗೊತ್ತಿದೆ. ಆದರೆ, ಅದನ್ನು ತೆಗೆದುಕೊಳ್ಳುವುದು ನಮಗೆ ಗೊತ್ತಿರಬೇಕು. ಅದಕ್ಕೆ ಪ್ರಾಮಾಣಿಕತೆ ಭಕ್ತಿ ಬೇಕು. ಭಕ್ತಿ ಎಂದರೆ ಉತ್ಕೃಷ್ಟವಾದ ಪ್ರೀತಿಯೇ ಭಕ್ತಿ, ಅದು ಕರಾರು ರಹಿತ ಪ್ರೀತಿ, ದೇವರ ಜಗುಲಿಯ ಮುಂದೆ ಐದು ನಿಮಿಷ ಶಾಂತವಾಗಿ ಕುಳಿತರೆ ಎಷ್ಟು ನೆಮ್ಮದಿ ಸಿಗುತ್ತದೆ ನೋಡಿ. ಗುರುವಿನಲ್ಲಿ ಕರಗಬೇಕು. ಕರಗಿ ಲೀನವಾಗಬೇಕು. ಆಗ ಆಶೀರ್ವಾದ ಸಿಗುತ್ತದೆ. ಅಂತಹ ಆಶೀರ್ವಾದ ನನಗೆ ಸಿಕ್ಕಿದೆ ಎಂದು ಹೇಳಿದರು.

ಶಿಗ್ಗಾವಿ ತಾಲೂಕು ಇನ್ನಷ್ಟು ಎತ್ತರಕ್ಕೆ ಬೆಳೆಯಲಿ, ಶಿಗ್ಗಾವಿ ಜನರು ಅತ್ಯಂತ ಸುಖ, ಶಾಂತಿ, ನೆಮ್ಮದಿಯಿಂದ ಬದುಕುವ ಶಹರ ಇದಾಗಲಿ, ತಾಯಂದಿರು ಅತ್ಯಂತ ನೆಮ್ಮದಿಯಿಂದ ಬದುಕುವಂತಾಗಲಿ, ಇಲ್ಲಿನ ಜನರು ಎಷ್ಟು ನೆಮ್ಮದಿಯಿಂದ ಬದುಕಿದ್ದಾರೆ ಎಂದು ಇಡೀ ಜಗತ್ತಿನ ಜನರೂ ಬಂದು ನೋಡುವಂತಾಗಲಿ. ಅಂತಹ ಸ್ಥಳದಲ್ಲಿ ದಿವ್ಯ ಪರಂಪರೆ ಇರುವ ಮಠ ಜಗತ್ತಿಗೆ ಖ್ಯಾತನಾಮವಾಗಲಿ, ಸ್ವಾಮೀಜಿಗಳು ಹಲವಾರು ಕಾರ್ಯಕ್ರಮಗಳನ್ನು ಮಾಡುತ್ತಾರೆ. ಧರ್ಮ ಆಳವಾಗಿ ಬೇರೂರುವಂತೆ ಆಗಲಿ, ಪ್ರತಿ ವರ್ಷ ಶ್ರಾವಣದಲ್ಲಿ ಸಸ್ಯ ಶ್ರಾವಣ ಮಾಡುತ್ತಾರೆ. ಆ ಸಸಿಯ ಜೊತೆಗೆ ಧರ್ಮ, ನ್ಯಾಯ ಆಳವಾಗಿ ಬೀರುವಂತಹ ಕೆಲಸ ಆಗಲಿ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ವಿರಕ್ತ ಮಠದ ಸಂಗನಬಸವ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಶ್ರೀ ಸದ್ಗುರು ಸಮರ್ಥ ಡಾ. ಎ.ಸಿ. ವಾಲಿ ಮಹಾರಾಜರು, ಶರಣ ಸಂಸ್ಕೃತಿ ಉತ್ಸವದ ಮಲ್ಲಿಕಾರ್ಜುನ ರೆಡ್ಡರ ಹಾಗೂ ಆರ್ಗ್ಯಾನಿಕ್ ಅರಮನೆಯ ಸಿದ್ದು ಶಿರಸಂಗಿ ಪಾಲ್ಗೊಂಡಿದರು.

## ಬಸ್‌ನಲ್ಲೇ ಮೆಕ್ಯಾನಿಕ್ ಆತ್ಮಹತ್ಯೆ

ಕೆಲಸ ಮಾಡುತ್ತಿದ್ದರು. ಇತ್ತೀಚೆಗೆ ಅವರಿಗೆ ಬೆನ್ನು ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಚಿಕಿತ್ಸೆ ಪಡೆಯಲು ರಜೆ ಕೇಳಿದ್ದರು. ಆದರೆ, ಅಧಿಕಾರಿಗಳು ನೀಡಿರಲಿಲ್ಲ ಎಂದು ನೊಂದುಕೊಂಡಿದ್ದರು. ನಿನ್ನೆ ಕೆಲಸಕ್ಕೆ ಹಾಜರಾಗಿ ರಾತ್ರಿ ಬಸ್‌ನೊಳಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಕೇಶವ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬ ಸದಸ್ಯರು ಆಕ್ರೋಶ ಹೊರಹಾಕಿದ್ದಾರೆ.

ಸ್ಥಳಕ್ಕೆ ಮಾರ್ಕೆಟ್ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ತಪ್ಪಿದ ಅನಾಹುತ

ಮೈಸೂರು ಕಡೆಗೆ ತೆರಳುತ್ತಿದ್ದ ರೈಲಿನ ಚಾಲಕ ಮರ ಬಿದ್ದಿರುವುದನ್ನು ಕಂಡು ತಕ್ಷಣವೇ ಸುರಕ್ಷಿತವಾಗಿ ರೈಲು ನಿಲ್ಲಿಸಿದ್ದಾರೆ. ಚಾಲಕನ ಸಮಯ ಪ್ರಜ್ಞೆಯಿಂದ ಹೆಚ್ಚಿನ ಅನಾಹುತ ತಪ್ಪಿದೆ.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಸಂಬಂಧಪಟ್ಟ ಅಧಿಕಾರಿಗಳು ಸಿಬ್ಬಂದಿಯೊಡಗೂಡಿ ಕಾರ್ಯಾಚರಣೆ ನಡೆಸಿ ಹಳಿ ಮೇಲೆ ಬಿದಿದ್ದ ಮರವನ್ನು ತೆರವುಗೊಳಿಸಿದ್ದಾರೆ. ಪ್ರಯಾಣಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

## ಪತಿ ಆತ್ಮಹತ್ಯೆ

ಹೊನ್ನವಳ್ಳಿ ಗ್ರಾಮದ ರವಿ (38) ಮೃತಪಟ್ಟ ವ್ಯಕ್ತಿ ಎಂದು ಗುರುತಿಸಲಾಗಿದೆ. ಕಳೆದ ಆರು ವರ್ಷಗಳ ಹಿಂದೆ ಲಾವಣ್ಯ ಹಾಗೂ ರವಿ ವಿವಾಹವಾಗಿದ್ದು, ಅವರಿಗೆ ಗಂಡು ಮಗುವಿದೆ. ಇತ್ತೀಚೆಗೆ ಕೌಟುಂಬಿಕ ಕಲಹ ಏರ್ಪಟ್ಟು ಪತಿಯನ್ನು ತೊರೆದು ಲಾವಣ್ಯ ಬೇರೆ ವಾಸವಾಗಿದ್ದರು. ಈ ಬಗ್ಗೆ ರವಿ ಪೊಲೀಸ್ ಠಾಣೆಗೂ ದೂರು ನೀಡಿದ್ದ.

ಈ ನಡುವೆ ಆಕೆ ತನ್ನ ಪ್ರಿಯಕರನ ಜತೆ ಹೋಗಿದ್ದಾಳೆ ಎಂಬ ಮಾಹಿತಿ ತಿಳಿಯುತ್ತಿದ್ದಂತೆ ಮಾಕವಳ್ಳಿ ಬಳಿಯ ಹೇಮಾವತಿ ನದಿಗೆ ಹಾರಿ ರವಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಪೊಲೀಸರು ಹಾಗೂ ಅಗ್ನಿಶಾಮಕ ಸಿಬ್ಬಂದಿ ಹೇಮಾವತಿ ನದಿಯಲ್ಲಿ ಶೋಧ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಪ್ರಕರಣ ಕುರಿತಂತೆ ಹೊಳೆನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ತನಿಖೆ ಮುಂದುವರೆದಿದೆ.

## ಕನ್ನಡಕ್ಕೆ ಪಾದಾರ್ಪಣೆ

ಸುಜಯ್ ಶಾಸ್ತ್ರಿ ನಿರ್ದೇಶನದ "8" ಚಿತ್ರದ ಮೂಲಕ ಅವರು ಕ್ರೀಡಾ ಹಿನ್ನೆಲೆಯ ಚಿತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಎವಿಆರ್ ಪಿಕ್ಚರ್ಸ್ ಬ್ಯಾನರ್ ಅಡಿಯಲ್ಲಿ ಚಿತ್ರದ ನಿರ್ಮಾಪಕ ಅರವಿಂದ್ ವೆಂಕಟೇಶ್ ರೆಡ್ಡಿ ಈ ಸಿನಿಮಾ ನಿರ್ಮಿಸುತ್ತಿದ್ದಾರೆ.

ಸೂಪರ್ ಮಾಡೆಲ್ ಆಗಿ ನಟಿಯಾಗಿ ಮಾರ್ಪಟ್ಟಿರುವ ಆಂಯೇಷಾ ಈ ಚಿತ್ರದಲ್ಲಿ ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಅನುರಾಗ್ ಅವರ ಪಾತ್ರದ ವಿವರಗಳು ಮತ್ತು ಚಿತ್ರದ ಶೂಟಿಂಗ್ ವೇಳಾಪಟ್ಟಿ ಬಗ್ಗೆ ಇನ್ನು ಯಾವುದೇ ಬಹಿರಂಗಗೊಂಡಿಲ್ಲ. ಒಟ್ಟಾರೆ 27 ದಿನಗಳ ಅವಧಿಯಲ್ಲಿ ಚಿತ್ರೀಕರಣ ಮುಗಿಸುವ ಯೋಜನೆ ಹೊಂದಿದೆ ಚಿತ್ರತಂಡ.

ಪೆಡ್ರೋ ಖ್ಯಾತಿಯ ನಟೇಶ್ ಹೆಗ್ಡೆ ನಿರ್ದೇಶನದ ಮುಂಬರುವ ಕನ್ನಡ ಚಿತ್ರ " ವಾಘಚಿಪಾನಿ" ಯನ್ನು ಅನುರಾಗ್ ನಿರ್ಮಿಸುತ್ತಿದ್ದಾರೆ.

ಅನುರಾಗ್ ಈಗಾಗಲೇ ತಮಿಳು ಚಿತ್ರ "ಮಹಾರಾಜ" ಮತ್ತು ಮಲಯಾಳಂ ಚಿತ್ರ " ರೈಫಲ್ ಕ್ಲಬ್" ನಲ್ಲಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಜತೆಗೆ ವಿಡುದಲೈ–2 ಚಿತ್ರದಲ್ಲೂ ಅತಿಥಿ ಪಾತ್ರದಲ್ಲಿ ನಟಿಸಿದ್ದು, ತೆಲುಗು ಚಿತ್ರ "ಡಕಾಯಿತ" ಚಿತ್ರದಲ್ಲಿ ಅವರ ಮುಂಬರುವ ಪಾತ್ರವು ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ. ಇದು ಅವರ ವಿಸ್ತರಿಸುತ್ತಿರುವ ಫಿಲ್ಮೋಗ್ರಫಿಯನ್ನು ಹೆಚ್ಚಿಸುತ್ತದೆ.

# ವಿದ್ಯಾರ್ಥಿಗಳು ಗುರು-ಹಿರಿಯರ ಸೂಚನೆ ಅನುಸರಿಸಿ



**ಆನೇಕಲ್:** ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ವ್ಯಕ್ತಿತ್ವವನ್ನು ಪರಿಪೂರ್ಣತೆಯಾಗಿ ರೂಪಿಸಿಕೊಳ್ಳಬೇಕಾದಲ್ಲಿ ಬರೀ ಅಧ್ಯಯನ ಒಂದೇ ಸಾಕಾಗುವುದಿಲ್ಲ ಬದಲಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಾಗೂ ಇನ್ನಿತರೆ ಪೂರಕವಾದಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಗುರು ಹಿರಿಯರ ಸೂಚನೆಗಳನ್ನು ಅನುಸರಿಸಿ ಮುನ್ನಡೆಯಬೇಕಾಗಿದೆ ಎಂದು ಬಿ.ಎಚ್.ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಬಿ.ಎ ಬಾಲಕೃಷ್ಣ ತಿಳಿಸಿದರು.

ಅವರು ಸರ್ಜಾಪುರ ಸಮೀಪದ ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತಿಗಳಚೌಡದೇನಹಳ್ಳಿ ಗ್ರಾಮದಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಬೆಂಗಳೂರು ನಗರ ವಿಶ್ವವಿದ್ಯಾಲಯ ಸಹಯೋಗದಲ್ಲಿ ವಿಜಯ ಕಾಲೇಜು, ಜಯನಗರ ವತಿಯಿಂದ ಆಯೋಜಿಸಿದ ರಾಷ್ಟ್ರೀಯ ಸೇವಾ ಯೋಜನೆಯ 2024-25ನೇ ಸಾಲಿನ ವಾರ್ಷಿಕ ಶಿಬಿರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯು ವಿದ್ಯಾರ್ಥಿಗಳನ್ನು ಹಲವು ಅಂಶಗಳಲ್ಲಿ ಪ್ರೇರೇಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಈ ಸೇವಾ ಯೋಜನೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಮೂಲಕ ತಾವು ಸಹಜೀವನವನ್ನು ಕಲಿಯಬಹುದಾಗಿದೆ, ಸೌಹಾರ್ತೆಯಿಂದ ಬದುಕುವುದನ್ನು ಕಲಿಯಬಹುದಾಗಿದೆ, ಪರಸ್ಪರ ಸಹಕಾರವನ್ನು ಕಲಿಯಬಹುದಾಗಿದೆ. ಸಮಾಜದಲ್ಲಿನ ಸಮಸ್ಯೆಗಳ ಬಗ್ಗೆ ಅರಿವು ಮೂಡುತ್ತದೆ ಹಾಗೂ ವಿದ್ಯಾರ್ಥಿಗಳ ಮುಂದಿನ ವೃತ್ತಿಜೀವನವನ್ನು ಪರಿಪೂರ್ಣವಾಗಿ ಪೂರೈಸಿಕೊಳ್ಳುವುದಕ್ಕೆ ಒಂದು ಅವಕಾಶವನ್ನು ಒದಗಿಸಿದಂತಾಗಿದೆ ಎಂದರು.

ವಿಜಯ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಡಿ.ಆರ್ ಸುಧಾ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಮಾಜದ ಜವಾಬ್ದಾರಿ ಅರಿಯಲು ರಾಷ್ಟ್ರೀಯ ಸೇವಾ ಯೋಜನೆ ಅವಶ್ಯವಾಗಿದ್ದು ವ್ಯಕ್ತಿತ್ವ ಎನ್ನುವುದು ಹುಟ್ಟಿನಿಂದ ಬರುವುದಿಲ್ಲ ಅದನ್ನು ಸಮಾಜದೊಂದಿಗಿನ ಒಡನಾಟದಿಂದ ರೂಪಿಸಿಕೊಳ್ಳಬೇಕಾಗಿದ್ದು, ವಿದ್ಯಾರ್ಥಿಗಳು ಈ ಗ್ರಾಮದಲ್ಲಿ ಒಂದು ವಾರಗಳ ಕಾಲ ನೀಡುವಂತಹ ಶ್ರಮದಾನವು ತಮ್ಮ ಜೀವನದ ಉದ್ದಕ್ಕೂ ಸಿಹಿ ನೆನಪುಗಳಾಗಿ ಉಳಿಯುತ್ತದೆ ಮತ್ತು ದಿನಾಂಕ 10 - 3 - 2025ರ ಸೋಮವಾರದಂದು ವಿಜಯ ಕಾಲೇಜು ಮತ್ತು ಆಸ್ಟೆಲ್ ಆರ್ ವಿ ಆಸ್ಪತ್ರೆ ಸಹಯೋಗದಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಂಡಿದ್ದು ಗ್ರಾಮಸ್ಥರೆಲ್ಲರೂ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಬಿ ಎಚ್ ಎಸ್ ಉನ್ನತ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರಾದ ಡಾ. ಆನಂತ್ ಕೆ ಅತ್ರೆ, ವಿಜಯ ಕಾಲೇಜಿನ ಉಪ ಪ್ರಾಂಶುಪಾಲರಾದ ಎಂ.ಜಿ ಮುರಳಿದರ, ಸಂಚಾಲಕರಾದ ಡಾ.ಕೆ.ಜಿ ಲಕ್ಷ್ಮೀನಾರಾಯಣ, ಯಮರೆ ಗ್ರಾಮ ಪಂಚಾಯಿತಿ ಸದಸ್ಯರಾದ ರಾಜೇಶ್ವರಿ, ನಾಗರಾಜು, ಚೈತ್ರ, ಮಾಜಿ ಸದಸ್ಯರಾದ ಭಾಸ್ಕರ್ ರೆಡ್ಡಿ, ಮುಖಂಡರಾದ ಈಶ್ವರ್ ರೆಡ್ಡಿ, ಶ್ರೀನಿವಾಸ ರೆಡ್ಡಿ, ಭರತ್, ಶಿಬಿರಾಧಿಕಾರಿಗಳಾದ ಡಾ. ಜಿ ಕೃಷ್ಣಮೂರ್ತಿ, ಸಹ ಶಿವರಾಧಿಕಾರಿ ವಿ. ಬಾಬು, ವಿಜಯ ಕಾಲೇಜಿನ ಪ್ರಾಧ್ಯಾಪಕ ಬಳಗದವರಾದ ಡಿ.ಎನ್ ಸೌಮ್ಯ, ಯಶೋಧರ ಕುಲದೀಪ್, ಸುನಿತಾ, ಲಕ್ಷ್ಮೀ ಪ್ರಿಯಾ ಹಾಗೂ ಮತ್ತಿತರರು ಹಾಜರಿದ್ದರು.

> ರಾಷ್ಟ್ರೀಯ ಸೇವಾ ಯೋಜನೆಯು ರಾಷ್ಟ್ರಪಿತ ಮಹಾತ್ಮ ಗಾಂದೀಜಿ ಅವರು ಕಂಡ ಕನಸಾಗಿದ್ದು ಹಳ್ಳಿಗಳಲ್ಲಿ ಇಂತಹ ಶ್ರಮದಾನ ನಡೆಸಿ ಸ್ವಚ್ಚತೆ ಮತ್ತು ಆರೋಗ್ಯದ ಬಗ್ಗೆ ಗ್ರಾಮಸ್ಥರಲ್ಲಿ ಅರಿವು ಮೂಡಿಸಬೇಕು. ಹಳ್ಳಿಗಳ ಉದ್ದಾರದಿಂದ ಮಾತ್ರ ದೇಶದ ಉದ್ಧಾರ ಸಾಧ್ಯವಾಗಿದೆ ಎಂಬ ಹಿರಿಯರ ನಾಣ್ಣುಡಿಗಳಂತೆ ಶಿಬಿರಾರ್ಥಿಗಳು ಅರ್ಥೈಸಿ ಕೊಂಡು ಮುನ್ನಡೆಯಬೇಕಾಗಿದೆ ಎಂದರು.
>
> **ಟಿ.ವಿ ಬಾಬು** | ಬಿಜೆಪಿ ಮುಖಂಡರಾದ

# ನಂಜೇಗೌಡರ ಪರಿಶ್ರಮಕ್ಕೆ ಜನತೆ ಕೃತಜ್ಞತೆ



**ಮಾಲೂರು:** 2025-26ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಕೋಲಾರ ಜಿಲ್ಲೆಗೆ ಹಾಗೂ ಮಾಲೂರಿಗೆ ನೀಡಿರುವ ಕೊಡುಗೆಗೆ ಶಾಸಕ ಕೆ.ವೈ.ನಂಜೇಗೌಡರ ಪರಿ ಶ್ರಮಕ್ಕೆ ತಾಲ್ಲೂಕಿನ ಜನತೆ ಕೃತಜ್ಞತೆ ಸಲ್ಲಿಸಿದ್ದಾರೆ.

ಪಟ್ಟಣದ ಮಾರಿಕಾಂಬಾ ವೃತ್ತದಲ್ಲಿ ಜಮಾಯಿಸಿದ ಕಾಂಗ್ರೆಸ್ ಕಾರ್ಯಕರ್ತರು, ಮುಖಂಡರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಾಚರಣೆ ಆಚರಿಸಿದರು.

ಕೋಲಾರದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಆಧಾರದ ಮೇಲೆ ವೈದ್ಯಕೀಯ ಕಾಲೇಜು, .ಮಾಲೂರು ತಾಲ್ಲೂಕು ಮಟ್ಟದ ಆಸ್ಪತ್ರೆ ಮೇಲ್ದರ್ಜೆಗೆ, 3190/- ಕೋಟಿ ಮೊತ್ತದ ದೇವನಹಳ್ಳಿ-ವಿಜಯಪುರ

ಹೆಚ್ ಕ್ರಾಸ್ ವೇಮಗಲ್-ಮಾಲೂರು-ತಮಿಳುನಾಡು ಗಡಿಯವರೆಗೆ ಕೈಗಾರಿಕಾ ಸಂಪರ್ಕ ಕಲ್ಪಿಸುವ 123 ಕಿ.ಮೀ ರಸ್ತೆ ಅಭಿವೃದ್ಧಿ ಕಾಮಗಾರಿಯಡಿ ಪ್ರಸಕ್ತ ಸಾಲಿನಲ್ಲಿ 30 ಕಿ.ಮೀ ರಸ್ತೆಯನ್ನು ಪೂರ್ಣಗೊಳಿಸಲಾಗುವುದು.

ಮಾಲಿನ್ಯವನ್ನು ನಿಯಂತ್ರಣ ಮಾಡುವ ನಿಟ್ಟಿನಲ್ಲಿ ಜಿಲ್ಲೆಯ ಶಿವಾರಪಟ್ಟಣದ ಬಳಿ ಮಲ್ಟಿ ಸ್ಕೂಟರ್ ನೆಟ್ ಜಿರೋ ಸಾಸ್ ನೇಬಲ್ಟಿ ಇಂಡಸ್ಟ್ರಿ ಪಾರ್ಕ್ ಮಾದರಿಯಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಶಾಸಕ ಕೆ.ವೈ.ನಂಜೇಗೌಡರು ಸೇರಿದಂತೆ ಜಿಲ್ಲೆಯ ಎಲ್ಲಾ ಶಾಸಕರ ಪರಿಶ್ರಮವಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ.ಡಿ.ಕೆ.ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಬೃತತಿ ಸುರೇಶ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ , ಅವರಿಗೆ ಶಾಸಕ ಕೆ.ವೈ.ನಂಜೇಗೌಡರ ಪರವಾಗಿ ತಾಲ್ಲೂಕಿನ ಜನತೆ ಧನ್ಯವಾದಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶೀ ಕೆ.ಎನ್.ಸುನೀಲ್ ನಂಜೇಗೌಡ, ಡಿಸಿಸಿ ಅಧ್ಯಕ್ಷ ಸಿ.ಲಕ್ಷ್ಮೀನಾರಾಯಣ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಜಿ.ಮಧುಸೂದನ್, ಪುರಸಭಾ ಅಧ್ಯಕ್ಷೆ ಕೋಮಲ, ಸ್ಥಾಯಿ ಸಮಿತಿ ಅಧ್ಯಕ್ಷ ಎ.ರಾಜಪ್ಪ, ಸದಸ್ಯ ರಾದ ವಿಜಯಲಕ್ಷ್ಮಿ,ಎನ್.ವಿ.ಮುರಳಿಧರ್ ಆರ್. ವೆಂಕಟೇಶ್, ಇಂಮ್ತಿಯಾಜ್, , ತಾಲ್ಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಂ.ತನ್ವೀರ್, ಡಿ.ಟಿ.ವಸಂತ್, ಎಂ.ವಿ.ಹನುಮಂತಪ್ಪ, ಚಾಕನಹಳ್ಳಿ ನಾಗರಾಜ್, ಅನೇಪುರ ಹನುಮಂತಪ್ಪ, ನಾಗಾಪುರ ನವೀನ್, ಎಂ.ಗೋಪಿನಾಥ್,ಮಂಜುನಾಥ ರೆಡ್ಡಿ, ತಂಬಿಹಳ್ಳಿ ನಾರಾಯಣಸ್ವಾಮಿ, ಇಂದುಮಂಗಲ ಲೋಕೇಶ್, ವಪಚ್ಚಹಳ್ಳಿ ಮುನಿರಾಜು, ದೊಡ್ಡಮಲ್ಲೆ ಹರೀಶ್ ಗೌಡ, ದಿನ್ನಹಳ್ಳಿ ರಮೇಶ್, ಜಗನ್ ರೆಡ್ಡಿ, ಸಂಜುಮೋನಿಷ್, ಮಾಸ್ತಿ ಪ್ರವೀಣ್, ಸುಹೇಲ್, ಪುರ ಅಂಬರೀಶ್,ವಾಸು ಸೇರಿದಂತೆ ಹಲವಾರು ಕಾರ್ಯಕರ್ತರು ಹಾಜರಿದ್ದರು.

# ಜಾತ್ರಾ ಮಹೋತ್ಸವಕ್ಕೆ ನಾಂದಿ ಪೂಜೆ: ಜಾತ್ರಾ ಚಾಲನೆ

**ನಾಗಮಂಗಲ:** ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ ಜಾತ್ರಾ ಮಹೋತ್ಸವದಿನಾಂಕ 07.03.2025 ರಿಂದ 15.03.2025 ರವರೆಗೆ ನಡೆಯುವ ಶ್ರೀ ಆದಿಚುಂಚನಗಿರಿ ಜಾತ್ರಾ ಮಹೋತ್ಸವ ಪ್ರಾರಂಭದ ನಾಂದಿ ಪೂಜೆ ಮತ್ತು ಧರ್ಮಧ್ವಜ ಸ್ಥಾಪನೆ ನೆರವೇರಿಸಿ ಜಾತ್ರಾ ಮಹೋತ್ಸವಕ್ಕೆ ಶ್ರೀ ನಿರ್ಮಲಾನಂದ ಸ್ವಾಮೀಜಿ ಅವರು ಚಾಲನೆ ನೀಡಿ ಆಶೀರ್ವದಿಸಿದ್ದಾರೆ.

ಈ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಎಲ್ಲಾ ಶಾಖೆಯ ಪೂಜ್ಯ ಸ್ವಾಮೀಜಿಗಳವರು, ಗಣ್ಯರು, ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು.

ಬಿಜಿಎಸ್ ಕ್ರೀಡೋತ್ಸವಗೆ ಚಾಲನೆ

ಜಾತ್ರಾ ಮಹೋತ್ಸವ ಪ್ರಯುಕ್ತ ಆಯೋಜಿಸಲಾಗಿದ್ದ ಬಿಜಿಎಸ್ ಕ್ರೀಡೋತ್ಸವವನ್ನು ಇದೇ ಸಂದರ್ಭದಲ್ಲಿ ಶ್ರೀಗಳು ಉದ್ಘಾಟಿಸಿದರು.

ಈ ಸಮಾರಂಭದಲ್ಲಿ ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಎಲ್ಲಾ ಶಾಖೆಯ ಪೂಜ್ಯ ಸ್ವಾಮೀಜಿಗಳವರು ಮತ್ತು ಭಾರತೀಯ ಕಬ್ಬಡಿ ಕ್ರೀಡಾಪಟು ಬಿ.ಸಿ ರಮೇಶ್ ರವರು, ಭಾರತೀಯ ವಾಲಿಬಾಲ್ ಕ್ರೀಡಾಪಟು ಕುಮಾರಿ ಕೆ ಎಮ್ ಹಾಣಿ ಅವರು, ಮಂಡ್ಯ ಜಿಲ್ಲೆ ಪೊಲೀಸ್ ವರಿಷ್ಠಾಧಿಕಾರಿಗಳಾದ ಮಲ್ಲಿಕಾರ್ಜುನ ಬಾಲದಂಡಿ ಅವರು, ಗಣ್ಯರು, ವಿದ್ಯಾರ್ಥಿಗಳು ಸಿಬ್ಬಂದಿ ವರ್ಗದವರು ಕ್ರೀಡಾಭಿಮಾನಿಗಳು ಮತ್ತು ಶ್ರೀಮಠದ ಸದ್ಭಕ್ತರು ಉಪಸ್ಥಿತರಿದ್ದರು.



# ಭಜನ-ಪ್ರವಚನ-ಸಂಕೀರ್ತನ





**ಬೆಂಗಳೂರು:** ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್ ವತಿಯಿಂದ ವಿಜಯನಗರದ ಮಾಧ್ವ ಸಂಘದಲ್ಲಿ ಮಾ.11ರಿಂದ 14ರ ವರೆಗೆ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಭಜನಾ ಕಾರ್ಯಕ್ರಮ:** ಪ್ರತಿದಿನ ಸಂಜೆ 5-30ಕ್ಕೆ.ಮಾರ್ಚ್11-ವಿಜಯನಗರದ ಪವಿತ್ರ ಗಾನ ವೃಂದ, ಮಾರ್ಚ್ 12-ಅಮರಜ್ಯೋತಿನಗರದ ಶ್ರೀ ಗುರು ರಾಘವೇಂದ್ರ ಭಜನಾ ಮಂಡಳಿ, ಮಾರ್ಚ್ 13-ಬಸವೇಶ್ವರನಗರದ ಅಲಕನಂದ ಭಜನಾ ಮಂಡಳಿ.

**ಪ್ರವಚನ ಕಾರ್ಯಕ್ರಮ:** ಮಾ.11ರಿಂದ 13, ಪ್ರತಿದಿನ ಸಂಜೆ 6-30ಕ್ಕೆ. **ಪ್ರವಚನಕಾರರು:** ಡಾ|| ವೆಂಕಟೇಶ್ ಆಚಾರ್ಯ. ವಿಷಯ : " ಮಾರ್ಕಂಡೇಯ ಪುರಾಣ".

**ಹರಿನಾಮ ಸಂಕೀರ್ತನೆ:** ಮಾ.14, ಶುಕ್ರವಾರ ಸಂಜೆ 6-00 **ಗಂಟೆಗೆ. ಗಾಯನ:** ಶ್ರೀ ಪ್ರಾಣೇಶ್ ಪಿ. ಭಾರಧ್ವಾಜ್ ಮತ್ತು ಶ್ರೀ ಕೌಶಿಕ್. **ಕೀ-ಬೋರ್ಡ್:** ಶ್ರೀ ಅಮಿತ್ ಶರ್ಮಾ, ತಬಲಾ: ಶ್ರೀ ಶ್ರೀನಿವಾಸ ಕಾಖಂಡಕಿ. **ಕಾರ್ಯಕ್ರಮ ನಡೆಯುವ ಸ್ಥಳ:** ವಿಜಯ ಮಧ್ವ ಸಂಘ, #37/2, ಗಂಗಾಧರ ಬಡಾವಣೆ,2ನೇ ಮುಖ್ಯರಸ್ತೆ, ವಿಜಯನಗರ, ಬೆಂಗಳೂರು - 560 040 ಈ ಮೇಲ್ಕಂಡ ಎಲ್ಲಾ ಕಾರ್ಯಕ್ರಮಗಳಲ್ಲೂ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಟಿಟಿಡಿ ಹೆಚ್.ಡಿ.ಪಿ.ಪಿ. ಸಂಚಾಲಕರಾದ ಡಾ|| ಪಿ. ಭುಜಂಗರಾವ್ ವಿನಂತಿಸಿದ್ದಾರೆ.

# ಹಕ್ಕಿ ಜ್ವರ ಕುರಿತು ಅರಿವು ಮೂಡಿಸಲು ಕ್ರಮ



**ಶಿಡ್ಲಘಟ್ಟ:** ಹಕ್ಕಿ ಜ್ವರ ಪಕ್ಷಿಗಳಿಗೆ ಹರಡುವ ಖಾಯಿಲೆಯಾಗಿದ್ದು, ಮನುಷ್ಯರಿಂದ ಮನುಷ್ಯರಿಗೆ ಸಾಂಕ್ರಮಿಕವಾಗಿ ಹರಡುವುದಿಲ್ಲ. ಸಾರ್ವಜನಿಕರು ಆತಂಕಪಡುವ ಅಗತ್ಯವಿಲ್ಲ,ಕೋಳಿ ಮಾಂಸ ಹಾಗೂ ಮೊಟ್ಟೆ ಸೇವಿಸಲು ನಿರ್ಬಂಧ ಇಲ್ಲ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಕೋಳಿ ಸಾಕಾಣಿಕೆ ಕೇಂದ್ರಗಳು, ಕೋಳಿ ಮಾಂಸ ಹಾಗೂ ಮೊಟ್ಟೆ ಅಂಗಡಿಗಳಿಗೆ ಹಕ್ಕಿ ಜ್ವರ ಕುರಿತು ಅರಿವು ಮೂಡಿಸಲು ಕ್ರಮ ವಹಿಸಿದ್ದೇವೆ ಎಂದು ತಹಶೀಲ್ದಾರ್ ಬಿ.ಎನ್.ಸ್ವಾಮಿ ತಿಳಿಸಿದರು. ನಗರದ ತಾಲ್ಲೂಕು ಕಚೇರಿಯಲ್ಲಿ ಹಕ್ಕಿ ಜ್ವರ ಕುರಿತು ಪೂರ್ವ ಬಾವು ಸಭೆಯಲ್ಲಿ ಅವರು ಮಾತನಾಡಿದರು.

ಕೋಳಿ ಮಾಂಸ ಸೇವನೆ ಮಾಡುವವರು ಕೂಡ ಹೆಚ್ಚಾಗಿ ಮಾಂಸ ಮತ್ತು ಮೊಟ್ಟೆಗಳನ್ನು 70 ಡಿಗ್ರಿ ಅಧಿಕ ಉಷ್ಣಾಂಶದಲ್ಲಿ ಕನಿಷ್ಠ 30 ನಿಮಿಷ ಬೇಯಿಸಿ ದಾಗ ವೈರಾಣು ನಾಶಗೊಳ್ಳುತ್ತದೆ. ಸಾರ್ವಜನಿಕರು ಮಾಂಸ ಮತ್ತು ಮೊಟ್ಟೆಗಳನ್ನು ಚೆನ್ನಾಗಿ ಬೇಯಿಸಿದ ನಂತರ ಸೇವಿಸಬೇಕು ಎಂದರು.

ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಕೋಳಿ ಸಾಕಣೆ ಕೇಂದ್ರಗಳ ಮಾಲೀಕರಿಗೆ ಕೋಳಿಗಳಲ್ಲಿ ಅಸಹಜ ಸಾವು ಕಂಡು ಬಂದಲ್ಲಿ ತಕ್ಷಣವೇ ಪಶು ಪಾಲನಾ ಇಲಾಖೆಗೆ ತಿಳಿಸುವಂತೆ ಹಾಗೂ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಬರುವ ಕೋಳಿ ಮಾಂಸ ಮತ್ತು ಮೊಟ್ಟೆ ಮಾರಾಟ ಅಂಗಡಿಗಳಲ್ಲಿ ಉತ್ಪಾದನೆಯಾಗುವ ತ್ಯಾಜ್ಯಗಳನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಲು ಕ್ರಮವಹಿಸಲು ಸೂಚನೆ ನೀಡಲಾಗಿದೆ ಎಂದು ಹೇಳಿದರು.ಈ ಸಂದರ್ಭದಲ್ಲಿ ತಾಲ್ಲೂಕು ಪಂಚಾಯಿತಿ ಇ.ಒ.ಹೇಮಾವತಿ, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ ಮೂರ್ತಿ, ಆರೋಗ್ಯ ಇಲಾಖೆಯ ದೇವರಾಜ್, ಅಪೇಕ್ಷ ಮುಂತಾದವರು ಹಾಜರಿದ್ದರು.

# 32 ಸಾವಿರ ಕೋಟಿ ಬಾಕಿ ಹಣ ಬಿಡುಗಡೆ ಮನವಿ




**ದೇವನಹಳ್ಳಿ:** ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಿಗೆ ಸಂಬಂದಿಸಿದಂತೆ ನಮ್ಮ ಗುತ್ತಿಗೆದಾರರು ಮಾಡಿರುವ ಕಾಮಗಾರಿಯ 32 ಸಾವಿರ ಕೋಟಿ ಬಾಕಿ ಹಣ ಬಿಡುಗಡೆ ಮಾಡಬೇಕಿದೆ ಎಂದು ಕರ್ನಾಟಕ ರಾಜ್ಯ ಗುತ್ತಿಗೆದಾರರ ಸಂಘದ ರಾಜ್ಯಾಧ್ಯಕ್ಷ ಆರ್. ಮಂಜುನಾಥ ಹೇಳಿದರು.

ದೇವನಹಳ್ಳಿ ಪಟ್ಟಣದ ಪ್ರವಾಸಿ ಮಂದಿರದಲ್ಲಿ ಚಿಕ್ಕಬಳ್ಳಾಪುರ ಹಾಗು ಬೆಂಗಳೂರು ಗ್ರಾಮಾಂತರ ಜಿಲ್ಲಾ ಗುತ್ತಿಗೆದಾರರ ಕುಂದುಕೊರತೆ ಆಲಿಕೆ ಸಭೆಯ ಬಳಿಕ ಅಭಿನಂದನೆ ಸ್ವೀಕರಿಸಿದ ಬಳಿಕ ಅವರು ಮಾತನಾಡಿ ಮಾರ್ಚ 3 ರಂದು ಮುಖ್ಯಮಂತ್ರಿಗಳನ್ನು ಬೆಟಿ ಮಾಡಿ ಈ ಬಗ್ಗೆ ಮನವಿ ಸಲ್ಲಿಸಿದ್ದೆವೆ ಇದಕ್ಕೆ ಸಿಎಂ. ಹಾಗೂ ಡಿಸಿಎಂ. ಮಾತನಾಡಿ ಎಷ್ಟು ಹಣ ಒಟ್ಟಿಗೆ ಕೊಡಲಾಗುವುದಿಲ್ಲ ನಾವು ಹಂತಹಂತವಾಗಿ ಬಿಡುಗಡೆ ಮಾಡುತ್ತೆವೆ ಎಂದು ಭರವಸೆ ನೀಡಿದ್ದಾರೆ ನಮ್ಮ ಗುತ್ತಿಗೆದಾರರು ರಾಜಕೀಯ ಮೇಲಾಟಕ್ಕೆ ಬಲಿಯಾಗಬಾರದು ನಮಗೆ ಯಾವುದೇ ಜಾತಿ ಧರ್ಮ ಪಕ್ಷ ಬೇಧಭಾವವಿಲ್ಲ ನಾವೆಲ್ಲಾ ಒಂದೆ ಅದೇ ರೀತಿ ಹೊರ ರಾಜ್ಯದ ಗುತ್ತಿಗೆದಾರರಿಗೆ ಇಲ್ಲ ಕಾಮಗಾರಿ ಗುತ್ತಿಗೆ ನೀಡಬಾರದೆಂದು ಸರ್ಕಾರಕ್ಕೆ ಒತ್ತಾಯಿಸಲಾಗಿದೆ , ಹೊಸದಾಗಿ ಗುತ್ತಿಗೆ ಲೈಸನ್ಸ್ ಪಡೆದುಕೊಮಡು ಬರುವ ಯುವ ಗುತ್ತಿಗೆದಾರರು ಟೆಂಡರವ ಹಾಕಿದರೆ ಅನುಭವವಿಲ್ಲ ಎಂಬ ಕಾರಣ ಒಡ್ಡಿ ಅವರ ಟೆಂಡರ್ ತಿರಸ್ಕರಿಸುವ ಕ್ರಮ ಸರಿಯಲ್ಲ ಅವರು ಡಿಪ್ಲಮೋ , ಸಿವಿಲ್ ಇಂಜಿನಿಯರಿಂಗ್ ಮಾಡಿ ಬಂದಿರುತ್ತಾರೆ ಅಂತಹವರಿಗ ಹಂತಹಂತವಾಗಿ ಅವಕಾಶ ನೀಡಬೇಕು ಎಂದರು. ಕಮೀಷನ್ ಬಗ್ಗೆ ಎಲ್ಲಾ ಸರ್ಕಾರಗಳಲ್ಲಿ ಇರುತ್ತದೆ ಅದನ್ನು ನಾವು ಹೇಳಲಾಗದು ಎಂದರು. ಹಿಂದೆ ಕೆಂಪಣ್ಣನವರು ಕೆಲಸ ಮಾಡಿದಂತೆ ನಾವು ಸಹ ನಿಮ್ಮ ಕೆಲಸ ಮಾಡಲು ಸದಾ ಸಿದ್ದನಿದ್ದೇನೆ.ಈ ವೇಳೆ ಜಿಲ್ಲಾ ಗುತ್ತಿಗೆದಾರರ ಸಂಘದ ರಾಜ್ಯ ಸಮಿತಿ ಸದಸ್ಯ ಲಕ್ಷ್ಮೀಪತಿ ಉಮೇಶ್, ಹನುಮಂತಪ್ಪ, ದೇವನಹಳ್ಳಿ ತಾಲೂಕು ಅಧ್ಯಕ್ಷ ಸುಬ್ರಮಣಿ, ಸಿದ್ದಪ್ಪ, ಶಿಡ್ಲಘಟ್ಟದ ಮಂಜುನಾಥ್, ಯಲಿಯುರು ಚಿಕ್ಕಣ್ಣ ಹಾಗೂ ಎರಡೂ ಜಿಲ್ಲೆಗಳ ನೂರಾರು ಗುತ್ತಿಗೆದಾರರು ಭಾಗವಹಿಸಿದ್ದರು.

# ಮುನಿಯಪ್ಪ ಅವರ ಜನ್ಮದಿನ: ರೋಗಿಗಳಿಗೆ ಹಣ್ಣು ಹಂಪಲು ವಿತರಣೆ



**ಚಿಕ್ಕಬಳ್ಳಾಪುರ:** ಆಹಾರ,ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಸಚಿವರಾದ ಕೆ.ಹೆಚ್.ಮುನಿಯಪ್ಪ ಅವರ 77ನೇ ಹುಟ್ಟು ಹಬ್ಬದ ಅಂಗವಾಗಿ ಶುಕ್ರವಾರ ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಪಟ್ರೇನಹಳ್ಳಿ ಕೃಷ್ಣ ಸಚಿವರಾದ ಕೆ.ಹೆಚ್. ಮುನಿಯಪ್ಪ ಸಜ್ಜನ ಸರಳತೆಯಿಂದಲೇ ಹೆಸರುವಾಸಿಯಾಗಿದ್ದು, ಕೇಂದ್ರ ಸಚಿವರಾಗಿ,ಕೋಲಾರ ಲೋಕಸಭಾ ಕ್ಷೇತ್ರದಿಂದ ಸತತವಾಗಿ ಆಯ್ಕೆಯಾಗಿ ಜನರ ಸೇವೆ ಸಲ್ಲಿಸುತ್ತ ಬಂದಿದ್ದು ಯಾವತ್ತೂ ಅಧಿಕಾರದಲ್ಲಿ ಅಂಟುಕೂಂಡು ಇರಲೇ ಬೇಕು ಎನ್ನುವವರಲ್ಲ,

ಬದಲಿಗೆ ಮಾನವೀಯ ಮೌಲ್ಯಗಳ ಬಗ್ಗೆ ಪ್ರೀತಿ,ವಿಶ್ವಾಸ,ಕರುಣೆ ಇಂತಹ ವಿಚಾರಗಳಲ್ಲಿ ಮುನಿಯಪ್ಪ ಅವರು ಹೆಚ್ಚಿನ ಒತ್ತು ನೀಡುತ್ತಿದ್ದರು. ಇನ್ನು ಅವರಿಗೆ ತಾಯಿ ಮಕ್ಕಳು ಎಂದರೆ ಬಹಳಷ್ಟು ಪ್ರೀತಿ ಹಾಗಾಗಿ ಅವರ ಹುಟ್ಟು ಹಬ್ಬದಂದು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯನ್ನು ಆಯ್ಕೆ ಮಾಡಿ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಾಗಿದೆ. ದೇವರು ಕೆ.ಹೆಚ್. ಮುನಿಯಪ್ಪ ರವರಿಗೆ ಜನಸೇವೆ ಮಾಡಲು ಇನ್ನಷ್ಟು ಶಕ್ತಿ ನೀಡಲಿ ಅಧಿಕಾರ,ಆಯಸ್ಸು ಆರೋಗ್ಯ ನೀಡಲಿ ಎಂದರು.

ಹಿರಿಯ ಮುಖಂಡ ವಕೀಲ ನಾರಾಯಣ ಸ್ವಾಮಿ ಮಾತನಾಡಿ ಸಚಿವರಾದ ಕೆ.ಹೆಚ್. ಮುನಿಯಪ್ಪ ರೈತ ಕುಟುಂಬದಿಂದ ಬಂದವರು ಸತತವಾಗಿ ಏಳು ಬಾರಿ ಸಂಸದರಾಗಿ ಆಯ್ಕೆ ಆಗಿದ್ದು ತಮ್ಮದೇ ಆದಂತಹ ಛಾಪು ಮೂಡಿಸಿದ್ದಾರೆ,ಅವರು ಉನ್ನತ ಮಟ್ಟಕ್ಕೆ ಏರಿದ್ದು ಕಾಂಗ್ರೆಸ್ ಪಕ್ಷವನ್ನು ಬೆಳಸಿ ಉಳಿಸುವವರನ್ನ ಸಂಘಟನೆ ಮಾಡುವ ಶಕ್ತಿ ಸಾಮರ್ಥ್ಯ ಇರುವವರನ್ನು ಗುರುತಿಸಿ ಬೆಳೆಸುವ ನಿಟ್ಟಿನಲ್ಲಿ ಮುನಿಯಪ್ಪ ಅವರು ಮಾಡುತ್ತಾರೆ ಎಂದು ವಿಶ್ವಾಸವಿದೆ ಎಂದರು.

ಮಾಜಿ ಶಾಸಕಿ ಅನ್ಸುಯಮ್ಮ ಮಾತನಾಡಿ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರಾದ ಕೆ.ಹೆಚ್. ಮುನಿಯಪ್ಪ ಸರಳತೆಯನ್ನು ಅನುಸರಿಸಿ ಜನರಿಗೆ ಸ್ಪಂದಿಸುವ ಮೂಲಕ ಜನಪ್ರಿಯತೆ ಗಳಿಸಿದ್ದಾರೆ ಜನರ ಸೇವೆ ಮಾಡುವ ಅವಕಾಶ ಇನ್ನಷ್ಟು ಮೂಡಿ ಬರಲಿ ಎಂದು ಆಶಿಸುತ್ತಾ ಕೆ.ಹೆಚ್.ಮುನಿಯಪ್ಪ ರವರ ಹೆಸರಲ್ಲಿ ಹಾಡು ಹಾಡಿದರು.ಈ ಸಂದರ್ಭದಲ್ಲಿ ಮುಖಂಡರಾದ ನಾಯನಹಳ್ಳಿ ನಾರಾಯಣಸ್ವಾಮಿ, ಲಕ್ಷ್ಮಣ್, ಕಿಸಾನ್ ಕಾಂಗ್ರೆಸ್ನ ಕ್ರಿಷ್ಣಪ್ಪ, ಮರಸನಹಳ್ಳಿಪ್ರಕಾಶ್, ರಾಮಚಂದ್ರ, ಜಗದೀಶ್, ನಾಗಭೂಷಣ್,ವಿಜಿ, ಸಾವಿತ್ರಮ್ಮ, ಮಂಗಳ ಪ್ರಕಾಶ್, ನಾರಾಯಣ ಸ್ವಾಮಿ, ಅಣ್ಣೆಮ್ಮ, ಉಮೇಶ್. ಜಿ ಮತ್ತು ಇತರರು ಉಪಸ್ಥಿತರಿದ್ದರು.

# ಗ್ರಾಮ ಪಂಚಾಯಿತಿ ಕಾರ್ಯಾಲಯ ತೆರೆಯಲು ಒತ್ತಾಯ



**ಮುಳಬಾಗಿಲು:** ತಾಲ್ಲೂಕಿನ ಮುದಿಗೆರೆ ಗ್ರಾಮದಲ್ಲೇ ಗ್ರಾಮ ಪಂಚಾಯಿತಿ ಕಾರ್ಯಾಲಯವನ್ನು ತೆರೆಯಲು ಒತ್ತಾಯಿಸಿ ದಿನಾಂಕ 10-03-2025 ಸೋಮವಾರದಿಂದ ಮುಳಬಾಗಿಲು ತಾಲ್ಲೂಕು ಪಂಚಾಯಿತಿ ಆವರಣದಲ್ಲಿ ದಲಿತ ಸಂಘರ್ಷ ಸಮಿತಿ ಸಂಯೋಜಕ ಮುಳಬಾಗಿಲು ತಾಲ್ಲೂಕು ಶಾಖೆ ವತಿಯಿಂದ ಅನಿರ್ದಿಷ್ಟಾವಧಿ ಪ್ರತಿಭಟನಾ ಧರಣಿ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ,

ಈ ಸಂಬಂಧ ಶನಿವಾರ ಪ್ರವಾಸಿ ಮಂದಿರದಲ್ಲಿ ಪೂರ್ವಭಾವಿ ಸಭೆಯನ್ನು ಕರೆಯಲಾಗಿದೆ.

ಈ ಸಭೆಯಲ್ಲಿ ಮುದಿಗೆರೆ ಗ್ರಾಮಸ್ಥರು ಮತ್ತು ದಲಿತ ಸಂಘರ್ಷ ಸಮಿತಿ ಸಂಯೋಜಕ ಪದಾಧಿಕಾರಿಗಳಾದ ಮೆಕಾನಿಕ್ ಶ್ರೀನಿವಾಸ್, ಕೀಲುಹೊಳಲಿ ಸತೀಶ್, ತಾತಿಕಲ್ ರಾಮಚಂದ್ರ, ಗುಜ್ಜಮಾರಂಡಹಳ್ಳಿ ಜಗದೀಶ್, ಗೊಲ್ಲಹಳ್ಳಿ ವೆಂಕಟೇಶ್, ಗಣೇಶ್ ಪಾಳ್ಯ ಕಿಟ್ಟ, ಕಪ್ಪಲಮುಡುಗು ಅಶೋಕ್, ರೆಡ್ಡಿ ಹಳ್ಳಿ ಅಭಿ, ಒ.ಗಿ. ಬಾಲಕೃಷ್ಣ, ಶೆಟ್ಟಿಕಲ್ ವೆಂಕಟೇಶ್, ಕಾರ್ಪೆಂಟರ್ ಹರಿ,ವಾನಗಾನಹಳ್ಳಿ ವೆಂಕಟೇಶಪ್ಪ, ಲಯನ್ ಹರಿ, ಗ್ರಾಮ ಪಂಚಾಯತಿ ಸದಸ್ಯರಾದ ಮಲ್ಲೆಕೊಪ್ಪ ಅಂಬರೀಶ್, ರೆಡ್ಡಮ್ಮ ಚಿನ್ನಪ್ಪಯ್ಯಾ, ಸಂಪತ್, ಮಾಜಿ ಗ್ರಾಮ ಪಂಚಾಯಿತಿ ಸದಸ್ಯರಾದ ರಾಜಪ್ಪ, ಚಂದ್ರಪ್ಪ, ವಿಶ್ವನಾಥ್, ಜಗನ್, ಆಂಜಿ, ವೆಂಕಟರಾಮಪ್ಪ, ಚಲಪತಿ, ಸೋಮಪ್ಪ, ರಮೇಶ್, ರೆಡ್ಡಪ್ಪ, ಮತ್ತಿತರು ಭಾಗವಹಿಸಿದ್ದರು

# ಕರ್ನಾಟಕ ಸೇನೆ ವತಿಯಿಂದ ರಸ್ತೆ ತಡೆ



**ಮಾಲೂರು:** ತಾಲ್ಲೂಕಿನಲ್ಲಿ ಇತ್ತೀಚೆಗೆ ಟಿಪ್ಪರ್ ಲಾರಿಗಳ ಅಟ್ಟಹಾಸ, ವೇಗ ಮೀತಿಯಿಂದ ಸುಮಾರು ವಾಹನ ಸವಾರರು ಅಪಘಾತದಿಂದ ಮೃತ್ತಪಡುತ್ತಿರುವ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ಸೇನೆ ವತಿಯಿಂದ ರಸ್ತೆ ತಡೆ ನಡೆಸಿ ಪ್ರತಿಭಟನೆ ಹೋರಾಟ ಮಾಡಲಾಗುವುದು ಎಂದು ರಾಜ್ಯ ಪ್ರಧಾನ ಕಾರ್ಯದರ್ಶಿ ಚಾಕನಹಳ್ಳಿ ನಾಗರಾಜ್ ಹೇಳಿದರು.

ಪಟ್ಟಣದ ಬಾಲಾಜಿ ವೃತ್ತದಲ್ಲಿ ಶನಿವಾರ 8 ರಂದು ಮಾಲೂರು ತಾಲ್ಲೂಕು ಅಧ್ಯಕ್ಷ ಮಾದನಹಟ್ಟಿ ರವಿಕುಮಾರ್ ನೇತೃತ್ವದಲ್ಲಿ ಟಿಪ್ಪರ್ ಲಾರಿಗಳ ವಿರುದ್ಧ ಹಾಗೂ ವೃತ್ತಗಳಲ್ಲಿ ಸಿಗ್ನಲ್ ದೀಪಗಳ ಅಳವಡಿಕೆ ಮಾಡದ ಹಿನ್ನೆಲೆಯಲ್ಲಿ ಪ್ರತಿಭಟನೆ ನೆಡಸಲಾಗುವುದು.

ಈ ಪ್ರತಿಭಟನೆ ಹೋರಾಟಕ್ಕೆ ನಮ್ಮ ಕರ್ನಾಟಕ ಸೇನೆಯ ಪದಾಧಿಕಾರಿಗಳು, ವಾಹನ ಸವಾರರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಟಿಪ್ಪರ್ ಲಾರಿಗಳ ವಿರುದ್ಧ ಹೋರಾಟ ಮಾಡುವ ಮುಖಾಂತರ ಅಪಘಾತ ಗಳ ತಡೆಯಲು ಸಹಕಾರ ನೀಡುವಂತೆ ಮನವಿ ಮಾಡಿದರು.

# ಕೇಂದ್ರದ ಮಾದರಿ ವೇತನ ಪಡೆಯುವುದು ನಮ್ಮ ಗುರಿಯಾಗಿದೆ



**ಚಿಕ್ಕಬಳ್ಳಾಪುರ:** ಸಂಘಟಿತ ಹೋರಾಟದ ಫಲವಾಗಿ 7ನೇ ವೇತನ ಆಯೋಗದ ಶಿಫಾರಸ್ಸನ್ನು ಪರಿಪೂರ್ಣವಾಗಿ ಜಾರಿ ಮಾಡಿಸಿಕೊಂಡಿರುವ ನಾವು ಇದೇ ಒಗ್ಗಟ್ಟನ್ನು ಪ್ರದರ್ಶನ ಮಾಡಿದ್ದೇ ಆದಲ್ಲಿ ಕೇಂದ್ರದ ಮಾದರಿಯವೇತನ ಪಡೆಯುವುದು ಕಷ್ಟವಾಗದು ಎಂದು ಕರ್ನಾಟಕ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಕ್ಷರಿ ತಿಳಿಸಿಜಜಿಜಂಡಿಜ.

ನಗರದ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾ ಸರಕಾರಿ ನೌಕರರ ಸಂಘದಿಂದ ಏರ್ಪಡಿಸಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಮತ್ತು ರಾಜ್ಯಾಧ್ಯಕ್ಷರಿಗೆ ಸನ್ಮಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹೆಚ್ಚಾಗುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಸರಕಾರಿ ನೌಕರರ ಸಂಖ್ಯೆಯೂ ಬೆಳೆಯಬೇಕು. ಸರಕಾರಗಳು ಹೊಸ ನೇಮಕಾತಿಗೆ ಮನಸ್ಸು ಮಾಡಿದಲ್ಲಿ ಸರಕಾರಿ ನೌಕರರು ಅನಗತ್ಯ ಒತ್ತಡಕ್ಕೆ ಒಳಗಾಗುವುದು ತಪ್ಪಲಿದೆ. ರಾಜ್ಯದ ಜನಸಂಖ್ಯೆ 6.5ಕೋಟಿ ದಾಟುತ್ತಿದ್ದರೂ ಕೂಡ ಕೇವಲ 5.12ಲಕ್ಷ ಸರಕಾರಿ ನೌಕರರು ಕೆಲಸ ಮಾಡುತ್ತಿದ್ದಾರೆ. ಸರಕಾರಗಳು ಜಾರಿಗೊಳಿಸುವ ಯೋಜನೆಗಳನ್ನು ಸರಿಯಾದ ಕ್ರಮದಲ್ಲಿ ಸಕಾಲದಲ್ಲಿ ಅರ್ಹಫಲಾನುಭವಿಗೆ ತಪುಪಿಸಬೇಕಾದರೆ ಈ ಸಂಖ್ಯೆ ಹೆಚ್ಚಾಗಬೇಕಿದೆ ಎಂದರು.

**ಒಪಿಎಸ್ ಆಗಲಿದೆ!!**

ಮುಖ್ಯಮಂತ್ರಿಗಳು ಉಪಮುಖ್ಯಮಂತ್ರಿಗಳು ರಾಜ್ಯದ 2.5ಲಕ್ಷ ಎನ್‌ಪಿಎಸ್ ನೌಕರರಿಗೆ ಸಿಹಿ ಸುದ್ದಿ ಕೊಡಲು ಸಿದ್ಧತೆ ನಡೆಸಿದ್ದಾರೆ.ಸಮಿತಿಯ ಜತೆ ನಡೆದ ಸಭೆಯಲ್ಲಿ ನಾನು ಒಮ್ಮೆ ಭಾಗಿಯಾಗಿದ್ದೇನೆ. ನನಗೆ ನಂಬಿಕೆಯಿದೆ ಶೀಘ್ರದಲ್ಲಿಯೇ ಈ ಬೇಡಿಕೆ ಫಲನೀಡಲಿದೆ. ಸಂಘವು ಪ್ರತಿಯೊಬ್ಬ ಸದಸ್ಯರ ಹಿತಕಾಯಲು ಹಗಲುರಾತ್ರಿ ಪ್ರಾಮಾಣಿಕವಾಗಿ ಶ್ರಮಿಸುತ್ತಿದೆ. ಈ ಬಗ್ಗೆ ಯಾರಿಗೂ ಅನುಮಾನವೇ ಬೇಡ ಎಂದರು.

ರಾಜ್ಯದ ಯಾವುದೇ ಸರಕಾರಿ ನೌಕರರ ಕರ್ತವ್ಯದ ಸಮಯದಲ್ಲಿ ಮೃತಪಟ್ಟರೆ ಆತನ ಕುಟುಂಬಕ್ಕೆ 1 ಕೋಟಿ ಪರಿಹಾರ ಕೊಡಿಸುತ್ತೇನೆ ಎಂದು ನಾನು ಎರಡನೇ ಅವಧಿಗೆ ಚುನಾವಣೆಗೆ ನಿಂತ ಸಂದರ್ಭದಲ್ಲಿ ಘೋಷಣೆ ಮಾಡಿದ್ದೆ. ಅಧ್ಯಕ್ಷನಾಗಿ 2 ತಿಂಗಳಾಗುವಷ್ಟರಲ್ಲಿ ಈ ಭರವಸೆಯನ್ನು ಕ್ಯಾಬಿನೆಟ್ ಮುಂದೆ ಇಟ್ಟು ಆದೇಶ ಮಾಡಿಸಿದ್ದೇನೆ. ಅಪಘಾತವಾದಲ್ಲಿ ಮೃತನಾದರೆ 25 ಲಕ್ಷ ಪರಿಹಾರ ನೊಂದ ಕುಟುಂಬಕ್ಕೆ ದೊರೆಯಯುವಂತೆ ಮಾಡಿದ್ದೇನೆ.

**ಪ್ರತಿಭಾ ಪುರಸ್ಕಾರ!!**

2020ರಿಂದ ಪ್ರಾರಂಭವಾದ ಸರಕಾರಿ ನೌಕರರ ಕ್ಷೇಮಾಭಿವೃದ್ಧಿ ಸಂಘದ ಪ್ರತಿಭಾ ಪುರಸ್ಕಾರ ಕೇವಲ 5 ವರ್ಷಗಳಲ್ಲಿ 45 ಸಾವಿರ ಪ್ರತಿಭಾವಂತ ಮಕ್ಕಳನ್ನು ಗೌರವಯುತವಾಗಿ ಸನ್ಮಾನಿಸಿ ಅವರ ಶೈಕ್ಷಣಿಕ ಸಾಧನೆಗೆ ಮುನ್ನುಡಿ ಬರೆದಿದೆ. ಚೈಲ್ಡ್‌ರ್ ಲೀವ್ ಮೂಲಕ ಶಿಕ್ಷಕರಿಗೆ ಮಾತೆಯರಿಗೆ ಮಕ್ಕಳ ಪಾಲನೆ ಮಾಡಲು ಅವಕಾಶ ನೀಡಿದ್ದೇವೆ. 5 ವರ್ಷಗಳ ಅವಧಿಯಲ್ಲಿ 25 ಆದೇಶಗಳನ್ನು ಸರಕಾರದಿಂದ ಮಾಡಿಸಿದ್ದೇವೆ.40 ವರ್ಷಗಳಲ್ಲಿ ಆಗದ ಸಾಧನೆ ನಮ್ಮ ಸಂಘಟನೆ ಮಾಡಿದೆ ಎಂದರು.

**ಹಣಕೊಟ್ಟೇ ಗೆದ್ದಿದ್ದೇನೆ!!**

ಸರಕಾರಿ ನೌಕರರ ಸಂಘದ ಚುನಾವಣೆ ಇರಲಿ, ರಾಜಕಾರಣದ ಚುನಾವಣೆಗಳೇ ಇರಲಿ ಎಲ್ಲವೂ ದಿಕ್ಕು ತಪ್ಪಿವೆ. ಹಣ ಆಮಿಷಗಳಿಗೆ ಬಲಿಯಾಗಿ ಮತ ಚಲಾಯಿಸುವ ಪದ್ಧತಿ ನಾಗಾಲೋಟದಲ್ಲಿ ಸಾಗಿದೆ. ಸ್ವಾರ್ಥ, ಜಾತಿ, ಹಣ ಆಮಿಷಗಳ ಹಿಂದೆ ಬಿದ್ದು ನೈತಿಕತೆ ಹಾಳಾಗಿದೆ. ಇಂತಹ ಹೊತ್ತಲ್ಲಿ ಒಳ್ಳೆಯ ಕೆಲಸ, ಸಾಧನೆ ಪ್ರಾಮಾಣಿತೆಯಿಂದ ಗೆಲ್ಲುತ್ತೇವೆ ಎಂದರೆ ಕಷ್ಟ.ನಿಜ ಹೇಳಬೇಕೆಂದರೆ ನಾನೂ ಕೂಡ ದುಡ್ಡುಕೊಟ್ಟೇ ಗೆದ್ದಿದ್ದೇನೆ. ಪುಗಸಟ್ಟೆಯಾಗಿ ಅಲ್ಲ.ನಮ್ಮತ್ರಾನೂ ದುಡ್ಡು ಕೊಡಿಸಿಕೊಂಡಿದ್ದಾರೆ. ಯುವಕರೇ ಹಣ ಕೇಳುತ್ತಾರೆ. ಮೇಲಾಗಿ ರೆಸಾರ್ಟ್ ಇಲ್ವಾಗಿಫ್ಟ್, ಸೀರೆ, ಸಿಲ್ವರ್ ಇಲ್ವಾ ಎನ್ನುವ ಪರಿಸ್ಥಿತಿ ನಿರ್ಮಾಣವಾಗಿದೆ ಎನ್ನುವ ಮೂಲಕ ಭ್ರಷ್ಟಾಚಾರದ ಮುಖವನ್ನು ಬಯಲು ಮಾಡಿದರು.

**ಬೈಲಾ ತಿದ್ದುಪಡಿ!!**

ಸರಕಾರಿ ನೌಕರರ ಸಂಘದ ಚುನಾವಣೆಯಲ್ಲಿ ರಾಜ್ಯಾಧ್ಯಕ್ಷರ ಆಯ್ಕೆಯನ್ನು 5.25 ಲಕ್ಷ ಸದಸ್ಯರೂ ಮತ ಚಲಾಯಿಸಿ ಆರಿಸುವ ವ್ಯವಸ್ಥೆ ತರುವಂತೆ ಬೈಲಾಗೆ ತಿದ್ದುಪಡಿ ತರಲಾಗುತ್ತಿದೆ. ವ್ಯವಸ್ಥೆ ಭ್ರಷ್ಟ ಗೊಂಡಿದೆ. 920 ಮಂದಿಯನ್ನು ಇಟ್ಟುಕೊಂಡು ಆಟವಾಡುವ ಬದಲು ರಾಜ್ಯದ ಉದ್ದಗಲಕ್ಕೂ ಇರುವ 5.20ಲಕ್ಷ ಮತ ಚಲಾಯಿಸಿ ತಮ್ಮ ಪ್ರತಿನಿಧಿಗಳನ್ನು ಆರಿಸಸುವಂತೆ ಮಾಡಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮಾಧ್ಯಮದವರು ಈಬಗ್ಗೆ ಬರೆದರೆ ಬರಯಲಿ ನನಗೆ ಬೇಸರವಿಲ್ಲ ಎನ್ನುತ್ತಾ ಹಣದ ಹಿಂದೆ ಬಿದ್ದಿರುವ ಸಂಘದ ಚುನಾವಣೆ ಬದಲಾಗಬೇಕು ಎಂಬ ಇಂಗಿತವನ್ನು ವ್ಯಕ್ತಪಡಿಸಿದರು.

**ರಕ್ತ ಹೀರುವ ಸಂಘಟನೆ ಅಲ್ಲ!!**

ನಮ್ಮದು ರಕ್ತಹೀರುವ ಸಂಘಟನೆ ಅಲ್ಲ.ಬದ್ಧತೆಯಿಂದ ಕೆಲಸ ಮಾಡುವ ಸಂಘಟನೆ, ನಮ್ಮ ಕರೆಗೆ ಸ್ಪಂಧಿಸಿ ಹೋರಾಟಕ್ಕೆ ಬನ್ನಿ,ಯಾರು ಯಾರೋ ಕರೆ ನೀಡಿದರೆ ಹೋಗಬೇಡಿ, ಹೋದರೆ ಸರಕಾರ ಹೊಡೆದು ಆಳುವ ನೀತಿ ಅನುಸರಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಮಾತನಾಡಿ ನೌಕರರ ಬೇಡಿಕೆ ಈಡೇರಿಕೆಗೆ ಶ್ರಮಿಸಿದ್ದರಿಂದಲೇ ಎರಡನೇ ಬಾರಿಗೆ ಷಡಕ್ಷರಿ ಆಯ್ಕೆ ಆಗಿದ್ದಾರೆ.ಪಾದರಸದ ವ್ಯಕ್ತಿತ್ವವುಳ್ಳ ರಾಜ್ಯಾಧ್ಯಕ್ಷರು ನೌಕರರ ಬಂಧುವಾಗಿದ್ದಾರೆ ಎಂದರು.

ನೂತನ ಜಿಲ್ಲಾ ಸಂಘವು ನೌಕರರ ರೀಕ್ರಿಯೇಷನ್ ಕ್ಲಬ್ ಕಟ್ಟಲು 2 ಎಕರೆ ಭೂಮಿಗೆ ದೇಡಿಕೆಯಿಟ್ಟಿದ್ದಾರೆ. ಆಧ್ಯತೆಯ ಮೇಲೆ ನಿಮ್ಮ ಮನವಿ ಪರಿಗಣಿಸಿ ಮಂಜೂರಾತಿ ನೀಡಲು ಕ್ರಮವಹಿಸಲಾಗುವುದು ಎಂದರು.

ಸಾರ್ವಜನಿಕರ ಸೇವೆಯನ್ನು ಲವಲವಿಕೆಯಿಂದ ಮಾಡಲು ಸಾಧ್ಯ ಎಂದ ಅವರು ನಿಮ್ಮಸಹಕಾರದಿಂದ ಪ್ರಗತಿ ಮಾಪನದಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ 1 ರಿಂದ 5ನೇ ಸ್ಥಾನದಲ್ಲಿದೆ ಎಂದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾಧ್ಯಕ್ಷ ಎ.ನಾರಾಯಣಸ್ವಾಮಿ ಸ್ವಾಗತ ಭಾಷಣ ಮಾಡಿದ್ದರು.

ಈ ಸಂಧರ್ಭದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಗಿರಿಗೌಡ, ಅಪರ ಜಿಲ್ಲಾಧಿಕಾರಿ ಡಾ.ಭಾಸ್ಕರ್. ರಾಜ್ಯ ಖಜಾಂಚಿ ಶಿವರುದ್ರಯ್ಯ, ಗೌರವಾಧ್ಯಕ್ಷ ಬಸವರಾಜ,ರಾಜ್ಯ ಉಪಾಧ್ಯಕ್ಷರಾದ ಶಂಕರಪ್ಪ,ನಾಗಭೂಷಣ್ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧಿಕಾರಿ ಡಾ.ಮಹೇಶ್ ಕುಮಾರ್, ಶಿಡ್ಲಘಟ್ಟ ತಾಲ್ಲೂಕಿನ ಸಂಘದ ಅಧ್ಯಕ್ಷ ಸುಬ್ಬಾರೆಡ್ಡಿ, ಗುಡಿಬಂಡೆ ಅಧ್ಯಕ್ಷ ಕೆ.ವಿ.ನಾರಾಯಣಸ್ವಾಮಿ, ಬಾಗೇಪಲ್ಲಿ ತಾಲ್ಲೂಕಿನ ಅಧ್ಯಕ್ಷ ಹನುಮಂತರೆಡ್ಡಿ, ಅಶೋಕ್ ಕುಮಾರ್, ವೆಂಕಟರೋಣಪ್ಪ, ಮರಿಯಪ್ಪ,ಶಶಿಧರ,ಜಿಲ್ಲಾ ಸಂಘದ ಕಾರ್ಯದರ್ಶಿ ಬಾಲರಾಜ್.ಅರುಣ್ ಕುಮಾರ್,ಅಮರ್.ಪಿಡಿಒ ಸಂಘದ ಅಧ್ಯಕ್ಷ ಮೋಹನ್, ಕೆ.ಸಿ.ರೆಡ್ಡಪ್ಪ, ಸುನಿಲ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ನಜೀರ್ ಸೇರಿ ಎಲ್ಲಾ ವೃಂದ ಸಂಘದ ಪದಾಧಿಕಾರಿಗಳು ಮುಖಂಡರು ಮತ್ತು ಇತರರು ಇದ್ದರು.

## ದೇವಾಲಯ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನಾ ಮಹೋತ್ಸವ



**ಶಿಡ್ಲಘಟ್ಟ:** ತಾಲ್ಲೂಕಿನ ತಿಪ್ಪೇನಹಳ್ಳಿ ಹಾಗೂ ತುಮ್ಮನಹಳ್ಳಿಯ ಶ್ರೀಅಭಯ ಆಂಜನೇಯಸ್ವಾಮಿ ದೇವಾಲಯದ ಜೀರ್ಣೋದ್ಧಾರ ಹಾಗೂ ಪುನರ್ ಪ್ರತಿಷ್ಠಾಪನಾ ಮಹೋತ್ಸವವು ವಿಜೃಂಭಣೆಯಿಂದ ನಡೆಯಿತು. ದೇವಾಲಯದ ಜೀರ್ಣೋದ್ಧಾರ ಅಂಗವಾಗಿ ದೇವಾಲಯದಲ್ಲಿ ವಿಶೇಷ ಪೂಜೆ, ಹೋಮ, ಹವನ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನಡೆದವು. ಅಭಯ ಆಂಜನೇಯಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮಾಡಲಾಗಿತ್ತು.

ತಿಪ್ಪೇನಹಳ್ಳಿ ಹಾಗೂ ತುಮ್ಮನಹಳ್ಳಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಸಾವಿರಾರು ಭಕ್ತರು ದೇವಾಲಯದ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭಾಗವಹಿಸಿ ದೇವರ ಕೃಪೆಗೆ ಪಾತ್ರರಾದರು.

ನಗರ ಸೇರಿ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ ಭಕ್ತರು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು ಪ್ರತಿಷ್ಠಾಪನ ಮಹೋತ್ಸವದ ಅಂಗವಾಗಿ ವಿವಿಧ ಪೂಜಾ ಕಾರ್ಯಕ್ರಮಗಳು ನೆರವೇರಿದವು, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನೆರವೇರಿತು.

ಭಕ್ತಾದಿಗಳಿಗಾಗಿ ಅನ್ನ ಸಂತರ್ಪಣೆ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮಾಜಿ ಸಚಿವ ವಿ.ಮುನಿಯಪ್ಪ, ಕೆಎಂಎಫ್ ನಿರ್ದೇಶಕ ಆರ್. ಶೀನಿವಾಸ್, ಆಂಜನಪ್ಪ (ಪುಟ್ಟು),ಜಿಲ್ಲಾ ಪಂಚಾಯತಿ ಮಾಜಿ ಅಧ್ಯಕ್ಷ ವಿ.ಸುಬ್ರಮಣಿ, ದೇವಾಲಯ ಸಮಿತಿ ಸದಸ್ಯರಾದ ಭರತ್‌ಭೂಷಣ್, ಲಕ್ಷೀನಾರಾಯಣ್, ಗ್ರಾಮ ಪಂಚಾಯತಿ ಅಧ್ಯಕ್ಷೆ ಸುಶೀಲಮ್ಮ ನಾಗರಾಜ್, ಪಿಡಿಒ ಗೋಪಾಲ್, ಅರ್ಚಕರಾದ ಪದ್ಮನಾಭ, ಸ್ಥಳಿಯ ಮುಖಂಡರಾದ ಟಿ.ಎಸ್. ಮನೋಹರ್, ಆನಂದ್, ಗೋವಿಂದ ರೆಡ್ಡಿ, ಟಿ.ಎನ್. ಆನಂದ್ ಮಂಜುನಾಥ್, ಮುಂತಾದವರು ಪಾಲ್ಗೊಂಡಿದ್ದರು.

## ಬರಪೀಡಿತ ಜಿಲ್ಲೆಗಳಿಗೆ ಮತ್ತೆ ಬರೆ ಎಳೆದ ಬಜೆಟ್

**ಶಿಡ್ಲಘಟ್ಟ:** ಬರಪೀಡಿತ ಜಿಲ್ಲೆಗಳಿಗೆ ಮತ್ತೆ ಬರೆ ಎಳೆದ ಬಜೆಟ್, ಬಯಲುಸೀಮೆಗೆ ಶಾಶ್ವತ ನೀರಾವರಿ ಎಂಬುದಿನ್ನು ಮರೀಚಿಕೆ, ಅಂತರ್ಜಲ ಪಾತಾಳ ತಲುಪಿದೆ, ಕುಡಿಯುವ ನೀರಿನ ಮೂಲಗಳು ವಿಷಮಯವಾಗಿವೆ ಎಂದು ಬಜೆಟ್ ಬಗ್ಗೆ ಪ್ರತಿಕ್ರಿಯಿಸಿ ಶಾಶ್ವತ ನೀರಾವರಿ ಹೋರಾಟ ಸಮಿತಿ ಅಧ್ಯಕ್ಷರಾದ ಆರ್. ಆಂಜನೇಯರೆಡ್ಡಿ ಮಾತನಾಡಿದರು.



ಆದರೂ ಎತ್ತಿನಹೊಳೆಯ ಭ್ರಮೆಯಿಂದ ಹೊರಬಾರದ, ಕೆ.ಸಿ.ವ್ಯಾಲಿ ಮತ್ತು ಹೆಚ್.ಎನ್. ವ್ಯಾಲಿ ಯೋಜನೆಗಳ ಮೂರನೇ ಹಂತದ ಶುದ್ಧೀಕರಣಕ್ಕೂ ಮುಂದಾಗದ, ಜೀವನಾಡಿಗಳಾದ ಕೆರೆ, ಕುಂಟೆ, ಕಾಲುವೆಗಳ ಸಮಗ್ರ ಅಭಿವೃದ್ಧಿಗೂ ಗಮನ ಕೊಡದ, ಕೃಷ್ಣ–ಪೆನ್ನಾರ್ ನದಿ ಜೋಡಣೆ ಬಗ್ಗೆಯೂ ಚಕಾರವೆತ್ತದ ನಿರಾಶಾದಾಯಕ ಬಜೆಟ್ ಆಗಿದೆ ಎಂದರು.

## ಕಾರ್ಯದರ್ಶಿ ನೇಮಕ

ಚಿಕ್ಕಬಳ್ಳಾಪುರ: ತಾಲೂಕಿನ ಪೆರೆಸಂದ್ರ ಗ್ರಾಮದ ಸುನಿಲ್.ಪಿ. ಆರ್ ರವರ ಸರ್ಕಾರಿ ನೌಕರರ ಪರವಾದ ಸಂಘಟನಾತ್ಮಕ ಕಾರ್ಯ ಚಟುವಟಿಕೆಗಳು,ಹೋರಾಟಗಳಲ್ಲಿ ಸಕ್ರಿಯ ಪಾಲ್ಗೊಳ್ಳುವಿಕೆ,ವಿವಿಧ ಸರ್ಕಾರಿ ಶಾಲೆಗಳಿಗೆ ದಾನಿಗಳಿಂದ ಮೂಲಭೂತ ಸೌಲಭ್ಯಗಳನ್ನು ಒದಗಿಸಿರುವುದು ಹಾಗೂ ಶಿಕ್ಷಕರ ಮತ್ತು ನೌಕರರಿಗೆ ಸರ್ಕಾರದಿಂದ ಆಗಿಂದಾಗೆ ಸರ್ಕಾರಿ ಸೌಲಭ್ಯಗಳನ್ನು ಒದಗಿಸಿ ಕೊಡುವಲ್ಲಿ ಎತ್ತಿದ ಕೈ, ಕಾರ್ಯಕ್ರಮಗಳ ಆಯೋಜನೆಯಲ್ಲಿ ನಿಪುಣತೆ, ಇವೆಲ್ಲವನ್ನ ಗಮನಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷರಾದ ಶ್ರೀ ಷಡಕ್ಷರಿ ರವರು ಹಾಗೂ ರಾಜ್ಯ ಪದಾಧಿಕಾರಿಗಳು ಶ್ರೀಯುತ ಸುನಿಲ್.ಪಿ.ಆರ್ ರವರನ್ನು ನಾಮನಿರ್ದೇಶನ ರಾಜ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಲಾಗಿದೆ.



## ಮಹದೇಶ್ವರ ಬೆಟ್ಟದ ಪೊಲೀಸರಿಂದ ಭರ್ಜರಿ ಬೇಟೆ




**ವರದಿ: ಪ್ರಕಾಶ್ ಕಾಮಗೆರೆ**

**ಹನೂರು :** ತಾಲೂಕಿನ ಇತಿಹಾಸ ಪ್ರಸಿದ್ಧ ಧಾರ್ಮಿಕ ಪುಣ್ಯಕ್ಷೇತ್ರ ಮಲೆ ಮಹದೇಶ್ವರ ಬೆಟ್ಟದಲ್ಲಿ ಸಾಲೂರು ಮಠಕ್ಕೆ ತೆರಳುವ ರಸ್ತೆ ಬದಿಯಲ್ಲಿ ಅಕ್ರಮ ಮದ್ಯ ಮಾರಾಟದ ಎರಡು ಅಡ್ಡಗಳ ಮೇಲೆ ದಾಳಿ ಮಾಡಿ 90 ಎಂಎಲ್ 259 ಲೀಟರ್ ನ 2880 ಪೌಚ್ ಗಳನ್ನು ಪೊಲೀಸರು ವಶಪಡಿಸಿಕೊಳ್ಳಲಾಗಿದೆ.

ಕೊಳ್ಳೇಗಾಲ ಡಿವೈಎಸ್ಪಿ ಧರ್ಮೇಂದ್ರ ರವರ ಮಾರ್ಗದರ್ಶನ ಹಾಗೂ ಮಲೆ ಮಹದೇಶ್ವರ ಬೆಟ್ಟದ ಸಿಪಿಐ ಜಗದೀಶ್ ರವರ ನೇತೃತ್ವದಲ್ಲಿ ಕೊಳ್ಳೇಗಾಲ ಡಿವೈಎಸ್ಪಿ ಅಪರಾಧ ಪತ್ತೆದಳದ ಎಎಸ್ಐ ಟಕಿವುಲ್ಲ, ರವಿಕುಮಾರ್, ವೆಂಕಟೇಶ ಬಿಳಿ ಗೌಡ ಶಿವಕುಮಾರ್ ಮತ್ತು ಠಾಣೆಯ ಸಿಬ್ಬಂದಿಗಳಾದ ಅಸ್ಲಾಂ ಪಾಸಾ ರಮೇಶ್ ರವಿ ಇವರುಗಳ ತಂಡದಿಂದ ಕಾರ್ಯಾಚರಣೆ ನಡೆದಿದೆ.

ಖಚಿತ ಮಾಹಿತಿ ಮೇರೆಗೆ ಮಲೆ ಮಹದೇಶ್ವರ ಬೆಟ್ಟದ ಸಾಲೂರು ಮಠಕ್ಕೆ ತೆರಳುವ ರಸ್ತೆ ಬದಿ ಅಂಗಡಿಯಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿದ್ದ ಎರಡು ಕಡೆ ದಾಳಿ ಮಾಡಿದ್ದಾರೆ. ಈ ಸಂದರ್ಭದಲ್ಲಿ ಮಹದೇಶ್ವರ ಬೆಟ್ಟದ ನಿವಾಸಿ ಸಿದ್ದಪ್ಪ ಬಿನ್ ಕೆಂಪಲಿಂಗ ನಾಯಕ, ಕೌದಳ್ಳಿ ಗ್ರಾಮದ ನಿವಾಸಿ ಮುತ್ತುರಾಜ್ ಅಲಿಯಾಸ್ ಪಾಂಡಿ ಬಿನ್ ಈರಯ್ಯ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಕೌದಲ್ಲಿ ಗ್ರಾಮದ ನಿವಾಸಿ ಚಂದ್ರು, ಮಹದೇಶ್ವರ ಬೆಟ್ಟದ ಕೆಂಪಲಿಂಗ ನಾಯಕರ ಮಗ ರಾಜಪ್ಪ, ಹಾಗೂ ಹನೂರು ನಿಹಾರಿಕಾ ಬಾರ್ ಮಾಲೀಕ ನಾಗರಾಜು ಈ ಮೂವರು ತಲೆಮರೆಸಿಕೊಂಡಿದ್ದಾರೆ. ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ಮಾಲುಗಳು 90 ಎಂಎಲ್ ನ 30 ಬಾಕ್ಸ್ ಗಳಲ್ಲಿ ಇದ್ದ 280 ಪೌಚ್ ಸುಮಾರು 1 ಲಕ್ಷ ಬೆಲೆಬಾಳುವ 259 ಲೀಟರ್ ಮದ್ಯ ಮತ್ತು ಕಾರು (ಕೆಎ 03 ಎಂಡಿ 2928), ಮತ್ತು ಒಂದು ಬೈಕನ್ನು ವಸಪಡಿಸಿಕೊಳ್ಳಲಾಗಿದೆ.

ಮಲೆ ಮಹದೇಶ್ವರ ಬೆಟ್ಟದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು. ಪಿಎಸ್ಐ ರವಿ ರವರು ತಲೆಮರೆಸಿಕೊಂಡಿರುವ ಮೂವರ ಪತ್ತೆಗಾಗಿ ಹಾಗೂ ತನಿಖೆ ಜವಾಬ್ದಾರಿಯನ್ನು ವಹಿಸಿಕೊಂಡಿದ್ದು ಮುಂದಿನ ಕ್ರಮ ಕೈಗೊಳ್ಳಲಾಗಿದೆ.

ಪುಣ್ಯಕ್ಷೇತ್ರದಲ್ಲಿ ಅಕ್ರಮ ಮದ್ಯ ಮಾರಾಟದ ಬಗ್ಗೆ ಸಾಕಷ್ಟು ದೂರುಗಳು ಕೇಳಿ ಬಂದಿದ್ದವು. ಇದೆ ಮೊದಲ ಬಾರಿಗೆ ದೊಡ್ಡ ಪ್ರಮಾಣದಲ್ಲಿ ಅಕ್ರಮ ಮದ್ಯ ಮಾರಾಟದ ಅಡ್ಡೆಯ ಮೇಲೆ ದಾಳಿ ಮಾಡಿರುವ ಪೊಲೀಸರ ಕಾರ್ಯಾಚರಣೆ ಬಗ್ಗೆ ಮಲೆ ಮಾದಪ್ಪನ ಭಕ್ತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಚಿಕ್ಕತಿರುಪತಿಗೆ ಬಿಎಂಟಿಸಿ ಅಧಿಕಾರಿಗಳು ಭೇಟಿ



ಮಾಲೂರು: ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣವಾದ ಚಿಕ್ಕತಿರುಪತಿ ಶ್ರೀ ಪ್ರಸನ್ನ ವೆಂಕಟರಮಣ ಸ್ವಾಮಿ ದೇವಸ್ಥಾನಕ್ಕೆ ಬಿಎಂಟಿಸಿ ಘಟಕ 18 ರ ಅಧಿಕಾರಿಗಳು ಭೇಟಿ ನೀಡಿ ಮಾಹಿತಿ ಪಡೆದರು.

ಬಿಎಂಟಿಸಿ ಘಟಕ 18 ರ ವ್ಯವಸ್ಥಾಪಕರಾದ ಮಲ್ಲಿಕಾರ್ಜುನಯ್ಯ ನವರ ನಿಯೋಗವು ದೇವಸ್ಥಾನಕ್ಕೆ ಭೇಟಿ ನೀಡಿ, ಸದರಿ ದೇವಸ್ಥಾನ ಒಳಪಟ್ಟಂತೆ ಚಿಕ್ಕತಿರುಪತಿ – ಕೋಟಿಲಿಂಗೇಶ್ವರ – ಬಂಗಾರು ತಿರುಪತಿ – ಕುರಡುಮಲೆ – ಆವಣಿ ಸೇರಿದಂತೆ ಒಂದು ದಿನದ ಪ್ರವಾಸವನ್ನು ವೈದೇಹಿ ಘಟಕದಿಂದ ವೋಲ್ವೋ ಬಸ್ಸಿನಲ್ಲಿ ಒಂದು ದಿನ ಪ್ರವಾಸ ಕಾರ್ಯಕ್ರಮವನ್ನು ಪ್ರಾರಂಭಿಸಲು ತಿರ್ಮಾನಿಸಲಾಗಿದೆ.

ಈ ಪ್ರವಾಸವು ವೈಟ್ ಫೀಲ್ಡ್ ಟಿಟಿಎಂಸಿ ಹೊರಟು ಚಿಕ್ಕತಿರುಪತಿ ದೇವಸ್ಥಾನ ನಂತರ ತಿಂಡಿ ವ್ಯವಸ್ಥೆ ನಂತರ ಇತರೆ ಸ್ಥಳಗಳನ್ನು ನೋಡಿ ಮತ್ತೆ ವಾಪಸ್ ವೈಟ್ ಫೀಲ್ಡ್ ಘಟಕಕ್ಕೆ ಬರುವುದು ಸದರಿ ವೋಲ್ವೋ ಬಸ್ಸಿನಲ್ಲಿ 41 ಜನ ಪ್ರವಾಸಿಗರು ಹಾಗೂ ಒಬ್ಬ ಡ್ರೈವರ್ ಒಳಗೊಂಡ 42 ಜನ ಪ್ರವಾಸ ವಾಗಿದೆ ಎಂದರು.

ಚಿಕ್ಕತಿರುಪತಿ ದೇವಸ್ಥಾನದ ಪ್ರಧಾನ ಅರ್ಚಕ ರವಿಸ್ವಾಮಿ ಹಾಗೂ ದೇವಸ್ಥಾನದ ಕಾರ್ಯನಿರ್ವಹಣಾಧಿಕಾರಿ ಟಿ ಸೆಲ್ವಮಣಿ ಅವರ ಬಳಿ ಚರ್ಚಿಸಿ, ಚಿಕ್ಕತಿರುಪತಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಜಿ.ವಿ ಮಂಜುನಾಥ್ ಅವರೊಂದಿಗೆ ಸಹ ಈ ವಿಚಾರವಾಗಿ ಮಾತುಕತೆ ನಡೆಸಿದರು

ಈ ಸಂದರ್ಭದಲ್ಲಿ ಗ್ರಾಂ ಪಂ ಅಧ್ಯಕ್ಷ ಜಿವಿ ಮಂಜುನಾಥ್ ಮಾತನಾಡಿ, ಸದರಿ ದೇವಸ್ಥಾನಕ್ಕೆ ಏನೇ ಕೆಲಸ ಇದ್ದರೂ ಮಾಡಿಕೊಡುವ ಭರವಸೆ ನೀಡಿದರು ಮತ್ತು ಬಿಎಂಟಿಸಿ ಬಸ್ ನಿಲ್ದಾಣ ನಿರ್ಮಾಣ ಮಾಡುವಂತೆ ವ್ಯವಸ್ಥಾಪಕರ ಬಳಿ ಮನವಿ ಮಾಡಿದರು.

ಈ ವಿಚಾರಕ್ಕೆ ಸಂಬಂಧಿಸಿದಂತೆ ಮಲ್ಲಿಕಾರ್ಜುನಯ್ಯ ರವರು ಮಾತನಾಡಿ ಗ್ರಾಮ ಪಂಚಾಯಿತಿ ವತಿಯಿಂದ ಸ್ಥಳ ನೀಡಿದ್ದಲ್ಲಿ ಚಿಕ್ಕ ಬಿಎಂಟಿಸಿ ಡಿಪೋ ಹಾಗೂ ಬಸ್ ನಿಲ್ದಾಣ ನಿರ್ಮಾಣ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಬಿಎಂಟಿಸಿ ಘಟಕದ ಸಂಚಾರಿ ನಿಯಂತ್ರಕರಾದ ರಾಜಶೇಖರ್, ಸುರೇಶ್, ಭೀಮಣ್ಣ ನಿರ್ವಾಹಕ ನಂಜುಂಡಪ್ಪ, ಶ್ರೀನಿವಾಸ್ ಮತ್ತು ಚಿಕ್ಕತಿರುಪತಿ ಗ್ರಾ ಪಂ ಅಧ್ಯಕ್ಷ ಜಿ.ವಿ ಮಂಜುನಾಥ್, ಸದಸ್ಯರಾದ ಆಲಂಬಾಡಿ ಬಾಬು, ಚಿಕ್ಕತಿರುಪತಿ ಉಪೇಂದ್ರ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

## ಮತ್ತಿಕೆರೆ ಗ್ರಾ.ಪಂ ಅಧ್ಯಕ್ಷ–ಉಪಾಧ್ಯಕ್ಷರ ಆಯ್ಕೆ

**ಮಾಗಡಿ:** ತಾಲ್ಲೂಕಿನ ಮತ್ತಿಕೆರೆ ಗ್ರಾ.ಪಂ.ಗೆ ನೂತನ ಅಧ್ಯಕ್ಷರಾಗಿ ಜೆಡಿಎಸ್‌ನ ಸಿಪಿ.ಧನಂಜಯ ಲಾಟರಿ ಮೂಲಕ ಅಧ್ಯಕ್ಷರಾಗಿ ಆಯ್ಕೆಯಾದರೆ ಉಪಾಧ್ಯಕ್ಷರಾಗಿ ಕಾಂಗ್ರೆಸ್‌ನ ಚನ್ನಿಗಯ್ಯ ಚುನಾಯಿತರಾಗಿದ್ದಾರೆ.


ತಾಲೂಕಿನ ಮತ್ತಿಕೆರೆ ಗ್ರಾ.ಪಂ.ಗೆ ಶುಕ್ರವಾರ ನಡೆದ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸಿಪಿ.ಧನಂಜಯ ಮತ್ತು ಜಿ.ವಿ.ಶಿವರಾಜು ನಾಮಪತ್ರ ಸಲ್ಲಿಸಿದರೆ ಉಪಾಧ್ಯಕ್ಷ ಸ್ಥಾನಕ್ಕೆ ಚನ್ನಿಗಯ್ಯ ಮತ್ತು ಜಿ.ಎಚ್. ಕೆಂಪರಾಜು ನಾಮಪತ್ರ ಸಲ್ಲಿಸಿ ಸ್ಪರ್ದೆಯಲ್ಲಿದ್ದರು.

ಅಧ್ಯಕ್ಷ ಸ್ಥಾನದ ಸ್ಪರ್ದೆಮಾಡಿದ ಇಬ್ಬರು ಅಭ್ಯರ್ಥಿಗಳಿಗೆ ತಲಾ 6 ಮತಗಳು ಬಿದ್ದ ಕಾರಣ ಲಾಟರಿ ಮೂಲಕ ಜೆಡಿಎಸ್ ಪಕ್ಷದ ಸಿಪಿ.ಧನಂಜಯ ಆಯ್ಕೆಯಾದರು, ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ದೆ ಮಾಡಿದ ಕಾಂಗ್ರೆಸ್ ನ ಚನ್ನಿಗಯ್ಯ ಅವರಿಗೆ 8 ಮತಗಳು ಬಿದ್ದರೆ ಪ್ರತಿ ಸ್ಪರ್ದಿ ಜೆಡಿಎಸ್ ನ ಕೆಂಪರಾಜುಗೆ 4 ಮತಗಳು ಬಂದಿದ್ದು 4 ಮತದ ಅಂತರದಿಂದ ಕಾಂಗ್ರೆಸ್‌ನ ಚನ್ನಿಗಯ್ಯ ಉಪಾಧ್ಯಕ್ಷರಾಗಿ ಚುನಾಯಿತರಾದರು.

ಚುನಾವಣಾಧಿಕಾರಿಯಾಗಿ ಚರಣ್ ಕುಮಾರು ಕಾರ್ಯನಿರ್ವಹಿಸಿದರು.

ನೂತನ ಅಧ್ಯಕ್ಷ ಸಿಪಿ.ಧನಂಜಯ ಮಾತನಾಡಿ, ನನಗೆ ರಾಜಕೀಯದಲ್ಲಿ ಅನುಭವ ವಿಲ್ಲ, ಜನರ ಪ್ರೀತಿ,ವಿಶ್ವಾಸಕ್ಕೆ ಚುನಾವಣೆಯಲ್ಲಿ ಸ್ಪರ್ದೆಮಾಡಿದ್ದೆ ಅದೃಷ್ಟ ಲಕ್ಷ್ಮಿ ನನಗೆ ಒಲಿದ ಕಾರಣ ಅಧ್ಯಕ್ಷನಾಗಿದ್ದೇನೆ, ಸದಸ್ಯರ, ಅಧಿಕಾರಿಗಳ ಸಹಕಾರ ಪಡೆದು ಗ್ರಾ.ಪಂ.ಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಬೇಸಿಗೆ ಸಂಭವಿಸಿದ್ದು ನೀರಿನ ಸಮಸ್ಯೆ ಹೆಚ್ಚಾಗಿದ್ದು ಇದನ್ನು ಸಮರ್ಪಕವಾಗಿ ನಿರ್ವಹಣೆಮಾಡುವ ಜವಬ್ದಾರಿ ನನ್ನ ಮೇಲಿದ್ದು ಎಲ್ಲರ ಸಹಕಾರದಿಂದ ನೀರಿನ ಸಮಸ್ಯೆ ಬಗೆಹರಿಸುತ್ತೇನೆ ಎಂದರು.

ಗ್ರಾ.ಪಂ. ಸದಸ್ಯರಾದ ಜೆ.ಗೀತಾ, ಎಚ್. ಎಸ್.ಶಕುಂತಲ, ಧನಲಕ್ಷ್ಮಿ, ನೀಲಮ್ಮ, ಚೈತ್ರ, ಸರಸ್ವತಮ್ಮ, ಬಸವರಾಜು, ಮಾಜಿ ಅಧ್ಯಕ್ಷ ಬಿ.ಜಿ.ರಂಗಸ್ವಾಮಿ, ಮಾಜಿ ಸದಸ್ಯ ಶಿವಣ್ಣ, ತಮ್ಮಯ್ಯ, ಮಾಸ್ತಿಗೌಡ, ಸಿಂಗ್ರಿಗೌಡ, ಗೋಪಾಲ್, ಬೆಳಗವಾಡಿ ಧನಂಜಯ, ಬಿ.ಜಿ.ಸುರೇಶ್, ಪಿಡಿಒ ರಾಮಕೃಷ್ಣಪ್ಪ, ರಾಜಣ್ಣ ಇತರರು ಇದ್ದರು.




## ಬಜೆಟ್‌ನಲ್ಲಿ ರೈತರು, ನೀರಾವರಿ ಕಡೆಗಣನೆ

**ಯಲಬುರ್ಗಾ:** ರೈತರಿಗೆ ಈ ಬಜೆಟ್ ನಲ್ಲಿ ವಿಶೇಷ ಯೋಜನೆಗಳಿಲ್ಲದ ನಿರಾಶಾದಾಯಕ ಬಜೆಟ್ ಇದಾಗಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ಕ್ಷೇತ್ರದ ನೀರಾವರಿ ಯೋಜನೆಗಳಿಗೆ ಯಾವುದೇ ಒತ್ತು ಕೊಟ್ಟಿಲ್ಲ,ರೈತರಿಗೆ ಯಾವ ಯೋಜನೆಯೂ ಬಜೆಟ್ ಘೋಷಿಸಿಲ್ಲ ಎಂದು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಅರವಿಂದ್ ಗೌಡ ಹೇಳಿದರು.



ಕ್ಷೇತ್ರದ ರೈತರ ಬಹುದಿನದ ಕನಸಾಗಿರುವ ನೀರಾವರಿ ಯೋಜನೆಗಳಿಗೆ ಯಾವ ಬಿಡಿಗಾಸು ಕೊಟ್ಟಿಲ್ಲ, ಸಿಂಗಟಲೂರು ಏತ ನೀರಾವರಿ, ಕೃಷ್ಣಾ ಬೀ ಸ್ಕೀಮ್ ಕಡೆಗಣಿಸಲಾಗಿದೆ. ಯಲಬುರ್ಗಾ ಕುಕನೂರು ತಾಲೂಕಿನ ಶಾಶ್ವತ ನೀರಾವರಿ ಕನಸು ಕನಸಾಗಿಯೇ ಉಳಿದಿದೆ. ಯಲಬುರ್ಗಾದಲ್ಲಿ ಖಾಸಗಿ ನರ್ಸಿಂಗ್ ಕಾಲೇಜು ಸ್ಥಾಪನೆಯಾದ ಮೇಲೆ ಸರ್ಕಾರಿ ನರ್ಸಿಂಗ್ ಕಾಲೇಜಿಗೆ ಮನಸ್ಸು ಮಾಡಲಾಗಿದೆ.

ಈ ಕಾರ್ಯ ಮೊದಲೇ ಆಗಬೇಕಿತ್ತು. ಉಳಿದಂತೆ ಬಜೆಟ್ ನಲ್ಲಿ ಕುರಿ ಮೇಕೆ ಅಕಾಲಿಕವಾಗಿ ಸತ್ತರೆ ಸಹಾಯ ಧನವನ್ನು 7 ಸಾವಿರಕ್ಕೆ ಹೆಚ್ಚಿಸಿದ್ದು ಸ್ವಾಗತಾರ್ಹ.

ಕಳೆದ ಸಲ ಕ್ಷೇತ್ರಕ್ಕೆ ಕೆರೆ ತುಂಬಿಸುವ ಯೋಜನೆ 970 ಕೋಟಿ ಕೊಡಲಾಗಿತ್ತು ಆದರೆ ಆ ಯೋಜನೆ ಸಮರ್ಪಕವಾಗಿ ಅನುಷ್ಠಾನವಾಗದೆ ಕುಂಟುತ್ತಾ ಸಾಗಿದೆ. ಕಳೆದ ವರ್ಷದ ಬಜೆಟ್ ಹೋಲಿಸಿದರೆ ಈ ವರ್ಷ ಕ್ಷೇತ್ರಕ್ಕೆ ಏನೂ ಪ್ರಯೋಜನ ಆಗಿಲ್ಲ. ಒಟ್ಟಾರೆ ಯಲಬುರ್ಗಾ ವಿಧಾನಸಭಾ ಕ್ಷೇತ್ರಕ್ಕೆ ಅಭಿವೃದ್ಧಿಗೆ, ರೈತರು ಜನಸಾಮಾನ್ಯರಿಗೆ ಇದೊಂದು ನಿರಾಶಾದಾಯಕ ಬಜೆಟ್ ಎಂದು ಅರವಿಂದ್ ಗೌಡ ಪಾಟೀಲ್

# ಮಾ.16ಕ್ಕೆ ಹೆಣ್ಣು ಮಕ್ಕಳಿಗೆ ಮಡಿಲು ತುಂಬುವ ಕಾರ್ಯಕ್ರಮ

**ಮುಳಬಾಗಿಲು:** ತಾಲೂಕಿನ ಕಪ್ಪಲಮಡುಗು ಗ್ರಾಮದ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ ಎಂಜಿ ಮಾರ್ಕೆಟ್ ಆವರಣದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಮಾರ್ಚ್ 16 ರಂದು ಏರ್ಪಡಿಸಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಏರ್ಪಡಿಸಿರುವ ದೀರ್ಘ ಸುಮಂಗಲಿ ಭವ ಅಡಿಯಲ್ಲಿ ಹೆಣ್ಣು ಮಕ್ಕಳಿಗೆ ಮಡಿಲು ತುಂಬುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು ಕಾಂಗ್ರೆಸ್ ಪಕ್ಷವನ್ನು ಪ್ರೀತಿಯಿಂದ ವಿಶ್ವಾಸದಿಂದ ನೋಡುವ ಪಕ್ಷದ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮಹಿಳೆಯರು ಸಕಾಲಕ್ಕೆ ಆಗಮಿಸಿ ಯಶಸ್ವಿಗೊಳಿಸಬೇಕೆಂದು ಕಾಂಗ್ರೆಸ್ ಮುಖಂಡ ವಿ. ಆದಿ ನಾರಾಯಣ ತಿಳಿಸಿದರು


ಅವರು ಬೈರಕೂರು ಹೊರವಲಯದಲ್ಲಿರುವ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯದ ಆವರಣದಲ್ಲಿ ಮಾರ್ಚ್ 16 ರಂದು ನಡೆಯಲಿರುವ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಬಂಧ ಏರ್ಪಡಿಸಿದ್ದ ಪೂರ್ವಭಾವಿ ಸಭೆಯನ್ನು ಉದ್ಘಾಟಿಸಿ ಮಾತನಾಡಿದರು

ಹೆಣ್ಣು ಮಕ್ಕಳಿಗೆ ಒಳ್ಳೆಯದಾಗಬೇಕೆಂಬ ಉದ್ದೇಶದಿಂದ ಈ ಕಾರ್ಯಕ್ರಮವನ್ನು ಅತ್ಯಂತ ವಿಶೇಷ ರೀತಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದ್ದು ಎಲ್ಲಾ ಮಹಿಳೆಯರಿಗೂ ಅರಿಶಿನ ಕುಂಕುಮ ಬಳೆ ಸೀರೆ ನೀಡುವ ಮೂಲಕ ಗೌರವಿಸಲಾಗುವುದು. ಮತ್ತು ಮುಂದಿನ ವರ್ಷದಿಂದ ನನ್ನ ಧರ್ಮಪತ್ನಿಯೊಂದಿಗೆ ಮುಳಬಾಗಿಲು ತಾಲೂಕಿನ ಪ್ರತಿ ಹಳ್ಳಿಯ ಮನೆ ಮನೆಗೂ ಭೇಟಿ ನೀಡಿ ಮನೆ ಬಾಗಿಲಿಗೆ ಹರಿಶಿನ–ಕುಂಕುಮ, ಬಳೆ, ಸೀರೆ ಹೆಣ್ಣು ಮಕ್ಕಳಿಗೆ ನಿಮ್ಮ ಮನೆಯ ಮಗನಾಗಿ ತಂಗಿಯರಿಗೆ ಅಕ್ಕಂದಿರಿಗೆ ಮಡಿಲು ತುಂಬುವ ಕೆಲಸ ಮಾಡುತ್ತೇನೆ ಈ ವರ್ಷ ತಾಲೂಕಿನ ಎಲ್ಲಾ ಮಹಿಳೆಯರಿಗೂ ಸರಿಸುಮಾರು 1 ಲಕ್ಷ ಮಹಿಳೆಯರಿಗೆ ಅರಿಸಿನ ಕುಂಕುಮ ಜೊತೆಗೆ ಸೀರೆ ಬಳೆಗಳನ್ನು ನೀಡಲಾಗುತ್ತಿದೆ. ಈ ಕಾರ್ಯಕ್ರಮಗಳನ್ನು ನಡೆಸುವ ಉದ್ದೇಶದಿಂದ ನಮ್ಮ ಪಕ್ಷದ ಎಲ್ಲಾ ಮುಖದೊಂದಿಗೆ ಚರ್ಚಿಸಿ ತೀರ್ಮಾನಿಸಲಾಗಿದೆ ಎಂದರು.

ಈ ಕಾರ್ಯಕ್ರಮದಲ್ಲಿ 9 ಪಂಚಾಯಿತಿಗಳ ಹದಿನೈದು ಸಾವಿರಕ್ಕೂ ಹೆಚ್ಚು ಮಹಿಳೆಯರು ಭಾಗವಹಿಸುತ್ತಿದ್ದಾರೆ. ಮಹಿಳಾ ಮುಖಂಡರಾಗಿ ಗುರುತಿಸಿಕೊಂಡಿರುವ ಮಹಿಳಾ ಮುಖಂಡರು ತಮ್ಮ ಗ್ರಾಮಗಳಲ್ಲಿ ಪಕ್ಷಕ್ಕೆ ದುಡಿಯುತ್ತಿರುವ ಮಹಿಳೆಯರನ್ನು ಗುರುತಿಸಿ ಅವರನ್ನು ಕಾರ್ಯಕ್ರಮಕ್ಕೆ ಕರೆ ತರಬೇಕು ಎಂದು ತಿಳಿಸಿದರು ಕಾರ್ಯಕ್ರಮದಲ್ಲಿ ಪ್ರತಿ ಗ್ರಾಮ ಪಂಚಾಯತಿಯಿಂದ ಆಗಮಿಸುವ ಮಹಿಳೆಯರಿಗೆ ಪ್ರತ್ಯೇಕ ಆಸನ ವ್ಯವಸ್ಥೆ ಮಾಡಲಾಗುವುದು.

ಮುಂಬರುವ ಗ್ರಾಪಂ, ತಾಪಂ, ಜಿಪಂ, ನಗರಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಲು ಮಹಿಳಾ ಮುಖಂಡರಿಗೆ ಪ್ರಾತಿನಿಧ್ಯ ನೀಡಲಾಗುವುದು.ಈ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲುವು ಸಾಧಿಸಲು ಸಂಘಟನೆಯನ್ನು ಮಾಡಬೇಕೆಂದು ತಿಳಿಸಿದರು

ಮಹಿಳಾ ಮುಖಂಡರು ತಾಯಿ ಸ್ಥಾನ. ತಂಗಿ. ಸ್ಥಾನದಲ್ಲಿದ್ದುಕೊಂಡು ಮಡಿಲು ತುಂಬುವ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ತಿಳಿಸಿದರು ಸದರಿ ಕಾರ್ಯಕ್ರಮಕ್ಕೆ ಜಾತ್ಯಾತೀತವಾಗಿ. ಧರ್ಮಾತೀತವಾಗಿ. ಮಹಿಳೆಯರು ಬರಬೇಕೆಂದು ತಿಳಿಸಿದರು. ಅದ್ದೂರಿಯಾಗಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಲಾಗಿದೆ ಎಂದರು.



ಕಾಂಗ್ರೆಸ್ ಪಕ್ಷದ ಆವಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ ಸಿ ನೀಲಕಂಠೇಗೌಡ. ಮಾತನಾಡಿ. ಆದಿ ನಾರಾಯಣ ರವರು ಮಹಿಳೆಯರಿಗೆ ಗೌರವ ನೀಡುವ ಉದ್ದೇಶದಿಂದ ರಾಜ್ಯದಲ್ಲೇ ಮೊದಲ ಬಾರಿಗೆ ಮಡಿಲು ತುಂಬ ಕಾರ್ಯಕ್ರಮವನ್ನು ಅವರ ಪ್ರಾಯೋಜಕತ್ವ ದಲ್ಲಿ ನಡೆಯುತ್ತಿದ್ದು ಮಹಿಳಾ ಮುಖಂಡರು ಈ ಕಾರ್ಯಕ್ರಮವನ್ನು ಅರ್ಥಪೂರ್ಣವಾಗಿ ನಡೆಯಲು ಸಹಕಾರ ನೀಡಬೇಕೆಂದು ತಿಳಿಸಿದರು ಪಕ್ಷದಲ್ಲಿ ನಿಷ್ಠೆ ಇರುವ ಮಹಿಳೆಯರನ್ನು ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಮಹಿಳಾ ಮುಖಂಡರು ಕರೆ ತರಬೇಕು ಎಂದು ತಿಳಿಸಿದರು ತಾಲೂಕಿನ ಕಾಂಗ್ರೆಸ್ ಪಕ್ಷವು ಮಹಿಳೆಯರಿಗೆ ರಾಜಕೀಯ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ. ಎಂದು ತಿಳಿಸಿದರು ರಾಜ್ಯ ಸರಕಾರ ಜಾರಿಗೆ ತಂದಿರುವ ಐದು ಗ್ಯಾರಂಟಿ ಯೋಜನೆಗಳು ಸೇರಿದಂತೆ ಇತರೆ ಯೋಜನೆಗಳ ಬಗ್ಗೆ ಜನಜಾಗೃತಿ ಮೂಡಿಸುವ ಕೆಲಸವನ್ನು ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಮಾಡಬೇಕೆಂದು .ತಿಳಿಸಿದ ಅವರು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮಹಿಳಾ ಮುಖಂಡರನ್ನು ಗುರುತಿಸಿ ಅವರಿಗೆ ಸ್ಥಾನಮಾನಗಳನ್ನು ಹಾಗೂ ಚುನಾವಣಾ ಅಭ್ಯರ್ಥಿಗಳನ್ನಾಗಿ ನಿಲ್ಲಿಸಲಾಗುತ್ತದೆ ಎಂದರು.

2023ರ. ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದ ವಿ. ಆದಿ ನಾರಾಯಣ ರವರು 70000 ಮತಗಳನ್ನು ಗಳಿಸಿ ಪರಾಭವಗೊಂಡಿದ್ದರೂ ಸಹ ಕ್ಷೇತ್ರದಲ್ಲಿ ಇದ್ದು ಜನಪರ ಕಾರ್ಯಕ್ರಮಗಳನ್ನು ಮಾಡುವುದರ ಜೊತೆಗೆ ಪಕ್ಷದ ಸಂಘಟನೆಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ ಎಂದು ತಿಳಿಸಿದರು. ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಇವರಿಗೆ ಸಂಪೂರ್ಣ ಬೆಂಬಲ ನೀಡಿದರೆ ತಾಲೂಕಿನ ಸಮಗ್ರ ಅಭಿವೃದ್ಧಿಗೆ ಹೆಚ್ಚು ಅನುಕೂಲವಾಗುತ್ತದೆ ಎಂದು ತಿಳಿಸಿದರು

ಕೆಪಿಸಿಸಿ ಸದಸ್ಯ ಜಿ ರಾಮಲಿಂಗಾರೆಡ್ಡಿ , ಟೌನ್ ಬ್ಲಾಕ್ ಅಧ್ಯಕ್ಷ ಅಮಾನುಲ್ಲಾ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಗಂಗಿರೆಡ್ಡಿ, ಉಪಾಧ್ಯಕ್ಷ ಮಂಡಿಕಲ್ ಮಂಜುನಾಥ್, ನಿರ್ದೇಶಕರಾದ ಆಲಂಗೂರು ಶಿವಣ್ಣ, ಆರ್ ಆರ್ ರಾಜೇಂದ್ರ ಗೌಡ ದರಕಾಸ್ತು ಸಮಿತಿ ಸದಸ್ಯರಾದ, , ಜಮ್ಮನಹಳ್ಳಿ ಕೃಷ್ಣ, ಗುಜ್ಜನಹಳ್ಳಿ ಮಂಜುನಾಥ್, ಕಾರ್ಗಿಲ್ ವೆಂಕಟೇಶ್, ಬಿ ಮಾರಪ್ಪ, ಮಂಡಿಕಲ್ ಚಲಪತಿ, ವಿ,ಕೆ, ರಾಜು, ಕಗ್ಗಿನಹಳ್ಳಿ ಶ್ರೀನಿವಾಸ್ ವಾಸುದೇವ ರೆಡ್ಡಿ,, ಯುವ ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಸೂರ್ಯನಾರಾಯಣ ಗೌಡ , ಅಂಜು ಬಾಸ್, ಸುಬ್ಬಾರೆಡ್ಡಿ, ಉಮಾಶಂಕರ್, ವೆಂಕಟಪತಿ, ಕೆರಸ ಮಂಗಳ ವೆಂಕಟರಮಣಪ್ಪ, , ಅಂಬರೀಶ್, ತ್ರಿವೇಣಮ್ಮ ನಾಗೇಶ್ವರಿ ಶಶಿಕಲಾ ರೆಡ್ಡಮ್ಮ ಇದ್ದರು

## ಸಚಿವ ಮುನಿಯಪ್ಪನವರ ಹುಟ್ಟುಹಬ್ಬದ ಪ್ರಯುಕ್ತ ಹಣ್ಣು ಹಂಪಲು ವಿತರಣೆ



**ದೇವನಹಳ್ಳಿ:** ಆಹಾರ ಮತ್ತು ನಾಗರೀಕ ಸರಬರಾಜು ಸಚಿವ , ಗ್ರಾಮಾಂತರ ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಕ್ಷೇತ್ರದ ಶಾಸಕರೂ ಆದ ಕೆ.ಎಚ್. ಮುನಿಯಪ್ಪನವರ ಹುಟ್ಟುಹಬ್ಬದ ನಿಮಿತ್ತ ಶುಕ್ರವಾರ ಕಾಂಗ್ರೆಸ ಕಾರ್ಯಕರ್ತರು ಎಸ್ಸಿ ವಿಭಾಗದ ಕೆಪಿಸಿಸಿ ಕಾರ್ಯದರ್ಶಿ ತತ್ತಮಂಗಲ ರಮೇಶ್ ನೇತೃತ್ವದಲ್ಲಿ ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆಯ ಒಳ ಹೊರ ರೋಗಿಗಳು ಆಸ್ಪತ್ರೆಯ ವೈದ್ಯಕೀಯ ಸಿಬ್ಬಂದಿಗೆ ಹಣ್ಣು ಹಂಪಲು ಬ್ರೆಡ್ ವಿತರಿಸಿದರು.

ಇದೇ ವೇಳೆ ಕೆ.ಎಚ್. ಮುನಿಯಪ್ಪನವರ ಪರವಾಗಿ ಜಯಘೋಷ ಕೂಗಿದರು.

ಈ ಸಮಯದಲ್ಲಿ ಸರ್ಕಾರಿ ಆಸ್ಪತ್ರೆ ವೈದ್ಯರಾದ ಡಾ. ಆನಂದ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಯಲಿಯೂರು ವೀರಣ್ಣಗೌಡ, ಮಾಜಿ ಗ್ರಾ.ಪಂ. ಮಾಜಿ ಅದ್ಯಕ್ಷರುಗಳಾದ ವೆಂಕಟಾಚಲ, ಮುನಿಯಪ್ಪ , ಗ್ರಾ.ಪಂ. ಸದಸ್ಯರಾದ ದೊಡ್ಡತತ್ತಮಂಗಲ ಕೊಣ್ಣಪ್ಪ, ಬೊಮ್ಮನಹಳ್ಳಿ ನಾರಾಯಣಸ್ವಾಮಿ, ವೆಂಕಟೇಶಪ್ಪ, ತಿಮ್ಮನಹಳ್ಳಿ ನಾರಾಯಣಸ್ವಾಮಿ , ರಘು ಮುಂತಾದವರಿದ್ದರು.

ಮುನಿಯಪ್ಪನವರ ಹುಟ್ಟು ಹಬ್ಬದ ಅಂಗವಾಗಿ ಯಲಿಯೂರು ಗ್ರಾ.ಪಂ. ವ್ಯಾಪ್ತಿಯ ಕಾಂಗ್ರೆಸ್ ಮುಖಂಡರು ದೇವನಹಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಣ್ಣು ಹಂಪಲು ವಿತರಿಸಿದರು.

## ರಸ್ತೆ ಅಭಿವೃದ್ಧಿ ಕಡೆಗಣನೆ; ಪ್ರತಿಭಟನೆ



**ಶಿಡ್ಲಘಟ್ಟ:** ತಾಲ್ಲೂಕಿನ ಪೇರೇಸಂದ್ರ – ಸಾದಲಿ ಮಾರ್ಗದ ಲೋಕೋಪಯೋಗಿ ರಸ್ತೆ ಅಭಿವೃದ್ಧಿಯನ್ನು ಕಡೆಗಣಿಸಿರುವುದನ್ನು ಖಂಡಿಸಿ ಸ್ಥಳೀಯರಿಂದ ಪ್ರತಿಭಟನೆ ನಡೆಸಲಾಯಿತು.

ಸಾದಲಿ ಗ್ರಾಮದ ಮೂಲಕ ಸಾಗುವ ಮುಖ್ಯ ರಸ್ತೆಯು ಜಿಲ್ಲಾ ಕೇಂದ್ರ ಮತ್ತು ರಾಷ್ಟ್ರೀಯ ಹೆದ್ದಾರಿಯನ್ನು ಸಂಪರ್ಕಿಸುತ್ತಿದೆ, ಇದರಲ್ಲಿ 7 ರಿಂದ 11.2 ಕಿ.ಮೀ. ವರೆಗಿನ ರಸ್ತೆ ಶಿಡ್ಲಘಟ್ಟ ತಾಲ್ಲೂಕು ವ್ಯಾಪ್ತಿಗೆ ಸೇರಿದ್ದು ಇದು ತೀರ ಹದಗೆಟ್ಟಿದೆ, ಇದರ ದುರಸ್ತಿಗೆ ಸ್ಥಳೀಯ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಕಡೆಗಣಿಸಿದ್ದಾರೆ,ಇದರಿಂದ ವಾಹನಗಳು ಹಾಗೂ ಜನರು ಓಡಾಡಲು ತೊಂದರೆ ಅನುಭವಿಸುವಂತಾಗಿದೆ ಎಂದು ಹೋರಾಟಗಾರರಾದ ಮಂಜುನಾಥ್ ಆರೋಪ ಮಾಡಿದರು.

ನಾಲ್ಕು ದಶಕಗಳಿಂದಲೂ ರಸ್ತೆ ಅಭಿವೃದ್ಧಿಗೆ ಒತ್ತಾಯಿಸಿ ಹೋರಾಟ ನಡೆಸಲಾಗುತ್ತಿದೆ. ಈಗಾಗಲೇ ಸಚಿವರು, ಶಾಸಕರು, ಜಿಲ್ಲಾಧಿಕಾರಿಗಳು ಸೇರಿ ಹಲವರಿಗೆ ಮನವಿ ಸಲ್ಲಿಸಲಾಗಿದೆ , ಆದರೂ ಪ್ರಯೋಜನವಾಗಿಲ್ಲ ಹಾಗಾಗಿ ಹಮ್ಮಿಕೊಂಡಿರುವ ಅನಿರ್ದಿಷ್ಟಾವಧಿ ಧರಣಿಯನ್ನು ಈಡೇರುವವರೆಗೂ ನಿಲ್ಲಿಸುವುದಿಲ್ಲ ಎಂದರು.

ಈ ಸಂದರ್ಭದಲ್ಲಿ ಸತ್ಯಸಾಯಿ ಸಾದಲಿ ಹೊಸ ತಾಲ್ಲೂಕು ಹೋರಾಟ ಸಮಿತಿಯ ಗೌರವಾಧ್ಯಕ್ಷ ಜಿ.ವಿ. ತಿಮ್ಮರಾಜು,ಹೋರಾಟಗಾರರಾದನರಸಿಂಹ ಮೂರ್ತಿ, ಡಿ.ವಿ.ಪ್ರಸಾದ್, ಬಾಲು, ರಾಮಕೃಷ್ಣಪ್ಪ, ತಿರುಮಲಪ್ಪ, ವಿ.ಸುರೇಶ್,ದಾಸಪ್ಪ, ಎ.ಜಿ.ನಾರಾಯಣಸ್ವಾಮಿ, ಕೃಷ್ಣಪ್ಪ, ಗಣೇಶ್,ನಾಗರಾಜ್, ಮುನಿಯಪ್ಪ,ಆಂಜಿನಪ್ಪ, ನರಸಿಂಹಪ್ಪ, ಸುನೀಲ್ ಇನ್ನಿತರರು ಪಾಲ್ಗೊಂಡಿದ್ದರು.

## ಬಿಬಿಎಂಪಿ ಶಿಶುವಿಹಾರ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಕಲಿಕೆಯನ್ನು ನೀಡಲಾಗುವುದು: ಪ್ರೀತಿ ಗೆಹ್ಲೋಟ್

**ಬೆಂಗಳೂರು:** ಬಿಬಿಎಂಪಿ ಶಿಶುವಿಹಾರ ಶಾಲೆಗಳಲ್ಲಿ ಮಕ್ಕಳಿಗೆ ಉತ್ತಮ ಕಲಿಕೆಯನ್ನು ನೀಡಲಾಗುತ್ತಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳನ್ನು ದಾಖಲಿಸಲು ಶಿಕ್ಷಣ ವಿಭಾಗದ ವಿಶೇಷ ಆಯುಕ್ತರಾದ ಪ್ರೀತಿ ಗೆಹ್ಲೋಟ್ ರವರು ಪೋಷಕರಲ್ಲಿ ಮನವಿ ಮಾಡಿದರು.ಬಿಬಿಎಂಪಿಯ ಶಿಕ್ಷಣ ಇಲಾಖೆ ವತಿಯಿಂದ ನಗರದ ಸರ್. ಪುಟ್ಟಣ್ಣ ಚೆಟ್ಟಿ ಪುರಭವನ(ಟೌನ್ ಹಾಲ್)ನಲ್ಲಿ ಇಂದು ಶಿಶುವಿಹಾರ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗಾಗಿ ನಡೆದ "ಚಿಣ್ಣರ ಚಿಲಿಪಿಲಿ ಕಲರವ" ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಬಳಿಕ ಅವರು ಮಾತನಾಡಿದರು.ಪಾಲಿಕೆ ಶಿಶು ವಿಹಾರಗಳಲ್ಲಿ ಮಕ್ಕಳ ಕಲಿಕೆಗೆ ಅಗತ್ಯಚಾದ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆ. ಪ್ರತಮ್ ಸಂಸ್ಥೆ ವತಿಯಿದ ಒಡಂಬಡಿಕೆ ಮಾಡಿಕೊಂಡ ನಂತರ ಮಕ್ಕಳ ವಿಕಸನದಲ್ಲಿ ಸಾಕಷ್ಟು ಬೆಳವಣಿಗೆ ಕಂಡಿದೆ.ಪಾಲಿಕೆಯ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಮಕ್ಕಳ ಪ್ರತಿಭೆಯನ್ನು ಗುರುತಿಸಲು, ಶಿಕ್ಷಕರುಗಳನ್ನು ಪ್ರೋತ್ಸಾಹಿಸಲು, ಪೋಷಕರುಗಳಿಗೆ ಮಕ್ಕಳ ಭವಿಷ್ಯವನ್ನು ರೂಪಿಸುವ ಸಲುವಾಗಿ ಹಾಗೂ ಆತ್ಮ ವಿಶ್ವಾಸ ತುಂಬುವ ಸಲುವಾಗಿ ಈ ಕಾರ್ಯಕ್ರಮವನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು.

**ಮಕ್ಕಳ ಪ್ರತಿಭೆ ಅನಾವರಣ:**



ರಾಮಚಂದ್ರಪುರ ಪಾಲಿಕೆ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 4.5 ವರ್ಷದ ಮಗು ರಿತ್ವಿಕ್ ನಮ್ಮ ದೇಶ, ರಾಜ್ಯ, ರಾಜಧಾನಿ, ರಾಷ್ಟ್ರ ಪತಿ, ಉಪ ರಾಷ್ಟ್ರಪತಿ, ಪ್ರಧಾನ ಮಂತ್ರಿ, ರಾಜ್ಯ ಪಾಲರು, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಶಿಕ್ಷಣ ಸಚಿವರು, ಆರೋಗ್ಯ ಸಚಿವರು, ಮುಖ್ಯ ಆಯುಕ್ತರು, ರಾಷ್ಟ್ರೀಯ ಲಾಂಛನ, ಹಣ್ಣು, ಹೂ, ಪ್ರಾಣಿ, ಧ್ವಜ, ನದಿ, ಮರ, ತರಕಾರಿ, ರಾಷ್ಟ್ರ ಗೀತೆ, ಸಂವಿಧಾನ ರಚಿಸಿದವರು, ಜ್ಞಾನ ಪೀಠ ಪ್ರಶಸ್ತಿ ಪಡೆದ ಕವಿಗಳ ಹೆಸರು ಸೇರಿದಂತೆ ಸಾಕಷ್ಟು ವಿಷಗಳನ್ನು ಕೇಳಿದ ಕೂಡಲೆ ಥಟ್ ಅಂತ ಹೇಳಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಎಲ್ಲರಲ್ಲೂ ಬೆರಗು ಮೂಡಿಸಿದ. ಬಾಲಕ ರಿತ್ವಿಕ್ ಮಾತ್ರವಲ್ಲದೆ ಬೇರೆ ಮಕ್ಕಳು ಕೂಡಾ ತಮ್ಮ ಪ್ರತಿಭೆಗಳನ್ನು ತೋರಿಸಿದರು.

ಅಭಿನಂದನಾ ಪತ್ರಗಳ ವಿತರಣೆ: ಪಾಲಿಕೆಯ ಶಿಶುವಿಹಾರ ಶಾಲೆಗಳ ವ್ಯಾಸಂಗ ಮಾಡುತ್ತಿರುವ 100 ಮಕ್ಕಳು ಹಾಗೂ 152 ಶಿಕ್ಷಕರುಗಳಿಗೆ ಅಭಿನಂದನಾ ಪತ್ರವನ್ನು ನೀಡಿ ಗೌರವಿಸಲಾಯಿತು.

**ಮಕ್ಕಳಿಂದ ವಿವಿಧ ಕಾರ್ಯಕ್ರಮಗಳ ಆಯೋಜನೆ:** ಮಕ್ಕಳಲ್ಲಿರುವ ಇರುವ ಪ್ರತಿಭೆಯನ್ನು ಗುರುತಿಸುವ ಸಲುವಾಗಿ ಗೀತವಾಚನಾ, ಏಕಪಾತ್ರಾಭಿನಯ ಹಾಗೂ ಮಕ್ಕಳಿಂದಲೇ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಯಿತು.

93 ಶಿಶು ವಿಹಾರಗಳು: ಪಾಲಿಕೆಯಲ್ಲಿ 93 ಶಿಶುವಿಹಾರ ಶಾಲೆಗಳಲ್ಲಿದ್ದು, 5089 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಶಿಶುವಿಹಾರ ಶಾಲೆಗಳಲ್ಲಿ 34 ಖಾಯಂ ಹಾಗೂ 117 ಅತಿಥಿ ಶಿಕ್ಷಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ.

**ಪೋಷಕರಿಂದ ಪ್ರಶಂಸೆ:** ಪಾಲಿಕೆ ಶಿಶು ವಿಹಾರಗಳ ಕುರಿತು ಮಕ್ಕಳ ಪೋಷಕರು ಮಾತನಾಡಿ, ಮಕ್ಕಳಿಗೆ ಎಲ್ಲಾ ರೀತಿಯ ಚಟುವಟಿಕೆಗಳನ್ನು ಕಲಿಸಲಾಗುತ್ತದೆ. ಮಕ್ಕಳ ಭೌತಿಕ ವಿಕಾಸ, ಆಟಗಳು, ಮಾತುಗಾರಿಕೆ, ಚಿತ್ರಗಳನ್ನು ಬಿಡಿಸುವುದು, ಪದ್ಯಗಳನ್ನು ಹೇಳುವುದು, ಕಥೆಗಳನ್ನು ಹೇಳುವುದು, ಕನ್ನಡ ಭಾಷೆಯನ್ನು ಕಲಿಸಲಾಗುತ್ತಿದೆ. ಎಲ್ಲಾ ಮಕ್ಕಳಿಗೂ ಉಚಿತ ಶಿಕ್ಷಣ ನೀಡಲಾಗುತ್ತಿದ್ದು, ಇದರಿಂದ ಬಡ ವರ್ಗದ ಕುಟುಂಬಗಳಿಗೆ ಸಾಕಷ್ಟು ಅನುಕೂಲವಾಗುತ್ತಿದೆ ಎಂದು ಅನಿಸಿಕೆಗಳನ್ನು ಸಂತಸದಿಂದ ವ್ಯಕ್ತಪಡಿಸಿದರು.ಈ ವೇಳೆ ಉಪ ನಿರ್ದೇಶಕರಾದ ಲೋಕೇಶ್, ಸಹಾಯಕ ಆಯುಕ್ತರಾದ ದಿಲೀಪ್, ಹಿರಿಯ ಸಹಾಯಕ ನಿರ್ದೇಶಕರಾದ ಮುನಿಶಾಮಪ್ಪ, ಶಿಕ್ಷಕರು, ಪೋಷಕರು, ಶಿಶು ವಿಹಾರ ಕೇಂದ್ರದ ಮಕ್ಕಳು ಉಪಸ್ಥಿತರಿದ್ದರು.

## ಮಾ.10ಕ್ಕೆ ವಿಜಯಪುರ ಪುರಸಭೆ ಚುನಾವಣೆ

**ದೇವನಹಳ್ಳಿ** ; ವಿಜಯಪುರ ಪುರಸಭೆಯ 10 ನೇ ಅವಧಿಯ ಉಳಿದ ಅವಧಿಗೆಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಗೆ ದಿನಾಂಕವನ್ನು ನಿಗದಿಪಡಿಸಿರುವ ತಹಶೀಲ್ದಾರ್ ಅವರುಪುರಸಭೆ ಸದಸ್ಯರಿಗೆ ತಿಳುವಳಿಕೆ ನೋಟೀಸ್ ಜಾರಿಗೊಳಿಸಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳಿಗೆ ಉಳಿದ ಅವಧಿಗೆ ಮೀಸಲಾತಿ ಪ್ರಕಟಗೊಳಿಸಿ, ಹಲವು ತಿಂಗಳುಗಳೇ ಕಳೆದರೂ ಇದುವರೆಗೂ ಸಂಬಂಧಪಟ್ಟ ಅಧಿಕಾರಿಗಳು ಚುನಾವಣೆ ನಿಗದಿಗೊಳಿಸಿಲ್ಲವೆಂದು ಫೆ,24 ರಂದು ಸುದ್ದಿ ಪ್ರಕಟಿಸಲಾಗಿತ್ತು,

ಈ ಹಿನ್ನೆಲೆಯಲ್ಲಿಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತ, ಹೈಕೋರ್ಟ್ಆದೇಶದಂತೆಚುನಾವಣೆಗೆ ಮಾರ್ಚ್ 10 ರಂದು ಮಧ್ಯಾಹ್ನ 1 ಗಂಟೆಗೆ ಪುರಸಭೆ ಸಭಾಂಗಣದಲ್ಲಿ ಸಭೆಯನ್ನುಆಯೋಜನೆ ಮಾಡುವ ಮೂಲಕ ದಿನಾಂಕ ನಿಗದಿಗೊಳಿಸಿ, ಆದೇಶ ಹೊರಡಿಸಿದ್ದು, ಎಲ್ಲಾ ಪುರಸಭೆ ಸದಸ್ಯರುಗಳಿಗೆ ತಿಳುವಳಿಕೆ ನೋಟೀಸ್ ಜಾರಿಗೊಳಿಸಿದೆ. ಪುರಸಭೆಯಅಧ್ಯಕ್ಷ ಸ್ಥಾನವು ಸಾಮಾನ್ಯ ಮಹಿಳೆಗೆ ಉಪಾಧ್ಯಕ್ಷ ಸ್ಥಾನವು ಹಿಂದುಳಿದ ವರ್ಗ 'ಎ' ಮಹಿಳೆಗೆ ಮೀಸಲಾಗಿದೆ.

ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗೆ ನಾಮನಿರ್ದೇಶನ ಪತ್ರಗಳ ನಮೂನೆಯನ್ನು ವಿತರಿಸುವ ಸಮಯ ಮಾರ್ಚ್ 10 ರಂದು ಬೆಳಿಗ್ಗ 10 ಗಂಟೆಯಿಂದ 11,30 ರವರೆಗೆ ಅಭ್ಯರ್ಥಿಗಳು ಅಥವಾ ಸೂಚಕರುಚುನಾವಣಾಧಿಕಾರಿಯಿಂದ ಪಡೆಯುಬಹುದು,ನಾಮನಿರ್ದೇಶನ ಪತ್ರಗಳನ್ನು ಸ್ವೀಕರಿಸುವ ಸಮಯ ಮಾರ್ಚ್ 10 ರಂದು ಬೆಳಿಗ್ಗ 11,30 ರಿಂದ ಮಧ್ಯಾಹ್ನ 12,30 ರವರೆಗೆ ಅಭ್ಯರ್ಥಿಗಳು ಅಥವಾ ಸೂಚಕರುಚುನಾವಣಾಧಿಕಾರಿಗೆ ಸಲ್ಲಿಸಬಹುದು,

ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಗೆ ಬಂದ ನಾಮ ನಿರ್ದೇಶನ ಪತ್ರಗಳನ್ನು ಮಾರ್ಚ್ 10 ರಂದು 12,30 ಕ್ಕೆ ನಾಮಪತ್ರಗಳ ಪರಿಶೀಲನೆ ಮಾಡಲಾಗುತ್ತದೆ, ನಾಮನಿರ್ದೇಶನ ಪತ್ರಗಳನ್ನು 1 ಗಂಟೆಯಿಂದ 1,30 ರವರೆಗೆ ಅಭ್ಯರ್ಥಿಗಳಾಗಲಿ ಅಥವಾ ಸೂಚಕರ ಮೂಲಕವಾಗಲಿ ವಾಪಸ್ಸು ಪಡೆಯಬಹುದಾಗಿದೆ,

ಅಧ್ಯಕ್ಷ, ಉಪಾಧ್ಯಕ್ಷ ಹುದ್ದೆಯ ಸ್ಥಾನಗಳಿಗೆ ಸ್ಪರ್ಧೆಏರ್ಪಟ್ಟಲ್ಲಿ 1,30 ರ ನಂತರಚುನಾವಣೆ ಪ್ರಕ್ರಿಯೆ ನಡೆಯುತ್ತದೆಎಂದುಚುನಾವಣಾಧಿಕಾರಿ ತಹಶೀಲ್ದಾರ್ ತಿಳಿಸಿದ್ದಾರೆ,

## ಕನ್ನಡ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಲಾಗುತ್ತಿದೆ: ಶಾಸಕ ಎಚ್.ಸಿ.ಬಾಲಕೃಷ್ಣ

**ಮಾಗಡಿ:** ಕನ್ನಡ ಭಾಷೆ, ಸಾಹಿತ್ಯ, ಸಂಗೀತ, ಸಂಸ್ಕೃತಿಯ ತವರೂರು ಮಾಗಡಿ. ಈ ನೆಲ ಅನೇಕ ಮಹಾನೀಯರಿಗೆ ಜನ್ಮಕೊಟ್ಟ ಪುಣ್ಯಭೂಮಿ, ಅವರೆಲ್ಲರನ್ನು ಸ್ಮರಿಸಿ ಗೌರವಿಸುವುದೇ ನಮ್ಮ ಸಮ್ಮೇಳನದ ಗುರಿಯಾಗಿದೆ ಎಂದು ಶಾಸಕ ಎಚ್.ಸಿ.ಬಾಲಕೃಷ್ಣ ಹೇಳಿದ್ದಾರೆ.

ತಾಲ್ಲೂಕಿನ ಮಾದಿಗೊಂಡನಹಳ್ಳಿ ಗುಡ್ಡದ ಶ್ರೀರಂಗನಾಥ ಸ್ವಾಮಿ ಬೆಟ್ಟದಲ್ಲಿ ಗುರುವಾರ ನಡೆದ 10ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಕನ್ನಡ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಲಾಗುತ್ತಿದೆ, ಅಖಿಲ ಭಾರತ ಕನ್ನಡ ಸಾಹಿತ್ಯ ಪರಿಷತ್ ನ ಪ್ರಥಮ ಅಧ್ಯಕ್ಷ ಎಚ್,ವಿ,ನಂಜುಂಡಯ್ಯ, ಅಭಿನವ ಕಾಳಿದಾಸ ನಾರಸಂದ್ರದ ಬಸವಪ್ಪಶಾಸ್ತ್ರಿ, ಕರಲಮಂಗಲದ ಶ್ರೀಕಂಠಯ್ಯ, ನಾಡಪ್ರಭು ಕೆಂಪೇಗೌಡ, ಮೋಟಗೊಂಡನಹಳ್ಳಿ ಮಹದೇವಶಾಸ್ತ್ರಿ, ಡಾ.ಶಿವಕುಮಾರಸ್ವಾಮೀಜಿ, ಡಾ.ಸಿದ್ದಲಿಂಗಯ್ಯ, ಸಾಲುಮರದ ತಿಮ್ಮಕ್ಕ ಸೇರಿದಂತೆ ಅನೇಕ ಮಹಾನೀಯರು ವಿಶ್ವಮಟ್ಟದಲ್ಲಿ ಛಾಪು ಮಾಡಿಸಿದ್ದಾರೆ, ಮಾಗಡಿ ಸಾಹಿತ್ಯ, ಸಂಗೀತ, ಸಂಸ್ಕೃತಿ ತೊಟ್ಟಿಲು ಇದನ್ನು ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಆದ್ಯ ಕರ್ತವ್ಯ, ಕನ್ನಡಿಗರಾದ ನಾವೆಲ್ಲರೂ ತಾಯಿ ಭುವನೇಶ್ವರಿಯನ್ನು ಹೃದಯ ಮಂದಿರದಲ್ಲಿ ಪೂಜಿಸುತ್ತಿದ್ದೇವೆ, ಅದಕ್ಕಾಗಿ ನಾವ್ಯಾರು ಪ್ರತ್ಯೇಕ ದೇವಾಲಯವನ್ನು ನಿರ್ಮಿಸಿಲ್ಲ ಎಂದರು.

ಇನ್ನೊಂದು ತಿಂಗಳಲ್ಲಿ ಕನ್ನಡ ಭವನಕ್ಕೆ ಅಡಿಪಾಯ; ಅನೇಕ ಮಹಾನೀಯರಿಗೆ ಜನ್ಮಕೊಟ್ಟಪುಣ್ಯಭೂಮಿಯಲ್ಲಿ ಕನ್ನಡ ಭವನ ನಿರ್ಮಾಣಕ್ಕೆ ಇನ್ನೊಂದು ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇತರರನ್ನು ಆಹ್ವಾನಿಸಿ ಅಡಿಪಾಯ ಹಾಕಿಸುವುದಲ್ಲದೆ ವರ್ಷದೊಳಗೆ ಕನ್ನಡ ಭವನ ನಿರ್ಮಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕರು ಭರವಸೆ ನೀಡಿದರು,

ಗ್ಯಾರಂಟಿ ಯೋಜನೆಯ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್,ಎಂ,ರೇವಣ್ಣ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿದವರು ನಮ್ಮ ತಾಲೂಕಿನ ಹೆಬ್ಬಳಲು ಎಚ್,ವಿ,ನಂಜುಂಡಯ್ಯನವರು, 3 ಭಾರಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳದ ಅಧ್ಯಕ್ಷರಾಗಿದ್ದವರು, ದಲಿತ ಕವಿ ಸಿದ್ದಲಿಂಗಯ್ಯ ಸಹ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು, ಕನ್ನಡ ಭಾಷೆಗೆ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಯನ್ನು ತಂದುಕೊಟ್ಟ ಸಾಹಿತಿಗಳ ಸ್ಮರಣೆ ಅವಿಸ್ಮರಣೀಯ, ಈ ನಿಟ್ಟಿನಲ್ಲಿ ಮಾಗಡಿಯಲ್ಲಿ ಕನ್ನಡ ಭವನ ಅನಿವಾರ್ಯವಾಗಿದೆ, ಶಾಸಕ ಎಚ್,ಸಿ,ಬಾಲಕೃಷ್ಣ ಅವರು ಮನಸ್ಸು ಮಾಡಿ ಕನ್ನಡ ಭವನಕ್ಕೆ ಅಡಿಪಾಯ ಹಾಕಲು ನಾನೂ ಕೈಜೋಡಿಸುತ್ತೇನೆ ಎಂದ ಅವರು ಸಿಎಂ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ವಿಧಾನ ಸೌಧದ ಮುಂದೆ ತಾಯಿ ಭುವನೇಶ್ವರಿ ಪ್ರತಿಮೆಯನ್ನು ಸ್ಥಾಪಿಸಿದ್ದೇವೆ ಎಂದು ತಿಳಿಸಿದರು,

ಚಂದನ ವಾಹಿನಿಯ ಥಟ್ ಅಂತ ಹೇಳಿ ಕಾರ್ಯಕ್ರಮದ ಸೋಮೇಶ್ವರ ರಾವ್ ಮಾತನಾಡಿ, ಈ ದೇಶವನ್ನೇ ಬದಲಾಯಿಸುವ ಶಕ್ತಿ ಶಿಕ್ಷಕಿಯರಿಗಿದೆ, ನೆರೆ ರಾಜ್ಯದಲ್ಲಿ ಹಲವು ಕಡೆ ತಾಯಿ ಭುವನೇಶ್ವರಿಯ ದೇವಾಲಯವಿದೆ, ಕನ್ನಡ ಭಾಷೆಗೆ ಅತಿ ಹೆಚ್ಚು ಮಾತನಾಡುವ ನಾವುಗಳು ಭುವನೇಶ್ವರಿಗೆ ಹೆಚ್ಚು ಮಂದಿರವನ್ನು ಕಟ್ಟಿಲ್ಲ, ಆದರೆ ಕರ್ನಾಟಕದ ಸಿದ್ದಾಪುರದ ಭುವನಗಿರಿಯಲ್ಲಿ ಮಾತ್ರ ಭುವನೇಶ್ವರಿ ದೇವಸ್ಥಾನವಿದೆ, ಕರ್ನಾಟದ ಇತಿಹಾಸ ಕುರಿತು ವಿವರಣೆ ಕೊಡುತ್ತಿದ್ದಂತೆ ಸಮಯವಾಗುತ್ತಿದೆ ಎಂಬ ವಿಚಾರ ತಿಳಿದ ಕೂಡಲೆ ಅವರು ಕ್ಷಮೆಯಾಚಿಸಿ ಅರ್ಧಕ್ಕೆ ಭಾಷಣೆ ನಿಲ್ಲಿಸಿದರು, ಇದರಿಂದ ಕೊಂಚ ವೇದಿಕೆಯಲ್ಲಿದ್ದವರು ಅವರಿಗೆ ಇನ್ನೊಷ್ಟು ಸಮಯ ಕೊಡಬೇಕಿತ್ತು ಎಂದು ಬೇಸರ ವ್ಯಕ್ತಪಡಿಸಿದರು,

ಕಂಚುಗಲ್ಲು ಬಂಡೇ ಮಠದ ಮಠಾಧ್ಯಕ್ಷ ಮಹಾಲಿಂಗಸ್ವಾಮೀಜಿ ಮಾತನಾಡಿ, ಸರ್ಕಾರ ಬಹುತೇಕ ಸರ್ಕಾರಿ ಶಾಲಾ ಶಿಕ್ಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸದೆ ಖಾಸಗಿ ಶಾಲೆಗೆ ಸೇರಿಸುತ್ತಿದ್ದಾರೆ, ಏಕೆಂದರೆ ಅವರಿಗೆ ತಮ್ಮ ಶಾಲೆಯಲ್ಲಿ ನಡೆಯುವ ಪಾಠ ಪ್ರವಚನಗಳ ಮೇಲೆ ನಂಬಿಕೆಯಿಲ್ಲ,ಕನ್ನಡ ಶಾಲೆಗಳನ್ನು ಮುಚ್ಚುವುದಿಲ್ಲ ಎಂದು ಕಾನೂನು ಜಾರಿಗೊಳಿಸಿ ಘೋಷಣೆ ಮಾಡಬೇಕೆಂದು ಆಗ್ರಹಿಸಿದ ಅವರು, ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಉಳಿಸಲು ಜನರು ಜಾಗೃತರಾಗಬೇಕು, ಇಂಥ ಸಮ್ಮೇಳನಗಳು ಆಗಾಗ್ಗೆ ನಡೆಯುತ್ತಿರಬೇಕೆಂದರು,

ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರ ಪರವಾಗಿ ಪುತ್ರ ಉಮೇಶ್ ಮಾತನಾಡಿ, ಇಡೀವಿಶ್ವವೇ ದಾಖಲೆಯಾಗಿರುವ ಸಾಲುಮರದ ತಿಮ್ಮಕ್ಕ ಅವರನ್ನು ಗುರುತಿಸಿ ಪರಿಸರ ಕುರಿತು ಆಧ್ಯಾಯಕ್ಕಾಗಿ ಬರುತ್ತಾರೆ, ಆದರೆ ಮಾಗಡಿಯ ಹುಲ್ಲಿಕಲ್‌ನಲ್ಲಿರುವ ತಿಮ್ಮಕ್ಕ ಅವರ ಮನೆ ವಾಸಿಲು ಯೋಗ್ಯವಿಲ್ಲ, ಶಿಥಿಲವಾಗಿದೆ, ಸರ್ಕಾರ ಮನೆಯನ್ನು ದುರಸ್ಥಪಡಿಸಿಕೊಡಬೇಕು, ಸಾಲುಮರದ ತಿಮ್ಮಕ್ಕ ಹಾಕಿರುವ ಮರಗಳ ಸಂರಕ್ಷಣೆ ಮಾಡಬೇಕು ಎಂದು ಶಾಸಕರಲ್ಲಿ ಮನವಿ ಮಾಡಿದರು,

ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಬಿ,ಟಿ,ನಾಗೇಶ್ ಮಾತನಾಡಿ, ನಮ್ಮ ಕನ್ನಡ ಸಾಹಿತ್ಯ ಪರಿಷತ್ ಮುಂದಿನ ತಲೆಮಾರಿಗೆ ಕನ್ನಡ ಸಾಹಿತ್ಯವನ್ನು ಕೊಂಡೊಯ್ಯುವ ಕೆಲಸ ಮಾಡಿಕೊಂಡು ಬರುತ್ತಿದೆ, ಸಮ್ಮೇಳಾಧ್ಯಕ್ಷರ ಆಯ್ಕೆ ವಿಚಾರವಾಗಿಯೂ ಕಸಪಾ ಅಧ್ಯಕ್ಷ ಪದ್ಮನಾಭ್ ಅವರು 48 ಪುಸ್ತಕ ರಚಿಸಿರುವ ಹಾನಗಲ್ ಗಂಗೂಬಾಯಿ ವಿವಿ ಕುಲಸಚಿವರಾದ ಡಾ,ಮಂಜುನಾಥ್ ಅವರನ್ನು ಆಯ್ಕೆ ಮಾಡಿರುವುದು ಪ್ರಶಂಸನೀಯ, ಸಾಹಿತಿಗಳು, ಶಾಸಕರ ಕೈಜೋಡಿಸಿ ಕನ್ನಡದ ತೇರು ಎಳೆಯುವ ಮೂಲಕ ಈ ಸಮ್ಮೇಳನದ ಯಶಸ್ವಿಗೆ ಶ್ರಮಿಸಿದ್ದಾರೆ ಎಂದರು,

ತಾಲೂಕು ಕಸಾಪ ಅಧ್ಯಕ್ಷ ತಿ,ನಾ,ಪದ್ಮನಾಭ್ ತಾಲೂಕಿನ ಮಹಾನೀಯರನ್ನು ಸ್ಮರಿಸಿ ಕನ್ನಡದ ತೇರು ಎಲ್ಲರೂ ಸೇರಿ ಎಳೆದು ಜನಜಾಗೃತಿ ಗೊಳಿಸುವ ಮೂಲಕ ಅತ್ಯಂತ ಯಶಸ್ವಿಗೆ ಕಾರಣರಾಗಿದ್ದೀರಿ ಎಂದು ವೇದಿಕೆಯಲ್ಲಿದ್ದ ಮಹಾನೀಯರನ್ನು ಗೌರವಿಸಿದರು,

ಸಮ್ಮೇಳಾಧ್ಯಕ್ಷ ಮೆರವಣಿಗೆ; ಮಾದಿಗೊಂಡನಹಳ್ಳಿ ಅಂಬೇಡ್ಕರ್ ಶಾಲೆಯ ಮುಂಭಾಗ ಸಮ್ಮೇಳಾಧ್ಯಕ್ಷ ಡಾ, ಎಂ,ಜಿ,ಮಂಜುನಾಥ್ ಅವರನ್ನು ಬೆಳ್ಳಿ ರಥದಲ್ಲಿ ಕೂರಿಸಿ ಕುದೂರಿನ ಜಂಡೇವಾದ್ಯ, ವಿವಿಧ ಶಾಲಾ ಮಕ್ಕಳ ಪಥಸಂಚಲನ, ಕವಾಯತ್,ಸಾಂಸ್ಕೃತಿಕ ಕಲಾತಂಡದೊಂದಿಗೆ ಸುಮಾರು 1 ಕಿ,ಮೀ ಗುಡ್ಡದ ರಂಗನಾಥಸ್ವಾಮಿ ಸನ್ನಿದಿಯ ಸಮ್ಮೇಳದ ಸಭಾಂಗಣದವರೆಗೆ ಮೆರವಣೆಯಲ್ಲಿ ಕರೆತರಲಾಯಿತು, ಬಿಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಎಚ್,ಎನ್,ಅಶೋಕ್ ಮತ್ತು ತಹಶೀಲ್ದಾರ್ ಡಿ,ಪಿ,ಕುಮಾರ್ ಮೆರವಣಿಗೆಗೆ ಚಾಲನೆ ನೀಡಿದರು,

ಪುಸ್ತಕಮಳಿಗೆ; ಸಮ್ಮೇಳನದ ಆವರಣದಲ್ಲಿ ಪುಸ್ತಕ ಮಳಿಗೆ ತೆರೆಯಲಾಗಿತ್ತು, ಮಾಜಿ ಸಚಿವ ಎಚ್,ಎಂ,ರೇವಣ್ಣ ಪುಸ್ತಕ ಖರೀದಿಸುವ ಮೂಲಕ ಚಾಲನೆ ನೀಡಿದರು,

ಸನ್ಮಾನ ; ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿರುವ ಸಾಧಕರನ್ನು ಪರಿಷತ್ ವತಿಯಿಂದ ಸನ್ಮಾನಿಸಲಾಯಿತು, ಕವಿಗಳಿಂದ ಕವಿಗೋಷ್ಠಿ ನಡೆಯಿತು, ಸಾಲು ಮರದ ತಿಮ್ಮಕ್ಕ, ಜಿ,ಪಂ, ಮಾಜಿ ಅಧ್ಯಕ್ಷ ಎಂ,ಕೆ,ಧನಂಜಯ, ನಿವೃತ್ತ ಪ್ರಾಂಶುಪಾಲ ಡಾ, ನಂಜುಂಡಯ್ಯ, ಪ್ರತಿಭಾ ಕೇಂದ್ರದ ಅಧ್ಯಕ್ಷ ಪಾನ್ಯಂ ನಟರಾಜ್, ಜಿಲ್ಲಾಧ್ಯಕ್ಷ ಬಿಟಿ,ನಾಗೇಶ್, ಎಂ,ಕೆ,ಧನ 'ಂಜಯ,ಕೆ,ಕೃಷ್ಣಮೂರ್ತಿ, ತಾಲೂಕು ಗ್ಯಾರಂಟಿ ಸಮಿತಿ ಅಧ್ಯಕ್ಷ ಕಲ್ಕೆರೆ ಶಿವಣ್ಣ, ಕೆ,ಕೃಷ್ಣಮೂರ್ತಿ, ಶೈಲಜಾ ಆರ್,ವೆಂಕಟೇಶ್, ಯುವ ಕಾಂಗ್ರೆಸ್ ರಾಜ್ಯ ಕಾರ್ಯದರ್ಶಿ ಶಶಾಂಕ್ ರೇವಣ್ಣ, ತಹಶೀಲ್ದಾರ್ ಶರತ್‌ಕುಮಾರ್, ತಾಪಂ ಇಓ ಜಯಪಾಲ್, ಬಿಇಓ ಚಂದ್ರಶೇಖರಯ್ಯ, ಆರೋಗ್ಯಾಧಿಕಾರಿ ಡಾ,ಎಂ,ಸಿ ಚಂದ್ರಶೇಖರಯ್ಯ, ಡಾ,ಸತೀಶ್ ಇತರರು ಇದ್ದರು, ಕನ್ನಡ ಮನಸ್ಸುಗಳನ್ನು ಬೆಸೆಯುವ ಕೆಲಸ ಮಾಡಲಾಗುತ್ತಿದೆ.



# ಟೀಮ್ ಇಂಡಿಯಾ ವಿರುದ್ಧ ನ್ಯೂಝಿಲೆಂಡ್ ಗೆಲ್ಲಲಿ

ಚಾಂಪಿಯನ್ಸ್ ಟ್ರೋಫಿಯ ಅಂತಿಮ ಹಂತದ ಪಂದ್ಯಕ್ಕೆ ವೇದಿಕೆ ಸಿದ್ಧವಾಗಿದೆ. ಭಾನುವಾರ (ಮಾ.9) ದುಬೈನ ಇಂಟರ್‌ನ್ಯಾಷನಲ್ ಸ್ಟೇಡಿಯಂನಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಭಾರತ ಮತ್ತು ನ್ಯೂಝಿಲೆಂಡ್ ತಂಡಗಳು ಮುಖಾಮುಖಿಯಾಗಲಿದೆ. ಈ ಪಂದ್ಯದಲ್ಲಿ ಟೀಮ್ ಇಂಡಿಯಾವನ್ನು ಬಗ್ಗು ಬಡಿದು ಕಿವೀಸ್ ಪಡೆ ಟ್ರೋಫಿ ಎತ್ತಿ ಹಿಡಿಯಲಿ ಎಂದಿದ್ದಾರೆ ಸೌತ್ ಆಫ್ರಿಕಾ ಆಟಗಾರ ಡೇವಿಡ್ ಮಿಲ್ಲರ್. ಈ ಬಾರಿಯ ಚಾಂಪಿಯನ್ಸ್ ಟ್ರೋಫಿಯನ್ನು ಹೈಬ್ರಿಡ್ ಮಾದರಿಯಲ್ಲಿ ಆಯೋಜಿಸಲಾಗಿದೆ. ಅದರಂತೆ ಭಾರತ ತಂಡ ದುಬೈನಲ್ಲಿ ಪಂದ್ಯವಾಡಿದರೆ, ಉಳಿದ ತಂಡಗಳು ಪಾಕಿಸ್ತಾನದಲ್ಲಿ ಬಹುತೇಕ ಮ್ಯಾಚ್‌ಗಳನ್ನು ಆಡಿತ್ತು. ಆದರೆ ಮೊದಲ ಸೆಮಿಫೈನಲ್‌ಗೂ ಮುನ್ನ ಆಸ್ಟ್ರೇಲಿಯಾ ಹಾಗೂ ಸೌತ್ ಆಫ್ರಿಕಾ ತಂಡಗಳು ದುಬೈಗೆ ಪ್ರಯಾಣ ಬೆಳೆಸಿತ್ತು.ಏಕೆಂದರೆ ಕೊನೆಯ ಲೀಗ್ ಪಂದ್ಯದಲ್ಲಿ ನ್ಯೂಝಿಲೆಂಡ್ ತಂಡ ಗೆದ್ದರೆ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಸೌತ್ ಆಫ್ರಿಕಾ ಮತ್ತು ಭಾರತ ಮುಖಾಮುಖಿಯಾಗಬೇಕಿತ್ತು. ಹೀಗಾಗಿ ಪ್ರಯಾಣದ ಸಮಯವನ್ನು ಸರಿದೂಗಿಸಲು ಮೊದಲೇ ಆಸ್ಟ್ರೇಲಿಯಾ ಮತ್ತು ಸೌತ್ ಆಫ್ರಿಕಾ ತಂಡವನ್ನು ದುಬೈಗೆ ಕರೆಸಲಾಗಿತ್ತು. ಆದರೆ ಮಾರ್ಚ್ 2 ರಂದು ನಡೆದ ಕೊನೆಯ ಲೀಗ್ ಪಂದ್ಯದಲ್ಲಿ ನ್ಯೂಝಿಲೆಂಡ್ ವಿರುದ್ಧ ಭಾರತ ತಂಡ ಗೆದ್ದಿದೆ. ಹೀಗಾಗಿ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಮುಖಾಮುಖಿಯಾಗಿದ್ದವು.

ಇತ್ತ ದುಬೈಗೆ ತೆರಳಿದ್ದ ಸೌತ್ ಆಫ್ರಿಕಾ ತಂಡವು ಎರಡನೇ ಸೆಮಿಫೈನಲ್ ಆಡಲು ಮತ್ತೆ ಲಾಹೋರ್‌ಗೆ ಮರಳಿತ್ತು. ಐಸಿಸಿಯ ಈ ನಡೆಯ ವಿರುದ್ಧ ಅಸಮಾಧಾನ ಹೊರಹಾಕಿರುವ ಡೇವಿಡ್ ಮಿಲ್ಲರ್, ಇದು ಅದರ್ಶವಲ್ಲದ ಪರಿಸ್ಥಿತಿ ಎಂದು ಟೀಕಿಸಿದ್ದಾರೆ. ಇದು ಕೇವಲ 1 ಗಂಟೆ 40 ನಿಮಿಷಗಳ ಪ್ರಯಾಣ ಎಂದೆನಿಸಬಹುದು. ಆದರೆ ನಾವು ಹಾಗೆ ಮಾಡಬೇಕಾಗಿ ಬಂದಿದ್ದು ಸರಿಯಾದ ಕ್ರಮವಲ್ಲ. ನಾವು ಮುಂಜಾನೆ, ಒಂದು ಪಂದ್ಯದ ನಂತರ ವಿಮಾನದಲ್ಲಿ ಹಾರಬೇಕಾಯಿತು. ನಂತರ ನಾವು ಸಂಜೆ 4 ಗಂಟೆಗೆ ದುಬೈಗೆ ತಲುಪಿದೆವು. ಅಷ್ಟೇ ಅಲ್ಲದೆ ಬೆಳಿಗ್ಗೆ 7.30 ಕ್ಕೆ ನಾವು ಹಿಂತಿರುಗಬೇಕಾಯಿತು.

ಇಂತಹ ಕ್ರಮಗಳು ಒಳ್ಳೆಯದಲ್ಲ. ನಾವು ಐದು ಗಂಟೆಗಳ ಕಾಲ ವಿಮಾನ ಹಾರಾಟ ನಡೆಸಿದ್ದೇವೆ. ಇದರಿಂದ ಚೇತರಿಸಿಕೊಳ್ಳಲು ನಮಗೆ ಸಾಕಷ್ಟು ಸಮಯ ಸಿಕ್ಕಿದೆ ಎಂದರ್ಥವಲ್ಲ. ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾವು ಸೆಮಿಫೈನಲ್ ಆಡುವಂತಹ ಸೂಕ್ತ ಪರಿಸ್ಥಿತಿಯಲ್ಲಿರಲಿಲ್ಲ ಎಂದು ಡೇವಿಡ್ ಮಿಲ್ಲರ್ ಹೇಳಿದ್ದಾರೆ.

ಇದೇ ವೇಳೆ ಫೈನಲ್ ಪಂದ್ಯದ ಬಗ್ಗೆಯೂ ಮಾತನಾಡಿದ ಡೇವಿಡ್ ಮಿಲ್ಲರ್, ಪ್ರಮಾಣಿಕವಾಗಿ ಹೇಳುತ್ತಿದ್ದೇನೆ. ನಾನಂತು ನ್ಯೂಝಿಲೆಂಡ್ ತಂಡವನ್ನು ಬೆಂಬಲಿಸುತ್ತೇನೆ. ಅವರು ಟ್ರೋಫಿ ಎತ್ತಿ ಹಿಡಿಯಲಿ ಎಂದು ಬಯಸುತ್ತೇನೆ ಎಂದಿದ್ದಾರೆ. ಈ ಮೂಲಕ ನನ್ನ ಸಂಪೂರ್ಣ ಬೆಂಬಲ ಕಿವೀಸ್ ಪಡೆಗೆ ಎಂದು ಬಹಿರಂಗವಾಗಿ ಹೇಳಿದ್ದಾರೆ.

ಡೇವಿಡ್ ಮಿಲ್ಲರ್ ಅವರ ಈ ಬಹಿರಂಗ ಹೇಳಿಕೆಯು ಇದೀಗ ಟೀಮ್ ಇಂಡಿಯಾ ಅಭಿಮಾನಿಗಳ ಕಣ್ಣು ಕೆಂಪಾಗಿಸಿದೆ. ಅದರಲ್ಲೂ ಸೌತ್ ಆಫ್ರಿಕಾ ತಂಡವನ್ನು ದುಬೈ ಕರೆಸಿಕೊಂಡಿರುವ ಐಸಿಸಿ ಕ್ರಮದ ಸಿಟ್ಟನ್ನು ಮಿಲ್ಲರ್ ಟೀಮ್ ಇಂಡಿಯಾ ಮೇಲೆ ತೀರಿಸಿಕೊಳ್ಳುತ್ತಿದ್ದಾರೆ ಎಂದು ಅನೇಕರು ಸೋಷಿಯಲ್ ಮೀಡಿಯಾದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಒಟ್ಟಿನಲ್ಲಿ ಡೇವಿಡ್ ಮಿಲ್ಲರ್ ಅವರ ಬಯಕೆಯಂತೆ ಭಾನುವಾರ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿಯ ಫೈನಲ್ ಪಂದ್ಯದಲ್ಲಿ ನ್ಯೂಝಿಲೆಂಡ್ ಗೆಲ್ಲಲಿದೆಯಾ ಅಥವಾ ಟೀಮ್ ಇಂಡಿಯಾ ಟ್ರೋಫಿ ಎತ್ತಿ ಹಿಡಿಯಲಿದೆಯಾ ಕಾದು ನೋಡಬೇಕಿದೆ.

# ನೀ ನಿನ್ ಕೆಲ್ಸ ನೋಡ್ಕೊ... ಹರ್ಮನ್‌ಪ್ರೀತ್ ಕೌರ್ ಆವಾಜ್



ವುಮೆನ್ಸ್ ಪ್ರೀಮಿಯರ್ ಲೀಗ್‌ನ 16ನೇ ಪಂದ್ಯದಲ್ಲಿ ಆಟಗಾರ್ತಿಯರಿಬ್ಬರು ಮೈದಾನದಲ್ಲೇ ಬೈದಾಡಿಕೊಂಡ ಘಟನೆ ನಡೆದಿದೆ. ಲಕ್ನೋನ ಏಕಾನ ಸ್ಟೇಡಿಯಂನಲ್ಲಿ ನಡೆದ ಈ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ಹಾಗೂ ಯುಪಿ ವಾರಿಯರ್ಸ್ ತಂಡಗಳು ಮುಖಾಮುಖಿಯಾಗಿದ್ದವು. ಈ ಪಂದ್ಯದಲ್ಲಿ ಟಾಸ್ ಗೆದ್ದ ಮುಂಬೈ ಇಂಡಿಯನ್ಸ್ ಬೌಲಿಂಗ್ ಆಯ್ದುಕೊಂಡಿತು.

ಅದರಂತೆ ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ ತಂಡವು 19 ಓವರ್‌ಗಳಲ್ಲಿ 143 ರನ್ ಕಲೆಹಾಕಿತ್ತು. ಆದರೆ ನಿಗದಿತ ಸಮಯದೊಳಗೆ 19 ಓವರ್‌ಗಳನ್ನು ಪೂರ್ಣಗೊಳಿಸದ ಕಾರಣ ಕೊನೆಯ ಓವರ್‌ಗೂ ಮುನ್ನ ಬೌಂಡರಿ ಲೈನ್‌ನಿಂದ ಓರ್ವ ಫೀಲ್ಡರ್‌ನನ್ನು ಕಡಿತಗೊಳಿಸಬೇಕೆಂದು ಅಂಪೈರ್ ಸೂಚಿಸಿದ್ದರು.

ಇದೇ ವೇಳೆ ಮುಂಬೈ ಇಂಡಿಯನ್ಸ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಅಮೆಲಿಯಾ ಕೇರ್ ಅಂಪೈರ್ ಜೊತೆ ವಾದಕ್ಕಿಳಿದಿದ್ದಾರೆ. ಈ ಸಂದರ್ಭದಲ್ಲಿ ಯುಪಿ ವಾರಿಯರ್ಸ್ ತಂಡದ ಆಟಗಾರ್ತಿ ಸೋಫಿ ಎಕ್ಲೆಸ್ಟೋನ್ ಮುಂಬೈ ಇಂಡಿಯನ್ಸ್ ತಂಡದ ನಾಯಕಿಯನ್ನು ಗುರಿಯಾಗಿಸಿ ಅಂಪೈರ್ ಜೊತೆ ಅದೇನೋ ಹೇಳಿದ್ದಾರೆ.

ಇದರಿಂದ ಕುಪಿತಗೊಂಡ ಹರ್ಮನ್‌ಪ್ರೀತ್ ಕೌರ್ ನೀನು ಹೋಗಿ ನಿನ್ ಕೆಲಸ ನೋಡು ಎಂಬಾರ್ಥದಲ್ಲಿ ಆಜ್ಞೆ ಮಾಡಿದ್ದಾರೆ. ಈ ವೇಳೆ ಇಬ್ಬರ ನಡುವೆ ವಾಕ್ಸಮರ ಏರ್ಪಟ್ಟಿದ್ದು, ಅಷ್ಟರಲ್ಲೇ ಅಂಪೈರ್ ಹಾಗೂ ಸಹ ಆಟಗಾರ್ತಿಯರು ಮಧ್ಯ ಪ್ರವೇಶಿಸಿ ಪರಿಸ್ಥಿತಿ ತಿಳಿಸಿದ್ದಾರೆ. ಇದೀಗ ಹರ್ಮನ್‌ಪ್ರೀತ್ ಕೌರ್ ಹಾಗೂ ಸೋಫಿ ಎಕ್ಲೆಸ್ಟೋನ್ ನಡುವಣ ಜಗಳದ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿದೆ.

ಇನ್ನು ಈ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಯುಪಿ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 150 ರನ್ ಕಲೆಹಾಕಿತು. ಈ ಗುರಿಯನ್ನು ಮುಂಬೈ ಇಂಡಿಯನ್ಸ್ ತಂಡ 18.3 ಓವರ್‌ಗಳಲ್ಲಿ ಚೇಸ್ ಮಾಡಿ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ.



# ವಿವಾಹ ಆಗದೆ ಗರ್ಭ ಧರಿಸಿದ್ದ ಕುಬ್ರಾ

'ಸೇಕ್ರೆಡ್ ಗೇಮ್ಸ್' ಖ್ಯಾತಿಯ ನಟಿ ಕುಬ್ರಾ ಸೇತ್ ಆಗಾಗ ಸುದ್ದಿ ಆಗುತ್ತಾರೆ. ಕುಬ್ರಾ ತಮ್ಮ ಜೀವನದ ಬಗ್ಗೆ ಒಂದು ಪುಸ್ತಕವನ್ನೂ ಬರೆದಿದ್ದಾರೆ. ಇದನ್ನು 'ಓಪನ್ ಬುಕ್' ಎಂದು ಕರೆಯಲಾಗುತ್ತದೆ ಮತ್ತು ಅದರಲ್ಲಿ ಕುಬ್ರಾ ತಮ್ಮ ಖಾಸಗಿ ಜೀವನದ ಬಗ್ಗೆ ದೊಡ್ಡ ಬಹಿರಂಗಪಡಿಸುವಿಕೆಯನ್ನು ಮಾಡಿದ್ದಾರೆ.

2013ರಲ್ಲಿ ಒನ್ ನೈಟ್ ಸ್ಟ್ಯಾಂಡ್ ಬಳಿಕ ತಾವು ಗರ್ಭಿಣಿಯಾದೆ ಎಂದು ಕುಬ್ರಾ ಪುಸ್ತಕದಲ್ಲಿ ಬಹಿರಂಗಪಡಿಸಿದ್ದಾರೆ. ಯಾರಿಗೂ ತಿಳಿಯದಂತೆ ಅವರು ರಹಸ್ಯವಾಗಿ ಗರ್ಭಪಾತವನ್ನೂ ಮಾಡಿಸಿಕೊಂಡರು.

ಸುಮಾರು 12 ವರ್ಷಗಳ ನಂತರ, ಕುಬ್ರಾ ಈ ಘಟನೆಯ ಬಗ್ಗೆ ಮುಕ್ತವಾಗಿ ಮಾತನಾಡಿದ್ದಾರೆ.

ಇತ್ತೀಚಿನ ಸಂದರ್ಶನವೊಂದರಲ್ಲಿ, ಕುಬ್ರಾ ಗರ್ಭಪಾತ ಮಾಡಲು ಏಕೆ ನಿರ್ಧರಿಸಿದರು ಮತ್ತು ಆ ಸಮಯದಲ್ಲಿ ಅವರ ಮಾನಸಿಕ ಸ್ಥಿತಿ ಹೇಗಿತ್ತು ಎಂಬುದರ ಕುರಿತು ಮಾತನಾಡಿದ್ದಾರೆ.

'ಬಾಲಿವುಡ್ ಬಬಲ್'ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಕುಬ್ರಾ. 'ನಾನು ಗರ್ಭಪಾತ ಮಾಡಲು ನಿರ್ಧರಿಸಿದಾಗ, ಆ ಕಷ್ಟದ ಸಮಯವನ್ನು ಎದುರಿಸುವಾಗ ನಾನು ಮಾನಸಿಕವಾಗಿ ಸ್ಥಿರವಾಗಿರಲಿಲ್ಲ. ಆ ಸಮಯದಲ್ಲಿ ನಾನು ತುಂಬಾ ಸೂಕ್ಷ್ಮ ಮತ್ತು ದುರ್ಬಲನಾಗಿದ್ದೆ.

ಗರ್ಭಪಾತ ಮಾಡಿಸಿಕೊಳ್ಳದಿದ್ದರೆ ಆ ಮಗುವಿನೊಂದಿಗೆ ಬದುಕುವ ಧೈರ್ಯ ನನಗಿರಲಿಲ್ಲ. ಅದು ನನ್ನ ಮನಸ್ಸಿನ ಮೇಲೆ ಬಹಳ ಪ್ರಭಾವ ಬೀರಿತು. ನಾನು ತುಂಬಾ ನಕಾರಾತ್ಮಕವಾಗಿದ್ದೆ. ಆ ಸಮಯದಲ್ಲಿ, ನಾನು ಇದಕ್ಕೆ ಅರ್ಹನಲ್ಲ ಎಂದು ನನಗೆ ಅನಿಸಿತು. ನಂತರ ನಾನು ತೆಗೆದುಕೊಂಡ ನಿರ್ಧಾರ ನನಗಾಗಿ ಎಂದು ಅರಿತುಕೊಂಡೆ. ಆ ನಿರ್ಧಾರಕ್ಕೆ ಬದ್ಧನಾಗಿರುವುದು ಬಹಳ ಮುಖ್ಯವಾಗಿತ್ತು' ಎಂದಿದ್ದಾರೆ ಅವರು.

'ನನ್ನ ಗರ್ಭಧಾರಣೆಯ ಬಗ್ಗೆ ಯಾರಿಗೂ ತಿಳಿದಿರಲಿಲ್ಲ. ನಾನೇ ಆಸ್ಪತ್ರೆಗೆ ಹೋಗಿ ಗರ್ಭಪಾತ ಮಾಡಿಸಿಕೊಂಡೆ. ಯಾರಿಗೂ ಆ ಬಗ್ಗೆ ಮಾಹಿತಿ ಕೂಡ ನೀಡಿರಲಿಲ್ಲ. ಎರಡು ಮೂರು ವಾರಗಳಿಂದ ನಾನು ತುಂಬಾ ಯೋಚಿಸುತ್ತಿದ್ದೆ. ನಂತರ ನಾನು ಕಾಫಿ ಅಂಗಡಿಯಲ್ಲಿ ಒಬ್ಬ ಸ್ನೇಹಿತನನ್ನು ಭೇಟಿಯಾದೆ.

ನಾನು ಗರ್ಭಪಾತ ಮಾಡಿಸಿಕೊಳ್ಳಬೇಕೆಂದು ಅವಳಿಗೆ ಹೇಳಿದೆ. ಆಗ ಅವಳು ಆಘಾತಕ್ಕೊಳಗಾದಳು. ನಾನು ಇದರ ಬಗ್ಗೆ ಯಾರಿಗೂ ಹೇಳಿಲ್ಲ ಅರಿತುಕೊಂಡಾಗ ನಾನು ಇದ್ದಕ್ಕಿದ್ದಂತೆ ಅಳಲು ಪ್ರಾರಂಭಿಸಿದೆ. ನಾನು ಏನು ಅನುಭವಿಸುತ್ತಿದ್ದೇನೆಂದು ಯಾರಿಗೂ ತಿಳಿದಿರಲಿಲ್ಲ' ಎಂದಿದ್ದಾರೆ ಅವರು.

# ಬಾಲಿವುಡ್‌ನ ಕರಾಳ ಮುಖ ತೆರೆದಿಟ್ಟ: ಎರಿಕಾ



ಪುನೀತ್ ರಾಜ್‌ಕುಮಾರ್ ನಟನೆಯ 'ನಿನ್ನಿಂದಲೆ' ಸಿನಿಮಾ ಹಲವರಿಗೆ ನೆನಪರಬೇಕು, ಹೊಂಬಾಳೆ ಫಿಲಮ್ಸ್ ನಿರ್ಮಿಸಿದ ಮೊದಲ ಸಿನಿಮಾ ಅದು. ಆ ಸಿನಿಮಾದ ಮೂಲಕ ಎರಿಕಾ ಫರ್ನಾಂಡೀಸ್ ಹೆಸರಿನ ಬಾಲಿವುಡ್ ಬೆಡಗಿ ಕನ್ನಡ ಚಿತ್ರರಂಗಕ್ಕೆ ಪರಿಚಯವಾಗಿದ್ದರು. ಸಿನಿಮಾ ಅನ್ನು ಅದ್ಧೂರಿಯಾಗಿ ಮಾಡಲಾಗಿತ್ತು,

ಎರಿಕಾ ಸಹ ತಮ್ಮ ಅಂದ ಮತ್ತು ನಟನೆಯಿಂದ ಗಮನ ಸೆಳೆದಿದ್ದರು. ಆದರೆ ಆ ಸಿನಿಮಾ ನಿರೀಕ್ಷಿತ ಮಟ್ಟದಲ್ಲಿ ಪ್ರದರ್ಶನ ಕಾಣಲಿಲ್ಲ. ಎರಿಕಾ ಫರ್ನಾಂಡೀಸ್ ಸಿನಿಮಾ ವೃತ್ತಿ ಜೀವನವೂ ಸಹ ಆ ನಂತರ ನಿರೀಕ್ಷಿತ ವೇಗದಲ್ಲಿ ಪ್ರಗತಿ ಕಾಣಲಿಲ್ಲ. ಇದೀಗ ಮುಂಬೈ ಬಿಟ್ಟು ದುಬೈಗೆ ಶಿಫ್ಟ್ ಆಗಿರುವ ಎರಿಕಾ ಫರ್ನಾಂಡೀಸ್, ಬಾಲಿವುಡ್‌ನ ಕರಾಳ ಮುಖವನ್ನು ತೆರೆದಿಟ್ಟಿದ್ದಾರೆ.

ಪಾಡ್‌ಕಾಸ್ಟ್ ಒಂದರಲ್ಲಿ ಮಾತನಾಡಿರುವ ಎರಿಕಾ ಫರ್ನಾಂಡೀಸ್, ಬಾಲಿವುಡ್ ಬಹಳ ಟೊಳ್ಳಾದ ಇಂಡಸ್ಟ್ರಿ, ಬಾಲಿವುಡ್‌ನ ಮೇಲೆ ಮಾಲ ಥಳುಕಿದೆ, ಒಳಗೆ ಇರುವುದೆಲ್ಲ ಹುಳುಕೇ ಎಂದಿದ್ದಾರೆ. ಮುಂದುವರೆದು ಮಾತನಾಡಿರುವ ಎರಿಕಾ, 'ಬಾಲಿವುಡ್‌ನಲ್ಲಿ ಕೊಡು–ಕೊಳ್ಳು ವ್ಯವಹಾರ ಹೆಚ್ಚಾಗಿದೆ' ಎಂದಿದ್ದಾರೆ. ಪರೋಕ್ಷವಾಗಿ ಲೈಂಗಿಕ ಸವಲತ್ತುಗಳನ್ನು ಒದಗಿಸಿದರೆ ಮಾತ್ರವೇ ಅಲ್ಲಿ ಸಿನಿಮಾ ಅವಕಾಶಗಳು ಸಿಗುತ್ತವೆ ಎಂದು ಪರೋಕ್ಷವಾಗಿ ಹೇಳಿದ್ದಾರೆ ಎರಿಕಾ ಫರ್ನಾಂಡೀಸ್.

ಅದೇ ಪಾಡ್‌ಕಾಸ್ಟ್‌ನಲ್ಲಿ ಬಾಲಿವುಡ್‌ನ ಕರಾಳ ಮುಖ ತೆರೆದಿಟ್ಟಿರುವ ನಟಿ ಎರಿಕಾ, 'ನಾನು ಕೇಳಿರುವಂತೆ, ಬಾಲಿವುಡ್ ನಲ್ಲಿ ಕೆಲವು ವಾಟ್ಸ್‌ಆಫ್ ಗ್ರೂಫ್‌ಗಳಿವೆ. ಆ ಗ್ರೂಪ್‌ಗಳಲ್ಲಿ ಅವರು ತಾವು ಯಾರು ಯಾರೊಂದಿಗೆ ಲೈಂಗಿಕ ಸುಖ ಅನುಭವಿಸಿದ್ದೀವಿ, ಯಾರೊಂದಿಗೆ ಅನುಭವಿಸಬೇಕು? ಯಾರು ಸುಲಭವಾಗಿ ಲೈಂಗಿಕತೆಗೆ ಒಪ್ಪುತ್ತಾರೆ, ಯಾರು ಒಪ್ಪುವುದಿಲ್ಲ ಎಂಬಿತ್ಯಾದಿ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಾರೆ' ಎಂದಿದ್ದಾರೆ ನಟಿ ಎರಿಕಾ. ನಟಿಯ ಈ ಹೇಳಿಕೆಗಳು ಬಾಲಿವುಡ್‌ನ ಬಗ್ಗೆ ಚರ್ಚೆಗಳನ್ನು ಹುಟ್ಟುಹಾಕಿದೆ.

ಅಂದಹಾಗೆ ಟಿವಿ ಧಾರಾವಾಹಿ ನಟಿಯಾಗಿದ್ದ ಎರಿಕಾ, ತಮಿಳಿನ 'ಅನಿತು, ಅನಿತು ಅನಿತು' ಸಿನಿಮಾ ಮೂಲಕ ಸಿನಿಮಾ ನಾಯಕಿಯಾದರು. ಅದಾದ ಕೂಡಲೇ ಪುನೀತ್ ರಾಜ್ ಕುಮಾರ್ ಜೊತೆಗೆ 'ನಿನ್ನಿಂದಲೆ' ಸಿನಿಮಾದಲ್ಲಿ ನಟಿಸಿದರು. ಅದಾದ ಬಳಿಕ ಎರಿಕಾಗೆ ಒಂದರ ಹಿಂದೊಂದರಂತೆ ಅವಕಾಶಗಳು ದೊರೆತವು. ಆದರೆ ಯಾವುದೂ ಸಹ ಹಿಟ್ ಎನಿಸಿಕೊಳ್ಳಲಿಲ್ಲ. 2015 ರಲ್ಲಿ 'ಬುಗುರಿ' ಹೆಸರಿನ ಕನ್ನಡ ಸಿನಿಮಾದಲ್ಲಿ ಸಹ ಎರಿಕಾ ನಟಿಸಿದರು. ಆ ಸಿನಿಮಾ ಸಹ ಹಿಟ್ ಆಗಲಿಲ್ಲ. 2017ರ ಬಳಿಕ ಅವಕಾಶಗಳು ಬರುವುದೇ ನಿಂತು ಹೋದ ಕಾರಣ ಮತ್ತೆ ಟಿವಿ ಲೋಕಕ್ಕೆ ಎಂಟ್ರಿ ನೀಡಿದರು. ಇದೀಗ ಮುಂಬೈನ ರಾಜಕೀಯದಿಂದ ಬೇಸತ್ತು ದುಬೈಗೆ ಶಿಫ್ಟ್ ಆಗಿದ್ದಾರೆ

# 2500ರೂ.ಗೋಸ್ಕರ ಡಾನ್ಸ್



ವಾರಿಸು ನಟಿಯೆಂಬ ಗುರುತಿನೊಂದಿಗೆ ತಮಿಳು ಚಿತ್ರರಂಗಕ್ಕೆ ಕಾಲಿಟ್ಟವರು ನಟಿ ವರಲಕ್ಷ್ಮಿ. ಶರತ್‌ಕುಮಾರ್ ಅವರ ಮಗಳಾದ್ದರಿಂದ, ಇವರಿಗೆ ಅವರ ತಂದೆ ಯಾವುದೇ ಅವಕಾಶವನ್ನು ಕೊಡಿಸಲಿಲ್ಲ. ಆರಂಭದಿಂದಲೂ ತಮ್ಮ ಕಠಿಣ ಪರಿಶ್ರಮದಿಂದ, ಸೋಲುಗಳ ನೋವನ್ನು ದಾಟಿ ಇಂದು ದಕ್ಷಿಣ ಭಾರತೀಯ ಚಿತ್ರರಂಗದಲ್ಲಿ, ಪ್ರತಿಭಾವಂತ ನಟಿ ಎಂದು ವರಲಕ್ಷ್ಮಿ ಶರತ್‌ಕುಮಾರ್ ಸಾಬೀತುಪಡಿಸಿದ್ದಾರೆ.

ಇವರು ನಾಯಕಿಯಾಗಿ ಪರಿಚಯವಾಗಿದ್ದು, ವಿಘ್ನೇಶ್ ಶಿವನ್ ನಿರ್ದೇಶನದಲ್ಲಿ, ಸಿಂಬು ನಾಯಕನಾಗಿ ನಟಿಸಿದ 'ಪೋಡಾ ಪೋಡಿ' ಚಿತ್ರದ ಮೂಲಕ. ಈ ಚಿತ್ರದಲ್ಲಿ ಅವರು ಡಾನ್ಸರ್ ಆಗಿ ನಟಿಸಿದ್ದರು. ಇವರು ನಿರ್ವಹಿಸಿದ ಪಾತ್ರವೂ ಇವರಿಗೆ ಸೂಕ್ತವಾಗಿತ್ತು. ಇದನ್ನು ಮುಂದುವರೆಸಿ, ತಮಿಳಿನಲ್ಲಿ ತಾರೈ ತಪಟ್ಟೈ, ವಿಕ್ರಮ್ ವೇದಾ, ಸಂಡಕೋಳಿ 2, ಸರ್ಕಾರ್, ಮಾರಿ 2, ನೀಯಾ 2, ಕನ್ನಿ ರಾಶಿ, ಮದ ಗಜ ರಾಜ ಎಂದು ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ. ತಮಿಳು ಮಾತ್ರವಲ್ಲದೆ ತೆಲುಗು, ಕನ್ನಡ, ಮಲಯಾಳಂ ಭಾಷೆಗಳಲ್ಲೂ ಹಲವು ಚಿತ್ರಗಳಲ್ಲಿ ನಟಿಸಿದ್ದಾರೆ.

ನಾಯಕಿಯಾಗಿ ಇವರಿಂದ ಮುಂಚೂಣಿಗೆ ಬರಲು ಸಾಧ್ಯವಾಗದಿದ್ದರೂ, ಗುಣಚಿತ್ರ ನಟಿಯಾಗಿಯೂ, ವಿಲನ್ ಪಾತ್ರದಲ್ಲಿಯೂ ಮಿಂಚುತ್ತಿದ್ದಾರೆ. ಪ್ರಸ್ತುತ ನಿರ್ದೇಶಕ ಎಚ್ ವಿನೋತ್ ನಿರ್ದೇಶನದಲ್ಲಿ ದಳಪತಿ ವಿಜಯ್ ನಟನೆಯಲ್ಲಿ ಮೂಡಿಬರುತ್ತಿರುವ ಅವರ ಕೊನೆಯ ಚಿತ್ರ 'ಜನ ನಾಯಕನ್' ಚಿತ್ರದಲ್ಲಿ ನಟಿಸುತ್ತಿದ್ದಾರೆ. ಸರ್ಕಾರ್ ಚಿತ್ರದ ನಂತರ ಈ ಚಿತ್ರದಲ್ಲಿ ವಿಜಯ್ ಜೊತೆ ವರಲಕ್ಷ್ಮಿ ನಟಿಸುತ್ತಿರುವುದು ಗಮನಾರ್ಹ.

ಕಳೆದ ವರ್ಷ ತಮ್ಮ 39ನೇ ವಯಸ್ಸಿನಲ್ಲಿ, ಈಗಾಗಲೇ ಮದುವೆಯಾಗಿ ವಿಚ್ಛೇದನ ಪಡೆದು ಬೇರೆಯಾಗಿದ್ದ ದೀರ್ಘಕಾಲದ ಸ್ನೇಹಿತ ನಿಕೋಲಾಯ್ ಸಚ್ದೇವ್ ಅವರನ್ನು ಮದುವೆಯಾದರು. ಮದುವೆಯ ನಂತರವೂ ಸಿನಿಮಾದಲ್ಲಿ ಒಂದು ಕಡೆ ಗಮನಹರಿಸುತ್ತಾ ಬಂದರೂ, ಹಲವು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಈ ನಡುವೆ ಜೀ ತಮಿಳು ವಾಹಿನಿಯಲ್ಲಿ ಮೂಡಿಬರುತ್ತಿರುವ ಡಾನ್ಸ್ ಜೋಡಿ ಡಾನ್ಸ್ ರಿಯಾಲಿಟಿ ಶೋನಲ್ಲಿ ತೀರ್ಪುಗಾರರಾಗಿ ಭಾಗವಹಿಸಿದ್ದಾರೆ. ಆ ಕಾರ್ಯಕ್ರಮದಲ್ಲಿ 25 ವರ್ಷ ವಯಸ್ಸಿನ, 3 ಮಕ್ಕಳಿಗೆ ತಾಯಿಯಾದ ಸ್ಪರ್ಧಿಯೊಬ್ಬರು ಭಾಗವಹಿಸಿದ್ದರು. ಆಗ ಅವರು, ನನಗೆ ಮ್ಯೂಸಿಕ್ ಕೇಳಿದ ತಕ್ಷಣ ಡಾನ್ಸ್ ತಾನಾಗಿಯೇ ಬರುತ್ತದೆ. ಇದುವರೆಗೂ ನಾನು ರಸ್ತೆಯಲ್ಲೇ ಡಾನ್ಸ್ ಮಾಡಿದ್ದೇನೆ ಎಂದು ಬಹಳ ಭಾವುಕರಾಗಿ ಮಾತನಾಡಿದರು.

ಇದನ್ನು ಕೇಳಿದ ವರಲಕ್ಷ್ಮಿ, ಒಂದು ಸತ್ಯವನ್ನು ಹೇಳುತ್ತೇನೆ. ಇದುವರೆಗೂ ಯಾರ ಬಳಿಯೂ ಹೇಳಿಲ್ಲ. ಇದು ರಿಯಾಲಿಟಿ ಶೋ ಎಂಬುದನ್ನು ಮೀರಿ ಪ್ರತಿಭೆಯನ್ನು ತೋರಿಸುವ ಡಾನ್ಸ್ ಕಾರ್ಯಕ್ರಮ. ಅದಕ್ಕೆ ಈ ರಹಸ್ಯವನ್ನು ಹೇಳುತ್ತೇನೆ. ನಾನು, ಸಿನಿಮಾಗೆ ಬರುವ ಮೊದಲು 2500 ರೂಪಾಯಿಗಳಿಗಾಗಿ ಮೊದಲ ಬಾರಿಗೆ ರಸ್ತೆಯಲ್ಲಿ ಡಾನ್ಸ್ ಮಾಡಿದೆ ಎಂದು ಹೇಳಿದ್ದಾರೆ. ರಸ್ತೆಯಲ್ಲಿ ಆಡುತ್ತೇವೆ ಎಂದು ತಪ್ಪಾಗಿ ತಿಳಿಯಬೇಡಿ. ನಾನು ಪ್ರಾರಂಭಿಸಿದ್ದೇ ರಸ್ತೆಯಲ್ಲಿ ಡಾನ್ಸ್ ಆಡುವುದರ ಮೂಲಕ. ಆದ್ದರಿಂದ ನೀವು ದೊಡ್ಡ ಮಟ್ಟಕ್ಕೆ ಬರುತ್ತೀರಿ ಎಂದು ಅವರಿಗೆ ವರಲಕ್ಷ್ಮಿ ಶರತ್‌ಕುಮಾರ್ ಅವರು ಆತ್ಮವಿಶ್ವಾಸ ತುಂಬುವ ಮಾತುಗಳನ್ನಾಡಿದರು ಎಂಬುದು ಗಮನಾರ್ಹ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobli), Nelamangala, Bengaluru-562123
Email-mussanje2010@gmail.com, Phone: 9448074878